ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 36 | ಆಗಸ್ಟ್ 31–ಸೆಪ್ಟೆಂಬರ್ 6, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com



ತಬ್ಲಿಘಿ ಜಮಾತ್ ಆರೋಪ ಮುಕ್ತ



REJECT NEP

ಹೊಸ ಶಿಕ್ಷಣ ನೀತಿಯಲ್ಲಿ ಎಲ್ಲವೂ ಇದೆ ಆದರೆ ಏನೂ ಇಲ್ಲ





ಸುಪ್ರಿಂ ಕೋರ್ಟಿನಲ್ಲಿ ಕಳವಳಕಾರಿ ಪ್ರವೃತ್ತಿಗಳು



ಶಾಹಿನ್‌ಬಾಗ್ ಮತ್ತು ಬಿಜೆಪಿ ಎಎಪಿ ಹೇಳುತ್ತಿರುವುದೆಲ್ಲ ತಪ್ಪು

ಆಗಸ್ಟ್ ಪ್ರತಿಭಟನಾ ವಾರಾಚರಣೆ

ಜನವಿರೋಧಿ ನಡೆಗಳ ವಿರುದ್ಧ ದೇಶವ್ಯಾಪಿ ಪ್ರತಿಭಟನೆಗಳ ಮಹಾಪೂರ







ಅಭೂತಪೂರ್ವ ನಿರುದ್ಯೋಗದ ನಡುವೆ ರಾಷ್ಟ್ರೀಯ ನೇಮಕಾತಿ ಏಜೆನ್ಸಿ ಎಂಬ ಗಿಮಿಕ್
ಒಂದು ಅರ್ಥಹೀನ, ಅಪ್ರಾಮಾಣಿಕ ಕಸರತ್ತು-ಸಿಪಿಐ(ಎಂ) ಪ್ರತಿಕ್ರಿಯೆ

ಅರ್ಥವ್ಯವಸ್ಥೆ ಹಿಂದೆಂದೂ ಕಾಣದಂತಹ ರೀತಿಯಲ್ಲಿ ಕುಸಿಯುತ್ತಿರುವಾಗ, ಉದ್ಯೋಗ ನಿರ್ಮಾಣದ ಬದಲು ಉದ್ಯೋಗ ನಷ್ಟಗಳೇ ಏರುತ್ತಿರುವಾಗ ಈ ಪರಿಸ್ಥಿತಿಯನ್ನು ಎದುರಿಸಲು, ಅಂದರೆ ಉದ್ಯೋಗ ರಕ್ಷಣೆ ಮತ್ತು ನಿರ್ಮಾಣಕ್ಕೆ ಕ್ರಮಗಳನ್ನು ಯೋಜಿಸುವ ಬದಲು ಮೋದಿ ಸರಕಾರ ರಾಷ್ಟ್ರೀಯ ನೇಮಕಾತಿ ಆಯೋಗ (ನ್ಯಾಷನಲ್ ರಿಕ್ರೂಟ್‌ಮೆಂಟ್ ಏಜೆನ್ಸಿ-ಎನ್‌ಆರ್‌ಎ) ಎಂಬ ಹೊಸದೊಂದು ಸಂಸ್ಥೆಯನ್ನು ರಚಿಸಲಾಗುವುದು ಎಂದು ಪ್ರಕಟಿಸಿದೆ.

ಆದರೆ ಭಾರೀ ಉದ್ಯೋಗನಷ್ಟಗಳ ನಡುವೆ ಇದೊಂದು ಕೇವಲ ಗಿಮಿಕ್ ಎಂದು ಸಿಪಿಐ(ಎಂ) ಹೇಳಿದೆ. ಏಕೆಂದರೆ ಈ ವರ್ಷದ ಎಪ್ರಿಲ್‌ನಿಂದ ಜುಲೈ ಹೊತ್ತಿಗೆ ಉದ್ಯೋಗ ನಷ್ಟದ ಮೊತ್ತ 1.89 ಕೋಟಿ ತಲುಪಿದೆ ಎಂದು ಸಿಎಂಐಇ ವರದಿ

ಇದು ಕೇವಲ ಸಂಬಳದಾರ ಉದ್ಯೋಗಗಳ ಸಂಖ್ಯೆ. ವಾಸ್ತವವಾಗಿ ಇವು ಆರ್ಥಿಕ ಆಘಾತಗಳಿಗೆ ಅಷ್ಟೊಂದು ಪಕ್ಕಾಗುವುದಿಲ್ಲ. ಆದರೆ ಈ ವಲಯದ ಪರಿಸ್ಥಿತಿಯೇ ಹೀಗಾದರೆ ಇನ್ನು ಅನೌಪಚಾರಿಕ ಉದ್ಯೋಗ ವಲಯದ ಪಾಡೇನು ಎಂದು ಪರಿಣಿತರು ಆತಂಕ ಪಡುತ್ತಿದ್ದಾರೆ.

ಇಂತಹ ಸನ್ನಿವೇಶದಲ್ಲಿ ಅರ್ಥವ್ಯವಸ್ಥೆಯ ಪುನರುಜ್ಜೀವನದ ಕ್ರಮಗಳ ಬದಲು ಸರಕಾರ ತನ್ನ ಎಂದಿನ ಆಟಕ್ಕೆ ಇಳಿದಂತೆ ಕಾಣುತ್ತದೆ. ಅಂದರೆ ಜನಗಳ ಗಮನವನ್ನು ನಿಜಸಮಸ್ಯೆಯಿಂದ ಬೇರೆಡೆಗೆ ತಿರುಗಿಸುವುದು. ಈ ಎನ್‌ಆರ್‌ಎ ಅಂತಹುದೇ ಒಂದು ಕ್ರಮ. ಕೇಂದ್ರ ಸರಕಾರದ ಇಲಾಖೆಗಳಲ್ಲಿ ನಾನ್‌ಗಜೆಟೆಡ್ ಹುದ್ದೆಗಳಿಗೆ, ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಮತ್ತು ರೈಲ್ವೆ ಇಲಾಖೆಯಲ್ಲಿ ನೇಮಕಾತಿಯನ್ನು ನೇರ್ಪುಗೊಳಿಸುವ ಹೆಸರಿನಲ್ಲಿ ಈ ಎನ್‌ಆರ್‌ಎ ಯನ್ನು ರಚಿಸಲಾಗಿದೆ. ಇದು ಕೇಂದ್ರ ಸರಕಾರದ ಸಿಬ್ಬಂದಿ ಆಯ್ಕೆ ಆಯೋಗ(ಎಸ್‌ಎಸ್‌ಸಿ),ಬ್ಯಾಂಕ್ ನೇಮಕಾತಿಯ ಐಬಿಪಿ ಎಸ್ ಮತ್ತು ರೈಲ್ವೆ ನೇಮಕಾತಿ ಮಂಡಳಿ (ಆರ್‌ಆರ್‌ಬಿ)ಗಾಗಿ ಸಾಮಾನ್ಯ ಪ್ರವೇಶ ಪರೀಕ್ಷೆ(ಸಿಇಟಿ)ಯನ್ನು ನಡೆಸುತ್ತದೆಯಂತೆ. ಇದುವರೆಗೆ ಕೇಂದ್ರ ಸರಕಾರದ ಇಲಾಖೆಗಳು, ರೈಲ್ವೆ ಮತ್ತು ಬ್ಯಾಂಕುಗಳಲ್ಲಿ ನೋಟಿಫೈ ಆಗಿರುವ ಹುದ್ದೆಗಳು ಮತ್ತು ಬಾಕಿ ಹುದ್ದೆಗಳ ಮಾಹಿತಿ ಪ್ರತ್ಯೇಕವಾಗಿ ಸಾರ್ವಜನಿಕವಾಗಿ ಲಭ್ಯವಾಗಿರುತ್ತಿತ್ತು. ಆದರೆ ಈ ಎನ್‌ಆರ್‌ಎ ನಂತರ ಇಂತಹ ಮಾಹಿತಿಗಳು ಸಿಗುವುದಿಲ್ಲ.

ಇದರಿಂದ, ವಿಶೇಷವಾಗಿ ಅನಾನುಕೂಲಕರ ಪರಿಸ್ಥಿತಿಗಳಲ್ಲಿರುವ ವಿಭಾಗಗಳಿಗೆ ಸುಗಮ ಆಯ್ಕೆ, ಸುಗಮ ನೇಮಕ, ಮತ್ತು ಸುಗಮ ಬದುಕಿಗೆ ಅವಕಾಶವಾಗುತ್ತದೆ ಎಂದು ಈ ಕುರಿತು ಬಹಳಷ್ಟು ಪ್ರಚಾರ ನಡೆಸಲಾಗುತ್ತಿದೆ. ಆದರೆ ಇದು ನಿರುದ್ಯೋಗದ ಕೇಂದ್ರ ಸಮಸ್ಯೆಯನ್ನು, ಅಂದರೆ ಉದ್ಯೋಗ ನಿರ್ಮಾಣದ ಕೇಂದ್ರ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವುದಿಲ್ಲ. ಅದರಲ್ಲಿ ತನ್ನ ವಿಫಲತೆಯನ್ನು ಮುಚ್ಚಿಕೊಳ್ಳಲು ಗಮನವನ್ನು ಬೇರೆಡೆಗೆ ತಿರುಗಿಸುತ್ತದೆ ಎಂಬುದು ಸ್ವಯಂವೇದ್ಯ.

ಫೆಬ್ರುವರಿ 2019ರಲ್ಲಿ ರೈಲ್ವೆ ಗ್ರೂಪ್ ಡಿ ಹುದ್ದೆಗಳಿಗೆ ನೇಮಕಾತಿ ಪ್ರಕಟಿಸಿತು. ಸುಮಾರು ಒಂದು ಕೋಟಿ ಅರ್ಜಿಗಳು ಬಂದವು. ಆದರೆ ನಂತರ ಒಂದೂವರೆ ವರ್ಷವಾದರೂ ಏನೂ ಸುದ್ದಿಯಿಲ್ಲ. ಈ ನಡುವೆ ರೈಲ್ವೆ ಖಾಸಗೀಕರಣದಿಂದಾಗಿ ರೈಲ್ವೆ ಇಲಾಖೆ ತನ್ನ ಹುದ್ದೆಗಳಲ್ಲಿ 50ಶೇ. ಹುದ್ದೆಗಳಿಗೆ ನೇಮಕಾತಿ ಮಾಡುವುದಿಲ್ಲ ಎಂದು ಪ್ರಕಟಿಸಿದೆ. ಸರಕಾರದ ಎನ್‌ಆರ್‌ಎ ಬಡಾಯಿಯ ನಿಜ ಹೂರಣವನ್ನು ಇದು ತೋರಿಸುತ್ತದೆ.

ಎನ್‌ಆರ್‌ಎ ರಚಿಸುವ ಪ್ರಸ್ತಾವ ಬಜೆಟ್‌ನಲ್ಲಿ ಪ್ರಕಟಿಸಲಾಗಿದ್ದರೂ, ಈಗ, ಅಂದರೆ 1.89 ಕೋಟಿ ಉದ್ಯೋಗನಷ್ಟಗಳಾಗಿವೆ ಎಂಬ ಸುದ್ದಿಯ ಸಂದರ್ಭದಲ್ಲಿ ಅದರ ರಚನೆಯ ಅಧಿಸೂಚನೆ ಹೊರಡಿಸಿರುವುದು ಉದ್ಯೋಗ ಒದಗಿಸುವಲ್ಲಿ ತನ್ನ ಸಂಪೂರ್ಣ ವಿಫಲತೆಯನ್ನು ಮರೆಮಾಚಲು ನಡೆಸಿರುವ ಪ್ರಯತ್ನ ಎಂಬುದು ಸ್ಪಷ್ಟ.

ಈಗ ನಿರುದ್ಯೋಗಿ ಯುವಜನರು ಉದ್ಯೋಗ ಕೇಳುತ್ತಿದ್ದಾರೆ, 'ಸುಗಮ ನೇಮಕಾತಿ ಪರೀಕ್ಷೆಗಳನ್ನು' ಅಲ್ಲ.

ಅಲ್ಲದೆ ಭಿನ್ನ ಸ್ವರೂಪಗಳ ಈ ಮೂರು ರೀತಿಯ ಉದ್ಯೋಗಗಳಿಗೆ ನೇಮಕಾತಿಯನ್ನು ಒಂದು ಸಾಮಾನ್ಯ ಪರೀಕ್ಷೆಯಿಂದ ನಿಭಾಯಿಸುವುದು ಹೇಗೆ ಎಂಬುದೂ ತರ್ಕಕ್ಕೆ ಮೀರಿದ ಸಂಗತಿ.

ವಾಸ್ತವವಾಗಿ ಇದೊಂದು ಅರ್ಥಹೀನ, ಅಪ್ರಾಮಾಣಿಕ ಕಸರತ್ತು ಅಷ್ಟೇ.

ಬಿಜೆಪಿ ಮುಖಂಡರ ವಿರುದ್ಧ ಎಫ್‌ಐಆರ್ ಹಾಕಬೇಕೆಂಬ ಅರ್ಜಿ ವಜಾ
ಒಂದು ನ್ಯಾಯಯುತವಲ್ಲದ ನ್ಯಾಯಾಂಗ ಪ್ರಕ್ರಿಯೆ-ಬೃಂದಾ ಕಾರಟ್

ಬಿಜೆಪಿ ಮುಖಂಡರಾದ ಅನುರಾಗ್ ಠಾಕುರ್ ಮತ್ತು ಪರ್ವೇಶ್ ಶರ್ಮ ಜನವರಿಯಲ್ಲಿ ದ್ವೇಷ ಭಾಷಣ ಮಾಡಿದ ಅಪರಾಧಕ್ಕೆ ಸೆಕ್ಷನ್ 153ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ದಿಲ್ಲಿ ಪೋಲೀಸರಿಗೆ ಒಂದು ದೂರನ್ನು ಸಲ್ಲಿಸಿದ್ದರು. ದಿಲ್ಲಿ ಪೋಲೀಸರು ಇದಕ್ಕೆ ಸ್ಪಂಧಿಸಲಿಲ್ಲವಾದ್ದರಿಂದ ಕಾನೂನು ಪ್ರಕಾರ ಸೂಕ್ತ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಲಾಯಿತು.

ನ್ಯಾಯಾಲಯ ದೂರುದಾರರಾಗಿ ಬೃಂದಾ ಅವರ ವಕೀಲರ ಪೂರ್ಣ ವಾದಗಳನ್ನು ಆಲಿಸಿತು. ದಿಲ್ಲಿ ಪೋಲಿಸ್ ದಂಡನಾರ್ಹ ಅಪರಾಧ ಎಂದು ಸಾಬೀತಾಗಿಲ್ಲ ಎಂದು ವಾದಿಸಿದರು. ತೀರ್ಪನ್ನು ಕಾದಿರಿಸಲಾಯಿತು. ಆದರೆ ಇತರರು ಹೈಕೋರ್ಟಿಗೆ ಹೋದದ್ದರಿಂದ ಇದು ವಿಳಂಬವಾಯಿತು. ಹೈಕೋರ್ಟ್ ಈ ಅರ್ಜಿಯನ್ನು ಇತ್ಯರ್ಥ ಮಾಡುವಂತೆ ಮ್ಯಾಜಿಸ್ಟ್ರೇಟ್ ರಿಗೆ ನಿರ್ದೇಶನವಿತ್ತಿತು. ಆದರೆ ಈಗ ಈ ಹಂತದಲ್ಲಿ ನ್ಯಾಯಾಲಯ ಈ ಅರ್ಜಿಯನ್ನು ಸಲ್ಲಿಸಲು ಕೂಡ ಅಪರಾಧ ಸಂಹಿತೆಯ ವಿಭಾಗ 196 ಅಡಿಯಲ್ಲಿ ಪೂರ್ವಾನುಮತಿ ಬೇಕು ಎಂದು ತೀರ್ಪಿತ್ತಿದೆ.

ಇದು ಆಶ್ಚರ್ಯಕಾರಿ ಮತ್ತು ನಿರಾಶಾದಾಯಕ ತೀರ್ಪು ಎಂದು ಬೃಂದಾ ಕಾರಟ್ ಹೇಳಿದ್ದಾರೆ.

ದಿಲ್ಲಿ ಪೋಲೀಸರು ಕೂಡ ಈ ಆಕ್ಷೇಪವನ್ನು ಈ ಹಿಂದೆ ಎತ್ತಿರಲಿಲ್ಲ. ಈ ಅನುಮತಿ ನಿಜವಾಗಿಯೂ ಬೇಕಿದ್ದರೆ ಕೇಸಿನ ವಿಚಾರಣೆಯ ಆರಂಭದಲ್ಲೇ ಇದನ್ನು ಹೇಳದೆ, ಪೂರ್ಣ ವಿಚಾರಣೆಯನ್ನು ನಡೆಸಿದ್ದಾದರೂ ಏಕೆ? ಎಂದು ಪ್ರಶ್ನಿಸಿರುವ ಬೃಂದಾ ಕಾರಟ್ ಇದೊಂದು ಅನ್ಯಾಯಯುತ ನ್ಯಾಯಾಂಗ ಪ್ರಕ್ರಿಯೆ, ಇದರಿಂದಾಗಿ ದ್ವೇಷ ಭಾಷಣ ಮಾಡಿದ್ದು ಮೇಲ್ನೋಟಕ್ಕೇ ಸಾಬೀತಾಗಿದ್ದರೂ ಅವರ ಅಪರಾಧವನ್ನು ಮನ್ನಿಸಲಾಗಿದೆ ಎಂದು ಹೇಳಿದ್ದಾರೆ.

ಜೆಇಇ-ಎನ್‌ಇಇಟಿ ಪರೀಕ್ಷೆಗಳು ಸದ್ಯದ ಪರಿಸ್ಥಿತಿಯಲ್ಲಿ ಖಂಡಿತವಾಗಿಯೂ ಬೇಡ-ಸಿಪಿಐ(ಎಂ) ಪೊಲಿಟ್ ಬ್ಯುರೊ

ದೇಶಾದ್ಯಂತ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶಕ್ಕೆ ಜೆ.ಇ.ಇ.-ಎನ್.ಇ.ಇ.ಟಿ. ಪರೀಕ್ಷೆಗಳತ್ತ ಏಕಪಕ್ಷೀಯವಾಗಿ ಮುಂದೊತ್ತುತ್ತಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ದೃಢವಾಗಿ ವಿರೋಧಿಸಿದೆ. ಅತ್ಯಂತ ಆಕ್ರೋಶಕಾರಿ ಸಂಗತಿಯೆಂದರೆ, ಸಾಂಕ್ರಾಮಿಕದಿಂದ ಸೋಂಕಿತರ ಸಂಖ್ಯೆ ವೇಗವಾಗಿ ಏರುತ್ತಿರುವಾಗ ಮತ್ತು ಸಾವುಗಳ ಸಂಖ್ಯೆಯೂ ಏರುತ್ತಿರುವ ಸಮಯದಲ್ಲಿ ದೇಶಾದ್ಯಂತ ಭೌತಿಕವಾಗಿಯೇ ಈ ಪರೀಕ್ಷೆಗಳನ್ನು ನಡೆಸಬೇಕೆನ್ನುವ ಸಂವೇದನಾಶೂನ್ಯತೆ. ವಿದ್ಯಾರ್ಥಿಗಳು ಮತ್ತು ಈ ಕೋರ್ಸ್‌ಗಳ ಭವಿಷ್ಯದ ದೃಷ್ಟಿಯಿಂದ ಈ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನಾ ಅವಧಿಯನ್ನು ಆರಂಭಿಸಬೇಕೆನ್ನುವ ಕಾಳಜಿ ಸಾಧುವೇ, ಮತ್ತು ಅರ್ಥವಾಗುವಂತದ್ದೇ.

ಆದರೆ ಸದ್ಯದ ಪರಿಸ್ಥಿತಿಯಲ್ಲಿ ಇಂತಹ ಒಂದು ಸಾಹಸಕ್ಕೆ ಕೈಹಾಕುವುದು ಆತುರದ ಕೃತ್ಯವಾಗುತ್ತದೆ. ಇದು ನಮ್ಮ ಸುಮಾರು ಒಂದು ದಶಲಕ್ಷ ಪ್ರತಿಭಾವಂತ ಯುವ ಜನರ ಆರೋಗ್ಯ ಕಾಳಜಿಯನ್ನು ಸಂಪೂರ್ಣವಾಗಿ ಶಿಥಿಲಗೊಳಿಸುತ್ತದೆ ಎಂದು ಹೇಳಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಪರೀಕ್ಷೆ ನಡೆಸುವುದನ್ನು ಸೋಂಕಿನ ಹರಡಿಕೆಯ ಮೇಲೆ ಸ್ವಲ್ಪ ಹತೋಟಿ ಹೊಂದಲು ಸಾಧ್ಯವಾಗುವ ವರೆಗೆ ಸದ್ಯಕ್ಕೆ ತಡೆ ಹಿಡಿಯಬೇಕು ಎಂದು ಆಗ್ರಹಿಸಿದೆ. ಒಂದು ಬೋಧನಾ ವರ್ಷವನ್ನು ಕಳೆದುಕೊಳ್ಳದಂತೆ ವಿದ್ಯಾರ್ಥಿಗಳನ್ನು ರಕ್ಷಿಸುವ ರೀತಿಯಲ್ಲಿ ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿಯನ್ನು ಮರುಪರಿಶೀಲಿಸಬೇಕು ಎಂದು ಅದು ಹೇಳಿದೆ.

ಕೇಂದ್ರ ಸರಕಾರಕ್ಕೆ ಖಾಸಗೀಕರಣದ ಹುಚ್ಚು ಖಯಾಲಿ-ಇನ್ನಷ್ಟು ವಿಮಾನ ನಿಲ್ದಾಣಗಳ, ಐಆರ್‌ಸಿಟಿಸಿ ಖಾಸಗೀಕರಣ-ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಖಂಡನೆ

ಆಗಸ್ಟ್19ರಂದು ಕೇಂದ್ರ ಸಂಪುಟ ಜೈಪುರ, ಗುವಾಹಾಟಿ ಮತ್ತು ತಿರುವನಂತಪುರ ವಿಮಾನ ನಿಲ್ದಾಣಗಳನ್ನು ಪಿಪಿಪಿ(ಖಾಸಗಿ-ಸಾರ್ವಜನಿಕ ಭಾಗೀದಾರಿಕೆ) ಮಾದರಿಯಲ್ಲಿ ಖಾಸಗಿಯವರಿಗೆ ವಹಿಸಿಕೊಡುವ ಪ್ರಸ್ತಾವವನ್ನು ಅನುಮೋದಿಸಿದೆ ಎಂದು ವರದಿಯಾಗಿತ್ತು. ಇದುವರೆಗೆ 12 ವಿಮಾನ ನಿಲ್ದಾಣಗಳ ಖಾಸಗೀಕರಣದ ಪಟ್ಟಿ ತಯಾರಿಸಲಾಗಿದೆ: ಲಕ್ನೋ, ಅಹಮದಾಬಾದ್, ಜೈಪುರ, ಮಂಗಳೂರು, ತಿರುವನಂತಪುರ ಮತ್ತು ಗುವಹಾಟಿ ವಿಮಾನ ನಿಲ್ದಾಣಗಳನ್ನು ಫೆಬ್ರುವರಿ 2020ರಲ್ಲಿ ಮತ್ತು ಅಮೃತಸರ, ವಾರಣಾಸಿ, ಭುವನೇಶ್ವರ, ಇಂದೋರ್, ರಾಯಪುರ ಮತ್ತು ತಿರುಚಿ ವಿಮಾನ ನಿಲ್ದಾಣಗಳನ್ನು ಸಪ್ಟಂಬರ್2020ರಲ್ಲಿ ಖಾಸಗೀಕರಿಸಲು ಸರಕಾರ ನಿರ್ಧರಿಸಿದೆ.

ವಿಶೇಷವೆಂದರೆ ಇವೆಲ್ಲವನ್ನೂ ಅದಾನಿ ಗುಂಪು ದಕ್ಕಿಸಿಕೊಂಡಿದೆ. ಇದು ಗುತ್ತೇದಾರಿಕೆಗೆ, ಆಮೂಲಕ ಪ್ರಯಾಣಿಕರು ಮತ್ತು ಏರ್‌ಲೈನ್ಸ್‌ಗಳಿಂದ ಹೆಚ್ಚಿನ ಹಣವನ್ನು ಕಿತ್ತುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತದೆ ಎಂದು ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಈ ಕ್ರಮವನ್ನು ಖಂಡಿಸುತ್ತ ಹೇಳಿವೆ.

ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರ ನೂರಕ್ಕೂ ಹೆಚ್ಚು ವಿಮಾನ ನಿಲ್ದಾಣಗಳನ್ನು ನಡೆಸಿಕೊಂಡು ಬರುತ್ತಿದೆ, ಯಾವುದೂ ನಷ್ಟದಲ್ಲಿಲ್ಲ. ತಿರುವನಂತಪುರ ವಿಮಾನ ನಿಲ್ದಾಣ ವಾರ್ಷಿಕ 125 ಕೋಟಿ ರೂ. ಲಾಭ ಮಾಡಿಕೊಂಡು ಬಂದಿದೆ. ಕೇರಳ ಸರಕಾರ ಇದನ್ನು ನಡೆಸುವುದಾಗಿ ಹೇಳಿದೆ. ಈ ವಿಷಯ ಈಗ ನ್ಯಾಯಾಲಯದ ಮುಂದಿದೆ. ಆದರೂ ಕೇಂದ್ರಸರಕಾರ ಅದನ್ನು ಅದಾನಿಗೆ ವಹಿಸಿಕೊಡಲು ಟೊಂಕಕಟ್ಟಿದಂತಿದೆ. ಆಗಸ್ಟ್ 24ರ್ರಂದು ಕೇರಳ ವಿಧಾನಸಭೆ ಈ ವಿಮಾನ ನಿಲ್ದಾಣವನ್ನು ಅದಾನಿ ಗುಮಪಿಗೆ ವಹಿಸಿಕೊಡುವುದರ ವಿರುದ್ಧ ಒಂದು ಒಮ್ಮತದ ಠರಾವನ್ನು ಅಂಗೀಕರಿಸಿದೆ. ಈ ವಿಧಾನಸಭೆಯಲ್ಲಿ ಒಬ್ಬ ಬಿಜೆಪಿ ಸದಸ್ಯರೂ ಇದ್ದಾರೆ ಎಂಬುದನ್ನು ಗಮನಿಸಬೇಕು. ಈ ಠರಾವು ಬಿಜೆಪಿ ಕೇಂದ್ರ ಸರಕಾರದ ಕೆನ್ನೆಗೆ ಬಾರಿಸಿದ ಒಂದು ಬಲವಾದ ಏಟು ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಹೇಳಿವೆ.

ಆದರೂ ಈ ನಡುವೆ ಐಆರ್‌ಸಿಟಿಸಿಯಲ್ಲಿ ತನ್ನ ಪಾಲನ್ನು ಮಾರುವವುದಾಗಿ ಸರಕಾರ ಹೇಳಿದೆ.

ಕೇಂದ್ರ ಸರಕಾರ ಖಾಸಗೀಕರಣದ ಹುಚ್ಚು ಖಯಾಲಿಯನ್ನು ಹೆಚ್ಚಿಕೊಂಡಿದೆ, ಎಲ್ಲ ಸರಕಾರೀ ಆಸ್ತಿಗಳನ್ನು ತನ್ನ ಬಂಟರಿಗೆ ಮಾರಲು ಉದ್ಯುಕ್ತವಾಗಿದೆ. ಇದು ಸಾಮಾನ್ಯ ಪ್ರಯಾಣಿಕರ ಹಿತಗಳಿಗೆ ವಿರುದ್ಧವಾದದ್ದು ಎಂದು ಎಚ್ಚರಿಸಿರುವ ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಕೇಂದ್ರ ಸರಕಾರ ಈ ಪ್ರಸ್ತಾವವನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿವೆ.

ಸಪ್ಟಂಬರ್ 7-8: ಬಿಪಿಸಿಎಲ್‌ನಲ್ಲಿ ಐಕ್ಯ ಮುಷ್ಕರ
-ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯ ಬೆಂಬಲ
ದೇಶಾದ್ಯಂತ ಸೌಹಾರ್ದ ಕಾರ್ಯಾಚರಣೆಗೆ ಕರೆ

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ (ಬಿಪಿಸಿಎಲ್)ನ್ನು ನೇರವಾಗಿ ಖಾಸಗಿಯವರಿಗೆ ವಹಿಸಿಕೊಡುವ ಮೋದಿ ಸರಕಾರದ ನಿರ್ಧಾರದ ವಿರುದ್ಧ ಬಿಪಿಸಿಎಲ್‌ನಲ್ಲಿರುವ ಎಲ್ಲ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಸಪ್ಟಂಬರ್ 7ಮತ್ತು 8ರಂದು ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ. ಇದನ್ನು ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಒಕ್ಕೂಟಗಳ ಜಂಟಿ ವೇದಿಕೆ ಸಂಪೂರ್ಣವಾಗಿ ಬೆಂಬಲಿಸಿದೆ. ಹಾಗೂ ಎಲ್ಲ ಕಾರ್ಮಿಕ ಸಂಘಟನೆಗಳು ದೇಶಾದ್ಯಂತ ಈ ಮುಷ್ಕರಕ್ಕೆ ಬೆಂಬಲವಾಗಿ ಸೌಹಾರ್ದ ಕಾರ್ಯಾಚರಣೆಗಳನ್ನು ನಡೆಸಬೇಕೆಂದು ಕರೆ ನೀಡಿದೆ.

ಜಂಟಿ ವೇದಿಕೆ ಆಗಸ್ಟ್ 25ರಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಿಗಳಿಗೆ ಈ ಕುರಿತಂತೆ ಇನ್ನೊಂದು ಪತ್ರವನ್ನು ಬರೆದಿದೆ.

ಇದು ರಾಷ್ಟ್ರ-ವಿರೋಧಿ ನಡೆ, ಏಕೆಂದರೆ ಇದರಿಂದಾಗಿ, ಸರಕಾರ ಕೇವಲ ಡಿವಿಡೆಂಡ್ ಬಾಬ್ತಿನಲ್ಲೆ ಪ್ರತಿವರ್ಷ 8000 ಕೋಟಿ ರೂ.ಗಳನ್ನು ಕಳೆದು ಕೊಳ್ಳುತ್ತದೆ. ಇನ್ನು ಅದು ತೆರುವ ತೆರಿಗೆ ಇತ್ಯಾದಿಗಳನ್ನು ಲೆಕ್ಕಕ್ಕೆ ತಗೊಂಡರೆ ಸರಕಾರಕ್ಕೆ ಆಗುವ ನಷ್ಟ ಇನ್ನೂ ಹೆಚ್ಚು, ಎಂಬುದನ್ನು ಈ ಪತ್ರದಲ್ಲಿ ಸರಕಾರದ ಗಮನಕ್ಕೆ ತರಲಾಗಿದೆ.

ಸಂಪಾದಕೀಯ

ತಬ್ಲೀಗಿ ಜಮಾತ್ ಆರೋಪ ಮುಕ್ತ

ಮುಂಬೈ ಹೈಕೋರ್ಟಿನ ಔರಂಗಾಬಾದ್ ಪೀಠವು ಇತ್ತೀಚೆಗೆ 36 ತಬ್ಲೀಗಿ ಜಮಾತ್ ಸದಸ್ಯರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಗಳನ್ನು ರದ್ದು ಮಾಡಿದೆ. ಇದರಿಂದಾಗಿ ತಬ್ಲೀಗಿ ಜಮಾತ್ ವಿರುದ್ಧ ಮತ್ತು ಒಟ್ಟಾರೆ ಮುಸಲ್ಮಾನರ ವಿರುದ್ಧ ಕೋವಿಡ್ 19 ರ ಸಾಂಕ್ರಾಮಿಕ ಆರಂಭದಲ್ಲಿ ಮಾಡಲಾಗಿದ್ದ ಅಪಪ್ರಚಾರವು ಎಷ್ಟು ಆಧಾರರಹಿತವಾಗಿದೆ ಎಂಬುದು ಸಾಬಿತಾಗಿದೆ. 29 ವಿದೇಶಿಯರ ವಿರುದ್ಧ ವಿದೇಶಿಯರ ಕಾಯ್ದೆ ಮತ್ತು ಸಾಂಕ್ರಾಮಿಕ ಕಾಯ್ದೆ ವಿರುದ್ಧದ ಆರೋಪಗಳನ್ನು ರದ್ದುಗೊಳಿಸಿತು. ಹಾಗೆಯೇ ಅವರಿಗೆ ಆಶ್ರಯ ನೀಡಿದ 6 ಜನ ಭಾರತೀಯರನ್ನು ಆರೋಪದಿಂದ ಮುಕ್ತಗೊಳಿಸಿತು.

ನ್ಯಾಯಾಲಯವು ಆರೋಪಿಗಳ ವಿರುದ್ಧದ ಆರೋಪಗಳು ಆಧಾರರಹಿತವಾಗಿವೆ ಎಂದು ವ್ಯಾಖ್ಯಾನಿಸಿತು ಮಾತ್ರವಲ್ಲ ಅವರನ್ನು ಅನ್ಯಾಯವಾಗಿ ಗುರಿಯಿಟ್ಟು ಸತಾಯಿಸಲಾಗಿದೆ ಎಂದು ಹೇಳಿತು. ಈ ತಬ್ಲೀಗಿಗಳನ್ನು ಸಾಂಕ್ರಾಮಿಕದ ಘನಘೋರ ಸಮಯದಲ್ಲಿ ಬಲಿಪಶು ಮಾಡಲು ಸರಕಾರ ಪ್ರಯತ್ನಿಸಿತು ಎಂದು ಅಭಿಪ್ರಾಯ ಪಟ್ಟ ನ್ಯಾಯಾಲಯ ಇದರ ಹಿಂದಿನ ಉದ್ದೇಶ ರಾಜಕೀಯ ವಾಗಿರಬಹುದು ಎಂದು ಸಂಶಯ ವ್ಯಕ್ತಪಡಿಪಡಿಸಿತು. ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಈ ಸಮಯದಲ್ಲಿ ವ್ಯಾಪಕವಾದ ಅಪಪ್ರಚಾರ ನಡೆಸಿ ಆ ವಿದೇಶಿ ಯಾತ್ರಿಕರನ್ನು ಅವಮಾನಿಸಲಾಯಿತು. ಅವರ ವಿರುದ್ಧದ ಎಲ್ಲಾ ಆರೋಪಗಳನ್ನು ತಳ್ಳಿಹಾಕಿದ ನ್ಯಾಯಾಲಯ ಅವರನ್ನು ಸರಿ ಸುಮಾರು ಚಿತ್ರಹಿಂಸೆಗೆ ಗುರಿಪಡಿಸಲಾಯಿತು ಎಂದು ಹೇಳಿತು.

ಆ ದಿನಗಳಲ್ಲಿ ತಬ್ಲೀಗಿಗಳ ವಿರುದ್ಧ ಮತ್ತು ಮುಸಲ್ಮಾನರ ವಿರುದ್ಧ ವ್ಯವಸ್ಥಿತವಾದ ಅಪಪ್ರಚಾರ ನಡೆಸಿ ಕೋವಿಡ್–19 ರ ಪ್ರಸಾರಕ್ಕೆ ಅವರನ್ನೇ ಗುರಿಪಡಿಸಲಾಯಿತು. ಅವರು ಉದ್ದೇಶಪೂರ್ವಕವಾಗಿ ಸಾಂಕ್ರಾಮಿಕವನ್ನು ಪ್ರಸಾರ ಮಾಡಿದರು ಎಂದು ಕತೆ ಕಟ್ಟಿ ಪ್ರಚಾರ ಮಾಡಲಾಯಿತು. ಅದನ್ನು ಕರೊನಾ ಜಿಹಾದ್ ಎಂದು ಕರೆಯಲಾಯಿತು. ದೇಶವನ್ನು ಬುಡಮೇಲು ಮಾಡಲು ಅವರು ಹೆಣೆದ ತಂತ್ರವಿದು ಎಂದು ಹೇಳಲಾಯಿತು. ತಬ್ಲೀಗಿ ಜಮಾತ್ ಈ ಸಾಂಕ್ರಾಮಿಕ ರೋಗಕ್ಕೆ ಮೂಲ ಕಾರಣ ಎಂದು ಕೇಂದ್ರ ಸರ್ಕಾರ ಪದೆ ಪದೆ ಹೇಳುತಿತ್ತು. ಸಾಂಪ್ರದಾಯಿಕ ಮತ್ತು ಸಾಮಾಜಿಕ ಮಾಧ್ಯಮಗಳನ್ನು ಹೀಯಾಳಿಸಲು ಅವಮಾನಿಸಲು ಬಳಸಿಕೊಳ್ಳಲಾಯಿತು. ನಾವು ನಮ್ಮ ದೇಶದ ಶ್ರೇಷ್ಠ ಪರಂಪರೆ ಮತ್ತು ಸಂಸ್ಕೃತಿಗೆ ಅನುಗುಣವಾಗಿ ನಡೆದು ಕೊಂಡಿದ್ದೇವಾ ಎಂದು ನಾವು ಚಿಂತಿಸಬೇಕಾಗಿದೆ ಎಂದು ನ್ಯಾಯಾಲಯ ಹೇಳಿತು. ಆ ವಿದೇಶಿಯರು ನಮ್ಮ ದೇಶದ ಅತಿಥಿಗಳಾಗಿದ್ದರು ಎಂದು ಹೇಳಿದ ನ್ಯಾಯಾಲಯ ಅವರನ್ನು ನಾವು ನಡೆಸಿಕೊಂಡ ರೀತಿ ಹೇಗಿತ್ತು. ನ್ಯಾಯಾಲಯ ತನ್ನ ತೀರ್ಪಿನಲ್ಲಿ ಜಾತ್ಯತೀತತೆಗೆ, ಧಾರ್ಮಿಕ ಸಾಮರಸ್ಯಕ್ಕೆ ಒತ್ತು ಕೊಟ್ಟಿತು ಮಾತ್ರವಲ್ಲ ನಮ್ಮ ದೇಶದ ಐಖ್ಯತೆ, ಸಮಗ್ರತೆಯನ್ನು ಕಾಪಾಡಲು ಇವು ಅತ್ಯವಶ್ಯಕವಾಗಿದೆ ಎಂದು ಹೇಳಿತು.

ನ್ಯಾಯಾಲಯವು ಈ ಪ್ರಕರಣದಲ್ಲಿ ಸರ್ಕಾರವನ್ನು ಮತ್ತು ಪೊಲೀಸರನ್ನು ತರಾಟೆಗೆ ತೆಗೆದುಕೊಂಡು ಬೇರೆ ಬೇರೆ ದೇಶಗಳ ಬೇರೆ ಬೇರೆ ಧರ್ಮಗಳ ಜನರನ್ನು ತಾರತಮ್ಯದಿಂದ ಕಾಣಬಾರದು ಎಂದು ಸರ್ಕಾರವನ್ನು ಎಚ್ಚರಿಸಿತು. ಈ ಪ್ರಕರಣದಲ್ಲಿ ಪೊಲೀಸರು ಕಾರ್ಯಾಂಗದ ನಿರ್ದೇಶನಗಳಿಗೆ ತಕ್ಕಂತೆ ವರ್ತಿಸಿ ತಾರತಮ್ಯದಿಂದ ವರ್ತಿಸಿದೆ ಎಂದು ಗುಡುಗಿದೆ.


ಇನ್ನೆರಡು ಉಚ್ಚ ನ್ಯಾಯಾಲಯವು ಸಹ ತಬ್ಲೀಗೀ ಜಮಾತ್ ಸದಸ್ಯರ ವಿರುದ್ಧದ ಪ್ರಕರಣಗಳನ್ನು ರದ್ದುಗೊಳಿಸಿದೆ. ಕಾರಣ ಬೇರೆ ಇರಬಹುದು. ಆದಾಗ್ಯೂ ತಬ್ಲೀಗೀ ಜಮಾತ್ ವಿರುದ್ಧದ ಅಪಪ್ರಚಾರ ಸುಳ್ಳು ಹಾಗೂ ದುರುದ್ದೇಶಪೂರಕ ಎಂದು ಈಗ ಸಾಬೀತಾಗಿದೆ. ಒಂದು ಸರ್ಕಾರವೇ ಪೂರ್ವಗ್ರಹಪೀಡಿತವಾದರೆ ಸುಳ್ಳು ಆರೋಪಗಳಿಗೆ ಸಿಕ್ಕಿಹಾಕಿಕೊಂಡ ಜನತೆಗೆ ನ್ಯಾಯ ಸಿಗುವುದಾದರೂ ಹೇಗೆ?

ನಮ್ಮ ದೇಶದಲ್ಲಿ ಮುಸಲ್ಮಾನರೇ ಅಧಿಕ ಸಂಖ್ಯೆಯಲ್ಲಿ ಇದ್ದಾರೆ ಎಂದು ಹೇಳಲಾಗುತ್ತದೆ. ಆದರೆ ಹಿಂಸೆಗೆ, ತಾರತಮ್ಯಕ್ಕೆ ಬಲಿಯಾಗುತ್ತಿರುವ ಮುಸಲ್ಮಾನರು ನಮ್ಮ ದೇಶದಲ್ಲೇ ಅತಿ ಹೆಚ್ಚು ಎಂಬುದನ್ನು ನಾವು ಮರೆಯಬಹುದೆ? ತಾವು ಹುಟ್ಟಿ ಬೆಳೆದ ಈ ದೇಶದಲ್ಲಿ ತಾವು ಪರಕೀಯರಾಗಿ ಬದುಕುವ ಪರಿಸ್ಥಿತಿ ಅವರು ಒಳಗಾಗಿರುವುದು ಅವರನ್ನು ನಿರಂತರವಾಗಿ ಹಿಂಸಿಸುತ್ತದೆ. ಇಲ್ಲಿ ತಮ್ಮ ಹೆಣ್ಣು ಮಕ್ಕಳು ಸುರಕ್ಷಿತವಾಗಿಲ್ಲ. ಇಲ್ಲಿ ಆಸ್ತಿಪಾಸ್ತಿ ಸುರಕ್ಷಿತವಾಗಿಲ್ಲ. ತಮ್ಮ ಮನೆಗಳು, ಪ್ರಾರ್ಥನಾ ಮಂದಿರಗಳು ಸುರಕ್ಷಿತವಾಗಿಲ್ಲ. ಯಾವುದೇ ಅಪರಾಧ ಮಾಡದೆ, ತಮ್ಮನ್ನು ನ್ಯಾಯಾಲಯದಲ್ಲಿ ಸಮರ್ಥಿಸಿಕೊಳ್ಳಲಾಗದೆ ಜೈಲುಗಳಲ್ಲಿ ಕೊಳೆಯುತ್ತಿರುವ ಮುಸ್ಲಿಂ ಯುವಕರು ಅದೆಷ್ಟು ಜನ?

ಇಂತಹ ಪರಿಸ್ಥಿತಿಯಲ್ಲಿ ಮುಸ್ಲಿಂ ಯುವಕರು ಆರೆಸ್ಸೆಸ್‌ನವರಂತೆ ಪಿಡಿಎಫ್, ಎಸ್‌ಡಿಎಫ್‌ಐ ಅಂತಹ ಸಂಘಟನೆಗಳನ್ನು ಕಟ್ಟಲು ಮುಂದಾದರೆ ಆಶ್ಚರ್ಯವೇನಿಲ್ಲ. ಆದರೆ ಹಿಟ್ಲರ್‌ಶಾಹಿ, ಆರೆಸ್ಸೆಸ್ ಈ ದೇಶದ ಯಾವ ಯುವಕರಿಗೂ ಆದರ್ಶವಲ್ಲ. ನಮ್ಮ ಯುವಕರು ಅಂತಹ ಸಂಘಟನೆಗಳಿಗೆ ಆಕರ್ಷಿತರಾಗಬಾರದು. ಕಾನೂನು ಬಡವರಪರ ಇರುವುದಿಲ್ಲ. ಕಾನೂನು ದಮನಕಾರಿಯಾಗಿದೆ. ಅಂತಹ ದಮನಕಾರಿ ಅಸ್ತ್ರವನ್ನು ನಮ್ಮ ಯುವಕರು ಕೈಗೆತ್ತಿಕೊಳ್ಳಬಾರದು. ಹಿಂದುಗಳ ಬಗ್ಗೆ ಮುಸಲ್ಮಾನರಲ್ಲಿ, ಮುಸಲ್ಮಾನರ ಬಗ್ಗೆ ಹಿಂದುಗಳಲ್ಲಿ ದ್ವೇಷ, ಅಸಹನೆ ಬಿತ್ತುವವರ ವಿರುದ್ಧ ಎಚ್ಚರ ಅಗತ್ಯ.

ಕೇಂದ್ರ ಸರಕಾರ ರಾಜ್ಯಗಳಿಗೆ ಜಿಎಸ್‌ಟಿ ಬಾಕಿಯನ್ನು ತೆರಲೇಬೇಕು

ನಿಮ್ಮ ಅಸಮರ್ಥತೆಗೆ "ದೈವಿಕ ಮಧ್ಯಪ್ರವೇಶ"ವನ್ನು ದೂಷಿಸಬೇಡಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ




ಕೇಂದ್ರ ಹಣಕಾಸು ಮಂತ್ರಿಗಳು ಆಗಸ್ಟ್ 27ರಂದು ಜಿಎಸ್‌ಟಿ ಮಂಡಳಿ ಸಭೆಯಲ್ಲಿ ರಾಜ್ಯ ಸರಕಾರಗಳಿಗೆ ಹಣಕಾಸು ವರ್ಷ 2020–21ರಲ್ಲಿ ಸಲ್ಲಬೇಕಾದ ಜಿಎಸ್‌ಟಿ ಪಾಲನ್ನು ಕೊಡಲು ಕೇಂದ್ರ ಸರಕಾರ ಅಸಮರ್ಥವಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಇದು ಕಡು ಕ್ರೌರ್ಯದ ಮಾತು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ರಾಜ್ಯಗಳಿಗೆ ಜಿಎಸ್‌ಟಿ ಆದಾಯದಲ್ಲಿನ ಕೊರತೆ 2.35ಲಕ್ಷ ಕೋಟಿ ರೂ.ಗಳ ಒಂದು ಬೃಹತ್ ಮೊತ್ತ ಎಂದು ಅಂದಾಜು ಮಾಡಲಾಗಿದೆ. ಈ ಕಂದರವನ್ನು ಮುಚ್ಚಲು ರಿಝರ್ವ್ ಬ್ಯಾಂಕಿನಿಂದ ಸಾಲ ತಗೊಳ್ಳಿ ಎಂದು ರಾಜ್ಯಗಳಿಗೆ ಹೇಳುವುದು ಅಸಹ್ಯಕರ ಮಾತು. ಕೇಂದ್ರ ಸರಕಾರ ಕಾನೂನು ಪ್ರಕಾರ ಜಿಎಸ್‌ಟಿ ಬಾಕಿಗಳನ್ನು ತೆರಲು ಬಾಧ್ಯವಾಗಿದೆ. ಅಗತ್ಯ ಬಿದ್ದರೆ, ಕೇಂದ್ರ ಸರಕಾರ ಸಾಲ ತಂದು ರಾಜ್ಯಗಳಿಗೆ ಅವುಗಳ ಬಾಕಿಯನ್ನು ತೆರಬೇಕು, ರಾಜ್ಯ ಸರಕಾರಗಳು ಸಾಲ ಮಾಡಬೇಕು ಎಂದು ಅದು ಬಲವಂತ ಮಾಡಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಕೊವಿಡ್ ಮೊದಲೇ ಭಾರತೀಯ ಅರ್ಥವ್ಯವಸ್ಥೆಯನ್ನು ಹಿಂಜರಿತದತ್ತ ಧುಮುಕಿಸಿರುವ ಕೇಂದ್ರ ಸರಕಾರ ಈಗ ತನ್ನ ಬಾಧ್ಯತೆಯನ್ನು ಈಡೇರಿಸಲು ಅಸಮರ್ಥವಾಗಿರುವುದಕ್ಕೆ ಯಾವುದೋ 'ದೈವಿಕ ಮಧ್ಯಪ್ರವೇಶ'ವನ್ನು ದೂಷಿಸುತ್ತಿದೆ. ಇದನ್ನು ಖಂಡಿತಾ ಒಪ್ಪಲಾಗದು. ಇದು ಸಂಪೂರ್ಣವಾಗಿ ಆಕ್ರೋಶಕಾರಿ ಮತ್ತು ದಾರಿ ತಪ್ಪಿಸುವ ಮಾತು. ಕೇಂದ್ರ ಸರಕಾರ ರಾಜ್ಯಗಳಿಗೆ ತನ್ನ ಕಾನೂನುಬದ್ಧ ಬಾಧ್ಯತೆಗಳನ್ನು ಈಡೇರಿಸಲೇಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ದೃಢವಾಗಿ ಹೇಳಿದೆ.

ದೈವವನ್ನು ದೂರಿದೆಂತೊಡೆ?

'ಸಹಕಾರಿ ಒಕ್ಕೂಟ ತತ್ವ' ಎಲ್ಲಿಗೆ ಹೋಯಿತು?' ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚುರಿ ಟಿಪ್ಪಣಿ ಹೇಳಿದ್ದಾರೆ. ಭಾರತೀಯ ಅ'ರ್ಥ'ವ್ಯ'ವ'ಸ್ಥೆ'ಯ'ನ್ನು ನಾಶಪಡಿಸಿದ ಮೇಲೆ ಈಗ ರಾಜ್ಯಗಳ ಲೂಟಿಗಿಳಿದಿದ್ದಾರೆ. ಇದೀಗ 'ದೈವಿಕ ಮಧ್ಯಪವೇಶ' ?

ಬಂಟ ಬಂಡವಾಳಿಗರಿಗೆ ಕೊಡುಗೆಗಳು, ಅಸಮರ್ಥತೆ ಮತ್ತು ನಿರ್ಲಕ್ಷ್ಯದ ಒಂದು ಕಲಸುಮೇಲೋಗರ ನಮ್ಮ ಜನಗಳಿಗೆ ಮೋಸಮಾಡಿತ್ತು., ಅವರ ಜೀವ–ಜೀವನವನ್ನು ಕೊವಿಡ್ ಮೊದಲೇ ನಾಶಗೊಳಿಸಿತ್ತು. ಈಗ ದೈವವನ್ನು ದೂರಿ ಫಲವಿಲ್ಲ ಎಂದು ಯೆಚುರಿ ಹೇಳಿದ್ದಾರೆ.



ಕೃಪೆ: ಪಿ. ಮಹಮ್ಮದ್, ವಾ.ಭಾ.

ಕರಾವಳಿ ಜಿಲ್ಲೆಗಳಲ್ಲಿ ವ್ಯಾಪಕ ಪ್ರತಿಭಟನಾ ವಾರಾಚರಣೆ

ವರದಿ:
ವಾ.ಉ.



ಕೊರೋನಾ ವೈರಸ್ ನೆಪವನ್ನು ಮುಂದಿಟ್ಟು ಜನವಿರೋಧಿ, ಕಾರ್ಮಿಕ ವಿರೋಧಿ, ರೈತ ವಿರೋಧಿ, ದಲಿತ ಅಲ್ಪಸಂಖ್ಯಾತ ಮಹಿಳಾ ವಿರೋಧಿ ನೀತಿಗಳನ್ನು ಕೇಂದ್ರದ ನರೇಂದ್ರ ಮೋದಿ ಸರಕಾರ ಜಾರಿಗೆ ತರುತ್ತಿದ್ದು, ಅದರ ವಿರುದ್ಧ ಆಗಸ್ಟ್ ತಿಂಗಳ ಅಂತ್ಯದಲ್ಲಿ ದೇಶವ್ಯಾಪಿ ಪ್ರತಿಭಟನಾ ವಾರಾಚರಣೆ ನಡೆಸಲು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ಕೊಟ್ಟಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಸ್ಟ್ 23 ರಿಂದ 29ರ ವರೆಗೆ ವ್ಯಾಪಕ ಪ್ರತಿಭಟನಾ ಪ್ರದರ್ಶನ ನಡೆಸಲು ಪಕ್ಷದ ಜಿಲ್ಲಾ ಸಮಿತಿ ಆಯೋಜಿಸಿದ ಮೇರೆಗೆ ಎಲ್ಲಾ ತಾಲೂಕುಗಳಲ್ಲೂ ಪ್ರತಿ ದಿನವೂ ಒಂದಲ್ಲ ಒಂದು ಕಡೆ ಪ್ರದರ್ಶನಗಳು ನಡೆದಿವೆ.

ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಮತ್ತು ಉತ್ತರ ಸಮಿತಿಗಳು ಆಗಸ್ಟ್ 23 ರಂದು ಕೊಂಚಾಡಿಯಲ್ಲಿ, 24ರಂದು ಪಕ್ಕಲಡ್ಕ, ಉರ್ವಸ್ಟೋರ್‌ಗಳಲ್ಲಿ, 27 ರಂದು ಸ್ಟೇಟ್‌ಬ್ಯಾಂಕ್ ಬಳಿ, 28 ರಂದು ಪಂಜಿಮೊಗರಿನಲ್ಲಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದೆ. ಅಲ್ಲದೆ 29 ರಂದು ಲೇಡಿಗೋಷನ್ ಬಳಿ, 30 ರಂದು ಶಕ್ತಿನಗರ, ಕುಲಶೇಖರ, ಜಪ್ಪಿನಮೊಗರು ಮತ್ತು ತಣ್ಣೀರುಬಾವಿಗಳಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಲಿವೆ. ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಉತ್ತರ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ ತಮ್ಮ ವಲಯದ ವ್ಯಾಪ್ತಿಯಲ್ಲಿ ಮಂಗಳೂರು ನಗರದ ಪ್ರತಿಭಟನೆಗಳಿಗೆ ನೇತೃತ್ವ ನೀಡುತ್ತಿದ್ದಾರೆ.

ಉಳ್ಳಾಲ ವಲಯದಲ್ಲಿ ಆಗಸ್ಟ್ 23 ರಂದು ಕುತ್ತಾರು ತೇವುಲದಲ್ಲಿ ಪ್ರಥಮ ಪ್ರತಿಭಟನಾ ಪ್ರದರ್ಶನ ನಡೆಯಿತು. ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕೃಷ್ಣಪ್ಪ ಸಾಲ್ಯಾನ್, ಪದ್ಮಾವತಿ ಶೆಟ್ಟಿ, ಜಯಂತ ನಾಯಕ್ ಹಾಗೂ ಉಳ್ಳಾಲ ವಲಯ ಸಮಿತಿ ಸದಸ್ಯರು ಪ್ರತಿಭಟನಾ ಪ್ರದರ್ಶನಗಳನ್ನು ಆಯೋಜಿಸಿದ್ದರು. ವಲಯದ ಪ್ರಮುಖ ಪೇಟೆಗಳಾದ ದೇರಳಕಟ್ಟೆ, ಮುಡಿಪು, ಕೋಟೆಕಾರ್–ಬೀರಿ ಹಾಗೂ ತೊಕ್ಕೊಟ್ಟಿನಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಕ್ಷದ ಬೆಂಬಲಿಗರು ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಅಸೈಗೋಳಿ, ಪಿಲಾರು–ಲಕ್ಷ್ಮಿ ಗುಡ್ಡೆ, ಕುಂಪಲ, ಚೆಂಬುಗುಡ್ಡೆ, ಪಜೀರ್, ಕುತ್ತಾರ್ ಪದವು, ಪಜೀರು ಜಂಕ್ಷನ್, ಪಿಲಾರುಗಳಂಥ ಊರುಗಳಲ್ಲೂ ಪ್ರತಿಭಟನಾ ಪ್ರದರ್ಶನ ನಡೆಸಲಾಗಿದೆ.

ಪುತ್ತೂರು ತಾಲೂಕಿನಲ್ಲಿ ಪಕ್ಷದ ಸದಸ್ಯತ್ವ ಕಡಿಮೆ ಇದ್ದರೂ ಅಲ್ಲಿನ ಅಕ್ಷರದಾಸೋಹ ನೌಕರರ ನೇತೃತ್ವದಲ್ಲಿ ಆಗಸ್ಟ್ 24 ರಂದು ತಾಲೂಕು ಕಚೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಯಿತು. ಪಕ್ಷದ ದ.ಕ.ಜಿಲ್ಲಾ ಸಮಿತಿ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ರಾಮಣ್ಣ ವಿಟ್ಲ, ಶಿವಕುಮಾರ್, ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗುರುಪುರ ವಲಯದಲ್ಲಿ ವಲಯ ಕಾರ್ಯದರ್ಶಿ ಸದಾಶಿವ ದಾಸ್ ಮತ್ತು ವಲಯ ಸಮಿತಿ ಸದಸ್ಯರು ಹಲವೆಡೆ ಪ್ರತಿಭಟನೆಗಳ ವ್ಯವಸ್ಥೆ ಮಾಡಿದ್ದರು. ಆಗಸ್ಟ್ 24 ರಂದು ಗುರುಪುರ–ಕೈಕಂಭ ಪೇಟೆಯಲ್ಲಿ, ಬಳಿಕ ಕುಪ್ಪೆಪದವಿನಲ್ಲಿ, ಇರುವೈಲು, ಮಳಲಿ, ವಾಮಂಜೂರುಗಳಲ್ಲಿ ಈಗಾಗಲೇ ಪ್ರತಿಭಟನಾ ಪ್ರದರ್ಶನಗಳು ನಡೆದಿವೆ.

ಬಂಟ್ವಾಳ ತಾಲೂಕು ಸಮಿತಿಯ ವತಿಯಿಂದ ಆಗಸ್ಟ್ 25 ರಂದು ಅಲ್ಲಿನ ಮಿನಿವಿಧಾನಸೌಧದ ಎದುರು ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಅಲ್ಲಿನ ತಾಲೂಕು ಸಮಿತಿ ಕಾರ್ಯದರ್ಶಿ ರಾಮಣ್ಣ ವಿಟ್ಲ, ಪಕ್ಷದ ಜಿಲ್ಲಾ ಸಮಿತಿ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ ಹಾಗೂ ಪಕ್ಷದ ತಾಲೂಕು ಸಮಿತಿ ಮುಖಂಡರು, ಡಿವೈಎಫ್‌ಐನವರು ಭಾಗವಹಿಸಿದ್ದರು.

ಮೂಡಬಿದ್ರಿ ತಾಲೂಕಿನಲ್ಲಿ ಆಗಸ್ಟ್ 26 ರಂದು ಪ್ರತಿಭಟನಾ ಪ್ರದರ್ಶನಗಳು ಆರಂಭಗೊಂಡವು. ಪಕ್ಷದ ದ.ಕ.ಜಿಲ್ಲಾ ಸಮಿತಿ ಮುಖಂಡರಾದ ಯಾದವ ಶೆಟ್ಟಿ, ರಮಣಿ ಮೂಡಬಿದ್ರಿ ಹಾಗೂ ವಲಯ ಸದಸ್ಯರು ಪ್ರತಿಭಟನೆಗಳನ್ನು ಆಯೋಜಿಸಿರುತ್ತಾರೆ. ಮೂಡಬಿದ್ರಿ ತಾಲೂಕಿನ ವಿವಿಧೆಡೆ ಪ್ರತಿಭಟನೆಗಳ ವ್ಯವಸ್ಥೆ ಮಾಡಲಾಗಿದೆ. ಶಿರ್ತಾಡಿಯಲ್ಲಿ ಮತ್ತು ಬೆಳ್ವಾಯಿಯಲ್ಲಿ ಆಗಸ್ಟ್ 26 ರಂದೇ ಪ್ರದರ್ಶನ ನಡೆಸಲಾಗಿದೆ. 27 ರಂದು ಮೂಡಬಿದ್ರಿ ನಗರದಲ್ಲಿ ಪ್ರತಿಭಟನಾ ಪ್ರದರ್ಶನ ನಡೆದಿದೆ.

ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು ಡಿವೈಎಫ್‌ಐ ಅಭಿಯಾನ:

ಕೊರೋನಾ ನೆಪದಲ್ಲಿ ಖಾಸಗಿ ಆಸ್ಪತ್ರೆಗಳನ್ನು ನಡೆಸುತ್ತಿರುವ ಲೂಟಿಯನ್ನು ಖಂಡಿಸಿ ಹಾಗೂ ಅವುಗಳನ್ನು ನಿಯಂತ್ರಿಸಬೇಕು ಹಾಗೂ ಸರಕಾರೀ ಆಸ್ಪತ್ರೆಗಳನ್ನು ಬಲಪಡಿಸಬೇಕೆಂದು ಆಗ್ರಹಿಸಿ ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಜಿಲ್ಲಾ ಅಭಿಯಾನವೊಂದನ್ನು ಹಮ್ಮಿಕೊಂಡ ಮೇರೆಗೆ ದ.ಕ.ಜಿಲ್ಲೆಯಲ್ಲಿ ಡಿವೈಎಫ್‌ಐ ಘಟಕಗಳು ಅಲ್ಲಲ್ಲಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದವು.

ಮಂಗಳೂರು ನಗರದ ಬಜಾಲು–ಪಕ್ಕಲಡ್ಕ, ಕೊಂಚಾಡಿ, ಉರ್ವಸ್ಟೋರ್, ಬೆಂಗರೆ, ಬಂಟ್ವಾಳ ತಾಲೂಕು ಬಿಸಿರೋಡ್, ಉಳ್ಳಾಲ ವಲಯದ ಪಾವೂರು ಗ್ರಾಮ ಪಂಚಾಯತ್, ಕುತ್ತಾರು, ತೊಕ್ಕೊಟ್ಟು ಮುಂತಾದೆಡೆ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಯಿತು.

ಈ ಪ್ರದರ್ಶನಗಳಲ್ಲಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್, ಜಿಲ್ಲಾ ಸಂಘಟನೆಯ ಮುಖಂಡರಾದ ನವೀನ್ ಕೊಂಚಾಡಿ, ಅಶ್ರಫ್ ಕೆ.ಸಿ.ರೋಡ್ ಮೊದಲಾದವರು ಪ್ರದರ್ಶನಗಳಲ್ಲಿ ಪ್ರಮುಖ ಭಾಷಣಕಾರರಾಗಿ ಮಾತನಾಡಿದರು.

ಸರ್ಕಾರಗಳು ಖಾಸಗಿ ಆಸ್ಪತ್ರೆ ಗಳ ಏಜೆಂಟ್

ವಿಟ್ಲ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವಂತೆ ಆಗ್ರಹಿಸಿ ಸರಕಾರಿ ಆಸ್ಪತ್ರೆ ಗಳನ್ನು ಬಲಪಡಿಸಿ ಖಾಸಗಿ ಆಸ್ಪತ್ರೆ ಗಳನ್ನು ನಿಯಂತ್ರಿಸಿ ಜಿಲ್ಲೆಗೆ ಸರಕಾರಿ ಮೆಡಿಕಲ್ ಕಾಲೇಜು ಸ್ಥಾಪನೆಗಾಗಿ, ಖಾಸಗಿ ಆಸ್ಪತ್ರೆ ಗಳ ಲೂಟಿಕೋರ ನೀತಿಯನ್ನು ಖಂಡಿಸಿ ಎಲ್ಲರಿಗೂ ಗುಣಮಟ್ಟದ ಚಿಕಿತ್ಸೆ ಗಾಗಿ ಇಂದು ಡಿ.ವೈ.ಎಫ್.ಐ ವಿಟ್ಲ ವಲಯ ಸಮಿತಿ ವತಿಯಿಂದ ವಿಟ್ಲ ಸಮುದಾಯ ಆರೋಗ್ಯ ಕೇಂದ್ರ ದ ಮುಂದೆ ಪ್ರತಿಭಟನೆ ನಡೆಯಿತು. ಪ್ರತಿಭಟನೆಯನ್ನುದ್ದೇಶಿಸಿ ಡಿ.ವೈ.ಎಫ್.ಐ ಮಾಜಿ ರಾಜ್ಯಾಧ್ಯಕ್ಷರಾದ ಸುನೀಲ್ ಕುಮಾರ್ ಬಜಾಲ್ ಮಾತನಾಡಿ ಸರಕಾರಗಳು ಖಾಸಗಿ ಆಸ್ಪತ್ರೆಗಳ ಏಜೆಂಟರಾಗಿ ಕೆಲಸ ಮಾಡುತ್ತಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಗೆ ಉತ್ತಮವಾದ ಆರೋಗ್ಯ ಸೇವೆ ನೀಡಬೇಕಾದದ್ದು ಸರಕಾರಗಳ ಕರ್ತವ್ಯ ವಾಗಿದ್ದು ಆದರೆ ಇಂದು ನಮ್ಮನ್ನಾಳುವ ಸರಕಾರಗಳು ಸರಕಾರಿ ಆಸ್ಪತ್ರೆಗಳನ್ನು ಬಲಪಡಿಸುವ ಬದಲು ಖಾಸಗಿ ಆಸ್ಪತ್ರೆ ಗಳ ಪರವಾಗಿ ಕೆಲಸಮಾಡುತ್ತಿದೆ ಎಂದು ಆರೋಪಿಸಿದರು. ಲಾಕ್ ಡೌನ್ ಹೆಸರಿನಲ್ಲಿ ಸರಕಾರ ಜನರ ಬದುಕಿನಲ್ಲಿ ಚೆಲ್ಲಾಟವಾಡುತ್ತಿದ್ದು ಎಲ್ಲಾ ಸಾರ್ವಜನಿಕ ಕ್ಷೇತ್ರವನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗುತ್ತಿದ್ದು ಜನರ ಗಮನವನ್ನು ಬೇರೆಡೆ ಸೆಳೆಯಲು ಲಾಕ್ ಡೌನ್ ಹೇರುವ ಮೂಲಕ ಜನರ ಧ್ವನಿಯನ್ನು ಹತ್ತಿಕ್ಕಲಾಗುತ್ತಿದೆ ಎಂದು ಆರೋಪಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡಿ ಡಿ.ವೈ.ಎಫ್ ಜನರ ಬದುಕಿನ ಪ್ರಶ್ನೆಯನ್ನು ಮುಂದಿಟ್ಟು ನಿರಂತರ ಹೋರಾಟ ನಡೆಸುತ್ತಿದ್ದು ಸರಕಾರಿ ಆಸ್ಪತ್ರೆಗಳನ್ನು ಬಲಪಡಿಸಲು ಒತ್ತಾಯಿಸಿ ರಾಜ್ಯಾದ್ಯಂತ ಹೋರಾಟ ನಡೆಸುತ್ತಿದ್ದು ಖಾಸಗಿ ಆಸ್ಪತ್ರೆಗಳ ನಿಯಂತ್ರಣಕ್ಕೆ ಸರಕಾರ ಕಠಿಣ ಕಾನೂನುಗಳನ್ನು ರೂಪಿಸಬೇಕು ಎಂದು ಆಗ್ರಹಿಸಿದರು.

ಕಾರ್ಮಿಕ ಮುಖಂಡರಾದ ರಾಮಣ್ಣ ವಿಟ್ಲ ಮಾತನಾಡಿ ವಿಟ್ಲದಲ್ಲಿ ಡಿ.ವೈ.ಎಫ್.ಐ ನ ಹೋರಾಟದ ಫಲವಾಗಿ ಇಂದು ಸಮುದಾಯ ಆರೋಗ್ಯ ಕೇಂದ್ರ ಹೊಸ ಕಟ್ಟಡದೊಂದಿಗೆ ರಚನೆಗೊಂಡಿದೆ ಆದರೆ ಇಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದ್ದು ಕೂಡಲೇ ವಿಟ್ಲ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಬೇಕೆಂದು ಒತ್ತಾಯಿಸಿ ದರು.

ಪ್ರತಿಭಟನೆಯನ್ನುದ್ದೇಶಿಸಿ ನ್ಯಾಯವಾದಿ ತುಳಸೀದಾಸ್ ವಿಟ್ಲ, ಮಹಮ್ಮದ್ ಇಕ್ಬಾಲ್ ಹಳೆಮನೆ, ಮಾತನಾಡಿದರು, ಡಿ.ವೈ.ಎಫ್.ಐ. ವಿಟ್ಲ ವಲಯಾಧ್ಯಕ್ಷ ನುಜುಮ್ ಅಳಿಕೆ ಸ್ವಾಗತಿಸಿದರು, ಪ್ರಜಾ ಪರಿವರ್ತನಾ ವೇದಿಕೆ ಇದರ ಮುಖಂಡರಾದ ಕೃಷ್ಣಪ್ಪ ಪುದ್ದೊಟ್ಟು, ಬಿ.ಟಿ.ಕುಮಾರ್, ನ್ಯಾಯವಾದಿ ಮಹಮ್ಮದ್ ಗಝಾಲಿ, ಡಿ.ವೈ.ಎಫ್.ಐ ವಿಟ್ಲ ವಲಯ ಕಾರ್ಯದರ್ಶಿ ಜಮೀಲ್, ಮುಖಂಡರಾದ ಶಹೀದ್ ಶೈನ್, ಆರೀಫ್ ಬಿ.ಕೆ, ಇಬ್ರಾಹಿಂ ಭಾಷೀಮ್, ಸಲೀಂ ಮಲಿಕ್, ಸಪ್ವಾನ್, ಮಹಮ್ಮದ್ ಆಲಿ ಮದಕ, ಸಾದಿಕ್,ಸಮೀರ್ ಪಾತರತೋಟ ಜಬ್ಬಾರ್ ಆನೆಕಲ್, ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮನವಿಯನ್ನು ವಿಟ್ಲ ಆರೋಗ್ಯ ಅಧಿಕಾರಿಗಳ ಮುಖಾಂತರ ಸಲ್ಲಿಸಲಾಯಿತು

ಗೂಡಂಗಡಿ ತೆರವು ವಿರುದ್ಧ ಕಾವೂರಿನಲ್ಲಿ ಡಿವೈಎಫ್‌ಐ ಪ್ರತಿಭಟನೆ:

ಮಂಗಳೂರು ನಗರದ ಕಾವೂರು ಜಂಕ್ಷನ್‌ನಲ್ಲಿ ಹಲವು ವರ್ಷಗಳಿಂದ ಕಾರ್ಯಾಚರಿಸುತ್ತಿದ್ದ ಗೂಡಂಗಡಿ ಹಾಗೂ ಹಣ್ಣು ಹೂವುಗಳ ಮಾರುಕಟ್ಟೆಯನ್ನು ಯಾವ ಮುನ್ಸೂಚನೆಯನ್ನೂ ನೀಡದೆ ಮಂಗಳೂರು ನಗರ ಪಾಲಿಕೆ ಅಧಿಕಾರಿಗಳು ಆಗಸ್ಟ್ 24 ರಂದು ಬೆಳಗ್ಗಿನ ಜಾವ ತೆರವುಗೊಳಿಸಿದ್ದಾರೆ. ಈ ವ್ಯಾಪಾರ ಸ್ಥಳಗಳು ಅಕ್ರಮವೆಂದು ನಗರಪಾಲಿಕೆ ಪರಿಗಣಿಸಿದ್ದು, ದಿಢೀರಾಗಿ ತೆರವುಗೊಳಿಸಲಾಗಿದೆ.

ಈ ಸ್ಥಳಕ್ಕೆ ಡಿವೈಎಫ್‌ಐ ಮುಖಂಡರು ಆಗಮಿಸಿ, ಮನಪಾ ಅಧಿಕಾರಿಗಳ ದುಂಡಾವರ್ತಿಯನ್ನು ಖಂಡಿಸಿದರು. ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಬೀದಿ ಬದಿ ವ್ಯಾಪಾರಿಗಳಿಗೆ ಬೆಂಬಲ ವ್ಯಕ್ತಪಡಿಸಿ ಮಾತನಾಡಿ, ವ್ಯಾಪಾರಿಗಳು ತಾವು ಇದ್ದ ಸ್ಥಳದಲ್ಲೇ ವ್ಯಾಪಾರ ನಡೆಸುವಂತೆ ಮಾಡುವುದಾಗಿ ಭರವಸೆ ನೀಡಿದರು.



ದಲಿತ ಯುವಕ ಅನಿಲ್ ಇಂಗಳಗಿ ಅಮಾನುಷ ಕೊಲೆ: ಡಿ.ಹೆಚ್.ಎಸ್ ಖಂಡನೆ

ದಲಿತ ಯುವಕ ಅನಿಲ್ ಇಂಗಳಗಿಯನ್ನು ಸಿಂದಗಿ ತಾಲೋಕ್, ಬೂದಿ ಹಾಳ್.ಪಿ.ಹೆಚ್. ಗ್ರಾಮದಲ್ಲಿ ಊರಿನ ಮಲ್ಲಿಕಾರ್ಜುನ ದೇವಸ್ಥಾನದ ಜಗುಲಿ ಮೇಲೆ ಸವರ್ಣೀಯರ ಸಮನಾಗಿ ಕುಂತದ್ದೇ ತಪ್ಪಾಯಿತು. ಮೇಲ್ ಜಾತಿ ಯುವಕರು ಈ ಅವಮಾನ ಸಹಿಸಲಾರದೆ ಕಣ್ಣಿಗೆ ಕಾರಪುಡಿ ಎರಚಿ ಚಾಕುವಿನಿಂದ ತಿವಿದು ಅಮಾನುಷವಾಗಿ ಕೊಲೆ ಮಾಡಿದ್ದಾರೆ.

ಬಿ.ಜೆ.ಪಿ ಅಧಿಕಾರದಲ್ಲಿ ವಿಜಯಪುರ ಜಿಲ್ಲೇ ಒಂದರಲ್ಲೇ ದಲಿತ ಹೆಣ್ಣು ಮಗಳು ಧಾನಮ್ಮಳನ್ನು ಹತ್ಯಾಚಾರ ಮಾಡಿ ಕೊಲೆ ಮಾಡಲಾಯಿತು, ಅದರ ನಂತರ ಬೈಕ್ ಮುಟ್ಟಿದ ಕಾರಣಕ್ಕೆ ಹಲ್ಲೇ ಮಾಡಲಾಯಿತು, ಈ ಘಟನೆ ಬೆನ್ನಲ್ಲೇ ಇಂತಹ ಘೋರ ಘಟನೆ ನಡೆದಿದೆ. ರಾಜ್ಯದಲ್ಲಿ ಜಾತಿ ತಾರತಮ್ಯ, ಅಸ್ಪೃಶ್ಯತೆ ಇಂತಹ ಕರಾಳ ಕೃತ್ಯಗಳನ್ನು ದಲಿತ ಹಕ್ಕುಗಳ ಸಮಿತಿ. ಕರ್ನಾಟಕ ರಾಜ್ಯ ಸಮಿತಿ ಅತ್ಯುಗ್ರವಾಗಿ ಖಂಡಿಸುತ್ತದೆ. ಆರೋಪಿಗಳನ್ನು ಬಂಧಿಸಿ ಉಗ್ರ ಶಿಕ್ಷೆಗೆ ಒಳಪಡಿಸಬೇಕು ನೊಂದ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿ. ಎಲ್ಲಾ ಘಟಕಗಳು ಘಟನೆಯನ್ನು ಖಂಡಿಸಿ ಪ್ರತಿಭಟನೆ ನಡೆಸಲು ಕರೆನೀಡಿದೆ.

ವಂದನೆಗಳೊಂದಿಗೆ,

ಗೋಪಾಲ ಕೃಷ್ಣ ಹರಳಹಳ್ಳಿ,
ಸಂಚಾಲಕರು, 28.08.2020

ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಖಾಸಗೀಕರಣವನ್ನು ತಡೆಯಲು ಒತ್ತಾಯ

ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರಕಾರ,

ದೇಶದ ಲಾಭದಾಯಕ ಸಾರ್ವಜನಿಕ ಸಂಸ್ಥೆಗಳು ಮತ್ತು ಆಸ್ತಿಗಳ ಅಕ್ರಮ ಮಾರಾಟವನ್ನು ಕೇಂದ್ರ ಸರಕಾರ ಮುಂದುವರೆಸಿದೆ.

ಇದೀಗ ಶ್ರೀ ಅದಾನಿಯವರ ಕಂಪನಿಗೆ ಅಕ್ರಮ ದರಕ್ಕೆ ವಿಶ್ವದ ಅತ್ಯಂತ ಶ್ರೇಷ್ಠ ದರ್ಜೆಯ ಕರ್ನಾಟಕದ, ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮಾರಾಟ ಮಾಡಲು ಮುಂದಾಗಿದೆ. ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿ ಇದನ್ನು ಬಲವಾಗಿ ಖಂಡಿಸುತ್ತದೆ. ಅದೇ ರೀತಿ, ಸದರಿ ನಿಲ್ದಾಣದ ಖಾಸಗೀಕರಣವನ್ನು ತಕ್ಷಣವೇ ಕೈ ಬಿಡುವಂತೆ ಕೇಂದ್ರ ಸರಕಾರವನ್ನು ಬಲವಾಗಿ ಒತ್ತಾಯಿಸುತ್ತದೆ.

ರಾಜ್ಯ ಸರಕಾರ ಲಾಭದಾಯಕವಾಗಿ ನಡೆಯುವ ಈ ಸಂಸ್ಥೆಯ ಖಾಸಗೀಕರಣವನ್ನು ತಡೆಯಲು ಮುಂದಾಗದೇ ಮೌನ ವಹಿಸಿ ನೆರವಾಗುತ್ತಿರುವುದು ಅಕ್ಷಮ್ಯವಾಗಿದೆ. ಕೇರಳದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ರಾಜ್ಯ ಸರಕಾರ ತಿರುವನಂತಪುರಂ ನ ವಿಮಾನ ನಿಲ್ದಾಣವನ್ನು ಉಳಿಸಿಕೊಳ್ಳಲು ಶತಾಯ–ಗತಾಯ ಪ್ರಯತ್ನ, ತೀವ್ರ ಪ್ರತಿರೋಧ ಒಡ್ಡುತ್ತಿರುವಾಗ, ಕರ್ನಾಟಕ ಸರಕಾರದ ಈ ಅಸಹನೀಯ ಮೌನ ಖಂಡನೀಯವಾಗಿದೆ.

ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಖಾಸಗೀಕರಣವನ್ನು ತಡೆಯಲು ರಾಜ್ಯ ಸರಕಾರ ಗಂಭೀರವಾಗಿ ಗಮನ ಹರಿಸಬೇಕು. ಕೇಂದ್ರ ಸರಕಾರ ಅದನ್ನು ಖಾಸಗೀಕರಿಸದಂತೆ ತಡೆಯಲು ಎಲ್ಲ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಅಗತ್ಯ ಬಿದ್ದರೇ, ಕೇರಳ ಸರಕಾರದ ಮಾದರಿಯಲ್ಲಿ ಮಂಗಳೂರು ವಿಮಾನ ನಿಲ್ದಾಣವನ್ನು ಖರೀದಿಸಲು ರಾಜ್ಯ ಸರಕಾರ ಮುಂದಾಗಬೇಕೆಂದು ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸವಾದಿ) ದ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಯು. ಬಸವರಾಜ
ಕಾರ್ಯದರ್ಶಿ 23–8–2020

ದೇವಸ್ಥಾನದಲ್ಲಿ ಸಮನಾಗಿ ಕುಳಿತ ಕಾರಣಕ್ಕೆ ಕೊಲೆಗೈದ ಅಪರಾಧಿಗಳನ್ನು ಕೂಡಲೇ ಬಂಧಿಸಿ, ಶಿಕ್ಷಿಸಲು ಸಿಪಿಐಎಂ ಒತ್ತಾಯ

ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರಕಾರ,

ವಿಜಯಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಬೂದಿಗಾಳ್ ಪಿ.ಹೆಚ್ ಗ್ರಾಮದ ಅನಿಲ್ ಇಂಗಳಗಿ ಎಂಬ ಯುವಕನು ಮಲ್ಲಿಕಾರ್ಜುನ ದೇವಸ್ಥಾನದ ಕಟ್ಟೆಯ ಮೇಲೆ ತಮ್ಮ ಸಮನಾಗಿ ಕುಳಿತನೆಂಬ ಕಾರಣಕ್ಕೆ ಸದರಿ ಗ್ರಾಮದ ಸಿದ್ದು ಬಿರಾದಾರ್ ಜಾಗೂ ಸಂತೋಷ ಬಿರಾದಾರ್ ಎಂಬುವವರು ಕೊಲೆಗೈಯ್ದಿದ್ದಾರೆಂದು ಹೇಳಲಾಗಿದೆ.

ಇದೊಂದು ಜಾತಿ ತಾರತಮ್ಯ ಹಾಗೂ ಅಸ್ಪ್ರಶ್ಯಾಚರಣೆಯ ಅಕ್ಷಮ್ಯ ಹಾಗೂ ಹೇಯ ಮತ್ತು ಬರ್ಬರ ದುಷ್ಕೃತ್ಯವಾಗಿದೆ. ಇದನ್ನು ಸಿಪಿಐಎಂ ಬಲವಾಗಿ ಖಂಡಿಸುತ್ತದೆ. ಇದು ಈಗಲೂ ಗ್ರಾಮೀಣ ಪ್ರದೇಶದಲ್ಲಿ ಭಾರತದ ಸಂವಿಧಾನಾತ್ಮಕ ಕಾನೂನುಗಳು ಜಾರಿಯಲ್ಲಿಲ್ಲವೆಂಬ ಬಲಹೀನತೆಯನ್ನು ಮತ್ತೊಮ್ಮೆ ಎತ್ತಿ ತೋರಿದೆ.

ತಕ್ಷಣವೇ ಅಪರಾಧಿಗಳನ್ನು ಬಂಧಿಸಬೇಕು ಹಾಗೂ ಅವರ ಈ ದುಷ್ಕೃತ್ಯದ ಮೇಲೆ ಕಠಿಣ ಕಾನೂನಿನ ಕ್ರಮ ಕೈಗೊಳ್ಳ ಬೇಕೆಂದು ಸಿಪಿಐಎಂ. ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಅದೇ ರೀತಿ, ಕೂಡಲೇ ಕೊಲೆಗೀಡಾದ ಅನಿಲ್ ಇಂಗಳಗಿ ಕುಟುಂಬಕ್ಕೆ ಅಗತ್ಯ ಪರಿಹಾರಗಳನ್ನು ಘೋಷಿಸಬೇಕು.

ಸದರಿ ಗ್ರಾಮದ ದಲಿತರಿಗೆ ಅಗತ್ಯ ರಕ್ಷಣೆಯನ್ನು ಒದಗಿಸಲು ಹಾಗೂ ಜಾತಿ ತಾರತಮ್ಯ ಮತ್ತು ಅಸ್ಪ್ರಶ್ಯಾಚರಣೆ ತಡೆ ಕಾಯ್ದೆಗಳನ್ನು ಆ ಪ್ರದೇಶದಲ್ಲಿ ವ್ಯಾಪಕವಾಗಿ ಜಾರಿಗೆ ತರಲು ಅಗತ್ಯ ಕ್ರಮ ವಹಿಸುವಂತೆ ಸಿಪಿಐಎಂ ಒತ್ತಾಯಿಸುತ್ತದೆ.

ದಲಿತರ ಮೇಲಿನ ಇಂತಹ ದೌರ್ಜನ್ಯ ಹಾಗೂ ಅಪರಾಧಗಳನ್ನು ತಡೆಯಲು ಮತ್ತು ಕಠಿಣ ಕ್ರಮವಹಿಸಲು ಪರಿಶಿಷ್ಠ ಜಾತಿ ಹಾಗೂ ಪಂಗಡದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯನ್ನು ಮತ್ತಷ್ಟು ಬಲಗೊಳಿಸ ಬೇಕಾಗಿದೆ. ಈ ಕುರಿತು ಅಗತ್ಯ ಕ್ರಮವಹಿಸುವಂತೆ ಒತ್ತಾಯಿಸುತ್ತದೆ.

ಯು. ಬಸವರಾಜ
ಕಾರ್ಯದರ್ಶಿ 28–8–2020







ಸಿಂದಗಿ ತಾಲ್ಲೂಕಿನ, ಬೂದಿಗಾಳ ಪಿಎಚ್ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನ ದ ಕಟ್ಟೆಯ ಮೇಲೆ ಕೆಲವು ದಿನಗಳ ಹಿಂದೆ ದಲಿತ ಯುವಕ ಅನಿಲ ಇಂಗಳಗಿ, ನಮಗೆ ಸರಿಸಮನಾಗಿ ಕುಳಿತಿದ್ದ ಎಂಬ ಕಾರಣಕ್ಕೆ, ಮೇಲ್ಜಾತಿಯ ಸಿದ್ದು ಸುಭಾಸ್ ಬಿರಾದಾರ್ ಮತ್ತೊಬ್ಬರು ಸೇರಿಕೊಂಡು, ಕಣ್ಣಿಗೆ ಕಾರದ ಪುಡಿ ಎರಚಿ, ಚೂರಿಯಿಂದ ಇರಿದು ಕೊಂದು ಹಾಕಿದ್ದರ, ವಿರುದ್ದ, ಇಂದು (28 ಆಗಸ್ಟ್), ದಲಿತ ಹಕ್ಕುಗಳ ಸಮಿತಿ, ಬೆಂಗಳೂರು ಪೂರ್ವ ವಲಯ ಸಮಿತಿಯ ವತಿಯಿಂದ, ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ, ದಲಿತ್ ಶೋಷಣ್ ಮುಕ್ತಿ ಮಂಚ್ (ಡಿ ಎಸ್ ಎಮ್ ಎಮ್), ನ ರಾಷ್ಟ್ರೀಯ ಸದಸ್ಯರಾದ, ನಾಗರಾಜ ನಂಜುಂಡಯ್ಯ ನವರ ನೇತೃತ್ವದಲ್ಲಿ, ಸಿಪಿಐ((ಎಂ), ಪಕ್ಷದ ಜಿಲ್ಲಾ ಮತ್ತು ವಲಯ ಸದಸ್ಯ ರಾದ, ಪಿ.ಮುನಿರಾಜು, ಸಿ.ರಮೇಶ್, ಬೀದಿ ಬದಿ ವ್ಯಾಪಾರಿ ಪ್ರತಿನಿಧಿ ಶ್ರೀನಿವಾಸ್, ಬಿಎನ್ ಶ್ರೀನಿವಾಸ್, ಮಂಗಳ, ವೆಂಕಟೇಶ್ ಇನ್ನಿತರರು ಭಾಗವಸಿದ್ದರು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ನಗರ ಪ್ರದೇಶಕ್ಕೂ ವಿಸ್ತರಣೆ ಆಗ್ರಹ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(AIAWU)ದ ನೆತೃತ್ವದಲ್ಲಿ ಬೈಂದೂರಿನ ತಗ್ಗರ್ಸೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೃಷಿ ಕೂಲಿಕಾರರ ಸಮಾವೇಶವು ದಿನಾಂಕ 27 ಆಗಸ್ಟ್ 2020 ರಂದು ಸ್ಥಳೀಯ ಶಾರದೋತ್ಸವ ಮಂಟಪದ ಸಭಾಂಗಣದಲ್ಲಿ ಯಶಸ್ವಿಯಾಗಿ ಜರುಗಿತು. ಬೈಂದೂರು ತಾಲೂಕು ಸಿಐಟಿಯು ಕಾರ್ಮಿಕ ಸಂಘದ ಸಂಚಾಲಕ ಉದಯ ಗಾಣಿಗ ಮೊಗೇರಿ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ, ಕೊರೊನ ಸಂಕಷ್ಟದ ಈ ಸಂದರ್ಭದಲ್ಲಿ ನಿರುದ್ಯೋಗದ ಲ್ಲಿರುವ ಕೂಲಿಕಾರರಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಗರಿಷ್ಠ ಪ್ರಮಾಣದಲ್ಲಿ ಉದ್ಯೋಗ ನೀಡಬೇಕೆಂದು ಹಾಗೂಬೈಂದೂರು ಪಟ್ಟಣ ಪಂಚಾಯತ್ ನಗರ ವ್ಯಾಪ್ತಿಯಲ್ಲೂ ನರೇಗಾ ಕೆಲಸ ವಿಸ್ತರಣೆ ಮಾಡಬೇಕು ಎಂದು ಸರ್ಕಾರವನ್ನುಆಗ್ರಹಿಸಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಕೃಷಿಕೂಲಿಕಾರಿಗೂ ಕೊರೊನ ಪರಿಹಾರ ಧನ ನಗದು ಮಾಸಿಕ ರೂಪಾಯಿ 7500/=ರಂತೆ ಮುಂದಿನ ಆರು ತಿಂಗಳು ಬಿಡುಗಡೆ ಮಾಡುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಲು, ದಿನಾಂಕ: 01 ಸೆಪ್ಟೆಂಬರ್ 2020, ಮಂಗಳವಾರ ನಾಡ, ಮತ್ತು ಉಪ್ಪುಂದ ಗ್ರಾಮ ಪಂಚಾಯತ್ ಕಚೇರಿ ಎದುರು ಜರುಗುವ ಧರಣಿ ಮುಷ್ಕರ ಯಶಸ್ವಿಗೊಳಿಸಬೇಕು ಎಂದು ಕರೆ ಕೊಟ್ಟರು. ಸ್ಥಳಿಯ ಕೂಲಿ, ಕಾರ್ಮಿಕ ಮುಖಂಡ ಗೋವಿಂದ ಪೂಜಾರಿ ತಗ್ಗರ್ಸೆ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ವರದಿ: ವೆಂಕಟೇಶ್ ಕೋಣಿ



ಪರಿಹಾರ ಮತ್ತು ಪರ್ಯಾಯ ಸಪ್ತಾಹ ದ ಅಂಗವಾಗಿ, ಬೆಂಗಳೂರು ಬಿಬಿಎಂಪಿ ಕೇಂದ್ರ ಕಚೇರಿ ಯ ಮುಂದೆ, ಮನೆ ಕೆಲಸ ಮಾಡುವ ಮಹಿಳೆಯರಿಗೆ, ಮೇಯರ್ ವಿವೇಚನಾ ನಿಧಿಯಿಂದ ಪರಿಹಾರ ನೀಡಬೇಕೆಂದು ಬಿ ಬಿ ಎಮ್ ಪಿ ಮೇಯರ್ ಹಾಗೂ ಆಯುಕ್ತಕರಿಗೆ ಮನವಿ ಸಲ್ಲಿಸಲಾಯಿತು. ಕಾಮ್ರೇಡ್ ಕೆ ಎನ್ ಉಮೇಶ್, ನಾಗರಾಜ ನಂಜುಂಡಯ್ಯ, ಸೆಲ್ವಿ ಇನ್ನಿತರರು ನಿಯೋಗದಲ್ಲಿದ್ದರು. ಅಂದು (26 ರಂದು) ನಡೆದ ಮೌನ ಪ್ರತಿ ಭಟನೆಯಲ್ಲಿ, ಸುಮಾರು 500 ಕ್ಕೂ ಹೆಚ್ಚು ಮಹಿಳೆಯರು ಬೆಂಗಳೂರು ಧಕ್ಷಿಣ ಮತ್ತು ಉತ್ತರ ಜಿಲ್ಲೆಗಳಿಂದ ಭಾಗವಹಿಸಿದ್ದರು



ಬಂಡವಾಳವಾದದ ಅಸ್ವಸ್ಥ ಸ್ಥಿತಿ ಮತ್ತು ಸಮಾಜವಾದದ ಅಧಿಕಾರ ಸ್ಥಾಪನೆಯ ಜರೂರು

ಅತಿಥಿ ಅಂಕಣ



ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ

ಅಸ್ವಸ್ಥ ವ್ಯವಸ್ಥೆಯಾದ ಬಂಡವಾಳಶಾಹಿಯ ವ್ಯಕ್ತಿರೂಪಗಳಾದ ಅಸ್ವಸ್ಥ ಮನಸ್ಸಿನ ಬಂಡವಳಿಗರ ಜೀವನದೃಷ್ಟಿಯನ್ನು ಸ್ವಸ್ಥ, ವೈಚಾರಿಕ, ತಾರ್ಕಿಕ ಮತ್ತು ಆರೋಗ್ಯಕರ ಮನಸ್ಸಿನ ಸಮಾಜವಾದೀ ಜೀವನದೃಷ್ಟಿಗೆ ಉಪದೇಶಗಳಿಂದ, ಹೃದಯ ಪರಿವರ್ತನೆಯಿಂದ, ಬದಲಿಸುವುದು ಸಾಧ್ಯವೆ? ಸಾಧ್ಯ ಎಂದಾದರೆ ಹಾಗೆ ಮಾಡುವುದು ಎಲ್ಲ ದೃಷ್ಟಿಯಿಂದಲೂ ಒಳ್ಳೆಯದೆ. ಹಾಗಿಲ್ಲದಿದ್ದರೆ ಮಾರ್ಕ್ಸ್ 170 ವರ್ಷಗಳ ಹಿಂದೆಯೇ ಹೇಳಿದಂತೆ ಬಂಡವಾಳಶಾಹಿಯನ್ನು ಕೆಳಗಿಳಿಸಿ ಅಧಿಕಾರ ಪಡೆಯುವುದೊಂದೇ ಸಮಾಜವಾದದಲ್ಲಿ ನಂಬಿಕೆ ಇರುವ ಎಲ್ಲರಿಗೂ ಈಗ ಉಳಿದಿರುವ ದಾರಿ.

'ಈ ವಿಶ್ವವು ಪರಿಸರನಾಶ, ಭೂತಾಪದ ಹೆಚ್ಚಳ ಮುಂತಾದ ಕಾರಣಗಳಿಂದಾಗಿ ಮೊದಲು ನಾಶವಾಗುತ್ತದೆಯೋ ಅಥವಾ ಬಂಡವಾಳಶಾಹಿ ವ್ಯವಸ್ಥೆಯಿಂದಾಗಿ ಮೊದಲು ನಾಶವಾಗುತ್ತದೆಯೋ ಹೇಳಲಾಗದು' ಎಂಬ ಸ್ಟೀಫನ್ ಹಾಕಿನ್ಸ್ ಮಾತು ಬಂಡವಾಳಶಾಹಿ ವ್ಯವಸ್ಥೆಯು ತಲುಪಿರುವ ಗಂಭೀರ ರೋಗ ಸ್ಥಿತಿಯನ್ನು ಬಿಂಬಿಸುತ್ತದೆ. ಇದನ್ನು ನಮ್ಮ ಸಹಜೀವಿಗಳಿಗೆ ಜರೂರಾಗಿ ಅರ್ಥಮಾಡಿಸುವ ಹೊಣೆ ನಮ್ಮೆಲ್ಲರ ಮೇಲೆ ಇದೆ.



ರಾಷ್ಟ್ರ ಎಂದ ತಕ್ಷಣ ಆಳುವ ವರ್ಗಗಳಿಗೆ ರಾಷ್ಟ್ರಪ್ರೇಮ ಮೇಲೆದ್ದು ಬರುತ್ತದೆ. ರಾಷ್ಟ್ರವನ್ನು ಧಾರ್ಮಿಕವಾಗಿ ಕಲ್ಪಿಸಿಕೊಂಡಾಗ ಇದೇ ರಾಷ್ಟ್ರಭಕ್ತಿ ಆಗುತ್ತದೆ. ಜನರನ್ನು ಹೊರಗಿಟ್ಟ ಗಡಿಗಳೊಳಗಿನ ಭೂಮಿ, ನದಿ, ಬೆಟ್ಟ ಗುಡ್ಡಗಳ ಅಮೂರ್ತ ಚಿತ್ರವು ರಾಷ್ಟ್ರಮಾತೆ ಅಥವಾ ರಾಷ್ಟ್ರಪಿತನ ಪ್ರತೀಕವಾಗುತ್ತದೆ. ನಿಜವಾದ ರಾಷ್ಟ್ರವೆಂದರೆ ಈ ಭೂ ಪ್ರದೇಶದಲ್ಲಿ ವಾಸಿಸುವ ಜನ, ಅವರ ಶ್ರಮಶಕ್ತಿ, ಆ ಪ್ರದೇಶದಲ್ಲಿ ಸಿಗುವ ಖನಿಜ ನಿಕ್ಷೇಪಗಳು ಮತ್ತು ನೈಸರ್ಗಿಕ ಸಂಪನ್ಮೂಲಗಳು. ಆದರೆ, ಇವನ್ನು ಬಳಸಿಕೊಂಡು ಶ್ರಮಿಕರ ಶೋಷಣೆ ಮಾಡಿ ಬಂಡವಳಿಗರು ಉತ್ಪಾದಿಸುವ ಸರಕೇ ದೇಶದ ಸಂಪತ್ತು ಎಂದಾಗಿದೆ. ಹಳ್ಳಿ–ಪಟ್ಟಣ–ನಗರಗಳೊಳಗೆ ಸಾರ್ವಜನಿಕರ ಬಳಕೆಗೆ ಸಿಗುವುದು ಮಾತ್ರ 'ಸಾರ್ವಜನಿಕ ಸಂಪತ್ತು'.ಅದರ ರಕ್ಷಣೆಯ ಹೆಸರಿನಲ್ಲಿ ಬಂಡವಳಿಗರ ಸಂಪತ್ತನ್ನು ಬಡವರಿಂದ ರಕ್ಷಿಸಲು ಪೋಲೀಸ್ ಪಡೆ ಇದೆ. ರಾಷ್ಟ್ರದ, ಅಂದರೆ ಬಂಡವಳಿಗರ ಹಿಡಿತದಲ್ಲಿರುವ ಸಂಪತ್ತನ್ನು ಹೊರಗಿನ ಬಂಡವಳಿಗರಿಂದ ರಕ್ಷಿಸಲು ಸೇನೆ ಮತ್ತು ಅರೆಸೇನಾಪಡೆಗಳಿವೆ. ಪೋಲೀಸ್ ಪಡೆಯಲ್ಲಿ ಪೇದೆ ಎಂದು, ಸೇನಾ ಪಡೆಗಳಲ್ಲಿ ಜವಾನ್ ಎಂದು ಕರೆಯುವ ಬಹುತೇಕ ಯುವಜನರು ಪಟ್ಟಣ ಪ್ರದೇಶಗಳ ಹಾಗೂ ಕುಗ್ರಾಮಗಳ ಬಡವರು. ನಿರುದ್ಯೋಗದ ಕಾರಣಕ್ಕಾಗಿ ಮತ್ತು ದೃಢಕಾಯರಾಗಿರುವುದರಿಂದ ಪೋಲೀಸ್ ಪಡೆಯನ್ನು ಸೇರಿದವರು. ಆರ್ಥಿಕ ಕ್ಷೋಭೆಗಳು ಉಂಟಾದಾಗ, ಅವುಗಳ ಬಿಸಿ ನೇರವಾಗಿ ಶ್ರಮಿಕರಿಗೆ ತಗುಲುತ್ತದೆ. ಅವುಗಳ ವಿರುದ್ಧ ರಾಜಕೀಯ ಆಂದೋಲನಗಳು ನಡೆದಾಗ ಅವುಗಳಲ್ಲಿ ಮುಖ್ಯವಾಗಿ ಭಾಗಿಗಳಾಗುವವರು ಶ್ರಮಿಕರು ಅಂದರೆ ಸಾಮಾನ್ಯ ಜನರು. ಇಂಥ ಕ್ಷೋಭೆಗಳು ಉಂಟಾದಾಗ ಅವುಗಳ ಹಿಂದಿರುವ ಸಮಸ್ಯೆಗಳನ್ನು ಗುರುತಿಸಿ ಅವನ್ನು ಪರಿಹರಿಸಲು ಸಂಬಂಧಿಸಿದ ಅಧಿಕಾರಿಗಳನ್ನು ಕಳಿಸುವ ಬದಲು ಆಳುವ ವರ್ಗವು ಪೋಲೀಸರನ್ನು ಕಳಿಸುತ್ತದೆ. ಇದರಿಂದ ಸಮವಸ್ತ್ರಧರಿಸಿದ ಬಡಜನರಾದ ಪೋಲೀಸರು, ಸಮವಸ್ತ್ರವಿಲ್ಲದ ಬಡಜನರನ್ನು ಸುವ್ಯವಸ್ಥೆ ಮತ್ತು ಕಾನೂನು ಪಾಲನೆಯ ಹೆಸರಿನಲ್ಲಿ ದಮನ ಮಾಡುವಂತಾಗುತ್ತದೆ. ಪ್ರತಿಭಟನೆಯ ಪ್ರತಿರೋಧವು ತೀವ್ರವಾಗಿ ಪರಿಸ್ಥಿತಿಯು ಪೋಲೀಸರ ಕೈ ಮೀರಿದಾಗ ಅವರಿಗೂ ಶ್ರಮಿಕರಿಗಾಗುವಂತೆಯೇ ಸಾಕಷ್ಟು ತೊಂದರೆಯಾಗುತ್ತದೆ. ಪ್ರತಿಭಟನಕಾರರು ಮತ್ತು ಪೋಲೀಸರು, ಇಬ್ಬರಲ್ಲಿ ಯಾರಿಗೇ ತೊಂದರೆಯಾದರೂ ಒಟ್ಟಿನಲ್ಲಿ ಜನಸಾಮಾನ್ಯರಿಗೆ ತೊಂದರೆಯಾಗುತ್ತದೆಯೇ ಹೊರತು ಆಳುವ ವರ್ಗದ ಯಾರಿಗೂ ತೊಂದರೆಯಾಗುವುದಿಲ್ಲ. ಎಷ್ಟೋ ಸಲ ಆಳುವವರ ದೌರ್ಜನ್ಯವನ್ನು ಮರೆಮಾಚಲು ಪೋಲೀಸರನ್ನು ಬಲಿಪಶುಗಳನ್ನಾಗಿ ಮಾಡಿ ದಂಡಿಸಬಹುದು. ಅಲ್ಲದೆ, ಪೋಲೀಸರು ವ್ಯವಸ್ಥೆಯಲ್ಲಿನ ತಮ್ಮ ಸ್ಥಾನದಿಂದಾಗಿ, ಆಳುವ ವರ್ಗದೊಂದಿಗೆ ಗುರುತಿಸಿಕೊಳ್ಳಬೇಕಾದ ಅನಿವಾರ್ಯತೆಯಿಂದಾಗಿ ಜನರಪರವಾಗಿಲ್ಲದಂತೆ ಕಾಣಿಸುತ್ತಾರೆ. ಪ್ರಜ್ಞಾಪೂರ್ವಕವಾಗಿ ವ್ಯವಸ್ಥೆಯ ಪರವಾಗಿರುವ ಪೋಲೀಸರಿಗೆ ಪ್ರಶಸ್ತಿ, ಬಹುಮಾನಗಳೂ, ಕಾನೂನಿನ ಸಿಕ್ಕುಗಳಲ್ಲಿ ಸಿಕ್ಕಿಕೊಂಡವರನ್ನು ಅವುಗಳಿಂದ ಪಾರು ಮಾಡಬಲ್ಲಂಥ ಎಲ್ಲ ಕುಟಿಲ, ಧೂರ್ತ ಉಪಾಯಗಳೂ ಆಳುವವರಿಂದ ಸಿಗುತ್ತವೆ.

ಸೇನೆಗಳಲ್ಲಿ ಭರ್ತಿಯಾಗುವ ಯುವಕರೂ ಸಹ ಬಡವರೇ ಮತ್ತು ಜನಸಾಮಾನ್ಯರೇ. ಮಧ್ಯಮ ಮತ್ತು ಕೆಳಮಧ್ಯಮ ವರ್ಗಗಳಿಂದ ಬಂದ ಸುಶಿಕ್ಷಿತ ಯುವಕರು ಸೇನೆಯ ಆಫೀಸರ್ ಹುದ್ದೆಗಳಲ್ಲಿ ಇರುತ್ತಾರೆ. ನಾಡಿನ ಕುಗ್ರಾಮಗಳ ಅಶಿಕ್ಷಿತ, ಅರೆಶಿಕ್ಷಿತ ಬಡ ಕುಟುಂಬಗಳಿಂದ, ಬಂದ ಯುವಕರಲ್ಲಿ ಬಹಳಷ್ಟು ಜನರು ನಿರುದ್ಯೋಗದಿಂದ ಪಾರಾಗುವ ಪ್ರಧಾನ ಉದ್ದೇಶದಿಂದ ಸೇನೆಗೆ ಭರ್ತಿಯಾಗುತ್ತಾರೆ. ಉಳಿದವರು ದೇಶಸೇವೆಯ ನೈಜ ಉದ್ದೇಶವೂ ಸೇರಿದಂತೆ, ಬೇರೆ ಬೇರೆ ಕಾರಣಗಳಿಗಾಗಿ ಸಹ ಸೇನೆಯಲ್ಲಿ ಭರ್ತಿಯಾಗುತ್ತಾರೆ. ಅವರು ದೇಶದ ಹೆಸರಿನಲ್ಲಿ ರಕ್ಷಿಸುವುದು, ದೇಶದ ಬೆನ್ನೆಲುಬಾದ ಶ್ರಮಿಕರು ಮತ್ತು ಶೋಷಿತರ ಹಿತವನ್ನಲ್ಲ, ಶೋಷಕರನ್ನು. ಇದು ಅವರಿಗೆ ತಿಳಿದಿರುವ ಸಂಭವ ತೀರಾ ಕಡಿಮೆ. ನಾನಾ ಬಗೆಯ ಅಪಾಯಗಳಿಗೆ ಎದೆಯೊಡ್ಡಿ, ಅಂಗವಿಕಲರಾಗಿ, ಶವಗಳಾಗಿ, ತಮ್ಮ ಕುಗ್ರಾಮಗಳಿಗೆ ಮರಳುವ ಈ ಯುವಕರ ಸಾವು ಬಲಿದಾನ ಎಂಬುದರಲ್ಲಿ, ಯಾವುದೇ ಉತ್ಪ್ರೇಕ್ಷೆಯಿಲ್ಲ. ಆದರೆ ಹೀಗೆ ಪ್ರಾಣಬಿಡುವ ಯುವಕರನ್ನು ಹುತಾತ್ಮರೆಂದು, ಅಪ್ರತಿಮ ದೇಶಭಕ್ತರೆಂದು ಹಾಡಿ ಹೊಗಳುವವರು ರಾಜಕಾರಣಿಗಳು. ಅವರ ಈ ಹೊಗಳಿಕೆಯು ಪ್ರಾಮಾಣಿಕವೆಂದು ಪರಿಗಣಿಸುವುದಾದರೆ ಅದರ ಹಿಂದೆಯೇ ಸರಳವಾದ ಪ್ರಶ್ನೆಯೊಂದು ಏಳುತ್ತದೆ. ಈ ರಾಜಕಾರಣಿಗಳು, ಭಾರಿ ಉದ್ಯಮಿಗಳು ಮತ್ತು ಕೋಟ್ಯಾಧಿಪತಿಗಳು ತಮ್ಮ ಮಕ್ಕಳನ್ನು, ಕುಟುಂಬದ ದೃಢಕಾಯದ ಯುವಕರನ್ನು ಇಂಥ ದೇಶಸೇವೆಯಲ್ಲಿ ಯಾಕೆ ತೊಡಗಿಸುವುದಿಲ್ಲ? ಅವರಿಗೆ ದೇಶಪ್ರೇಮ, ರಾಷ್ಟ್ರಭಕ್ತಿ ಇಲ್ಲವೆ?

ರಾಷ್ಟ್ರದೊಳಗೇ ನಡೆಯುವ ಆಂದೋಲನಗಳಾಗಲಿ, ದೇಶ ದೇಶಗಳ ನಡುವೆ ನಡೆಯುವ ಕದನಗಳಾಗಲಿ, ಅಥವಾ ಜಾಗತಿಕ ಯುದ್ಧಗಳಾಗಲಿ, ಶ್ರಮಶೋಷಣೆಯ ಕಾರಣಗಳಿಗಾಗಿಯೇ ನಡೆಯುತ್ತವೆ. ಬಹಳ ಹಿಂದಿನಿಂದಲೂ ಭೂಮಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸ್ವಾಧೀನಕ್ಕಾಗಿ ಯುದ್ಧಗಳು ನಡೆಯುತ್ತಾ ಬಂದಿವೆ. ಮತ್ತು ಅದಕ್ಕಿಂತ ಮುಖ್ಯವಾಗಿ ಜಾಗತಿಕ ಮಾರುಕಟ್ಟೆಯ ವಿಸ್ತರಣೆಗಾಗಿ ಆಕ್ರಮಣ, ರಕ್ಷಣೆ ಮತ್ತು ಪ್ರತ್ಯಾಕ್ರಮಣದ ರೂಪದಲ್ಲಿ ಯುದ್ಧಗಳು ನಡೆಯುತ್ತಾ ಬಂದಿವೆ. ಈ ಯುದ್ಧಗಳಿಂದ ಯಾವಾಗಲೂ ತೊಂದರೆ ಯಾಗುವುದು ಶೋಷಿತರಿಗೇ. ಜೀವನ ಮಟ್ಟದ ಕುಸಿತ. ಅಗತ್ಯವಸ್ತುಗಳ ಕೊರತೆ, ಬೆಲೆಯೇರಿಕೆ, ಸಾವು–ನೋವು ಎಲ್ಲವೂ ತಗುಲುವುದು ಬಡವರಿಗೇ. ಯುದ್ಧಗಳ ನೇರ ಫಲಾನುಭವಿಗಳು ಭಾರಿ ಬಂಡವಳಿಗರು ಬೃಹತ್ಉದ್ಯಮಿಗಳು ಮತ್ತು ದೊಡ್ಡ ದೊಡ್ಡ ವ್ಯಾಪಾರಿಗಳು.

ಗುಲಾಮೀ ಸಮಾಜದಿಂದ ಮೊದಲುಗೊಂಡು ಊಳಿಗಮಾನ್ಯ ಸಮಾಜದವರೆಗೂ ಉತ್ಪಾದನಾ ಸಾಧನಗಳು, ಶ್ರಮ ಸಂಬಂಧಗಳು ಮತ್ತು ವಸ್ತುಸ್ಥಿತಿಗಳಲ್ಲಿ ನಿರ್ದಿಷ್ಟ ಬಗೆಯ ಬದಲಾವಣೆ ಯಾಗುತ್ತಾ ಬಂದಿದೆ. ಈ ಬದಲಾವಣೆಗಳು ಜನರಲ್ಲಿ ಒಟ್ಟಾರೆಯಾಗಿ ಆಗ ಇದ್ದ ಜೀವನದ ಮಟ್ಟದ ಬಗ್ಗೆ ಅತೃಪ್ತಿಯನ್ನು ಹೆಚ್ಚಿಸಿವೆ. ಜೀವನಮಟ್ಟವನ್ನು ಹೆಚ್ಚಿಸಿಕೊಳ್ಳುವ ಅವಕಾಶಗಳನ್ನು ಸೃಷ್ಟಿಸಿವೆ. ಹಾಗೆಯೇ ಅವಕ್ಕೆ ಅಂದಿನ ಆಳುವ ವರ್ಗಗಳು ವಿರೋಧವನ್ನೂ ಒಡ್ಡಿವೆ. ಇದರ ಫಲವಾಗಿನಡೆದ ಎಲ್ಲಾ ದಂಗೆ, ಪ್ರತಿಭಟನೆ, ಕ್ರಾಂತಿ ಮೊದಲಾದ ತೀವ್ರಸ್ವರೂಪದ ಹೋರಾಟಗಳಲ್ಲಿ ಜನಸಾಮಾನ್ಯರೇ ಬಹುಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. ಅವರೇ ಸಾಕಷ್ಟು ಸಂಖ್ಯೆಯಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಅತೀವ ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ. ಆಗ, ಅಂಥ ಹೋರಾಟಗಳ ಫಲಾನುಭವಿಯಾಗಿದ್ದ ಬಂಡವಾಳಶಾಹಿಯು ಹಿಂದಿನ ಎಲ್ಲಾ ವ್ಯಸ್ಥೆಗಳಿಗಿಂತಲೂ ಕ್ರಾಂತಿಕಾರಕವಾಗಿತ್ತು. ತಂತ್ರಜ್ಞಾನದಲ್ಲಿ ಆದ ಹೊಸ ಆವಿಷ್ಕಾರಗಳ ಲಾಭ ಪಡೆದು ಕೈಗಾರಿಕಾ ಉತ್ಪಾದನೆ, ಶ್ರಮವಿಭಜನೆ ಮತ್ತು ಹೆಚ್ಚುವರಿ ಮೌಲ್ಯದ ಸಂಚಯ ಪ್ರಾರಂಭವಾಯಿತು. ಬಂಡವಾಳ ವರ್ಗದ ಜೊತೆ ಜೊತೆಯಲ್ಲೇ ಕಾರ್ಮಿಕವರ್ಗವೂ ಹುಟ್ಟಿಕೊಂಡಿತು. ಸರಕು ವ್ಯಾಪಾರದ ಹೊಸ ಮಾರ್ಗಗಳು, ಸರಕು ಸಾಗಾಣಿಕಾ ಸಾಧನಗಳು, ವಸಾಹತುಗಳು, ಜಾಗತಿಕ ಮಾರುಕಟ್ಟೆಯ ಉದಯ ಮುಂತಾದವಸ್ತು ಸ್ಥಿತಿಗಳು ಉಂಟಾದವು, ಉತ್ಪಾದನಾ ಸಾಧನಗಳು ಮತ್ತು ಶ್ರಮಸಂಬಂಧಗಳು ಮತ್ತಷ್ಟು ಬದಲಾವಣೆಗಳಿಗೆ ಒಳಗಾಗುತ್ತಾ ಬಂಡವಾಳವಾದೀ ಸಂಬಂಧಗಳಲ್ಲೂ ವೈರುಧ್ಯಗಳು ಕಾಣಿಸಿಕೊಂಡವು. 20ನೇ ಶತಮಾನಕ್ಕೆ ಬರುವ ಹೊತ್ತಿಗೆ ತಂತ್ರಜ್ಞಾನ ಮತ್ತು ಉತ್ಪಾದನಾ ಸಂಬಂಧಗಳಲ್ಲಿ, ಹಿಂದೆಂದಿಗಿಂತಲೂ ಕ್ಷಿಪ್ರಗತಿಯಲ್ಲಿ ಕಾಣಿಸಿಕೊಂಡ ಬದಲಾವಣೆಗಳು, ಅವು ಹುಟ್ಟಿಸಿದ ವೈರುಧ್ಯಗಳು ಸಮಾಜವಾದೀ ವ್ಯವಸ್ಥೆಗೆ ಬದಲಾಗಬೇಕಾದ ಅಗತ್ಯವನ್ನು ಸೃಷ್ಟಿಸಿದವು. ಹೀಗೆ ಹೊಸ ವ್ಯವಸ್ಥೆಗೆ ಜಾಗಕೊಟ್ಟು ತಾನು ಚರಿತ್ರೆಯಲ್ಲಿ ಮರೆಯಾಗಬೇಕಾದಾಗ ಮಾತ್ರ ಬಂಡವಾಳಶಾಹಿಯು ತನ್ನ ಕ್ರಾಂತಿಕಾರಕ ಗುಣಗಳನ್ನು ಕಳೆದುಕೊಂಡು ಸಮಾಜವಾದವನ್ನು ವಿರೋಧಿಸಿತು. ಹೇಗಾದರೂ ಸರಿ, ಏನೇ ಬದಲಾವಣೆಯಾದರೂ ಸರಿ, ತಾನು ವಿರೋಧಿಸುವ ಸಮಾಜವಾದೀ ವ್ಯವಸ್ಥೆಯು ಪ್ರತಿಪಾದಿಸುವ ಸುಧಾರಣೆಗಳನ್ನು ಅಳವಡಿಸಿಕೊಂಡಾದರೂ ಸರಿ, ಬಂಡವಾಳಶಾಹಿ ವ್ಯವಸ್ಥೆಯ ಮೂಲಸ್ವರೂಪ ಬದಲಾಗದಂತೆ ನೋಡಿಕೊಳ್ಳಲು ತನ್ನ ಎಲ್ಲ ಶಕ್ತಿಯನ್ನೂ ವಿನಿಯೋಗಿಸಿತು. ಅಂದರೆ, ಶ್ರಮಶೋಷಣೆಯ ಹೆಚ್ಚುವರಿ ಮೌಲ್ಯದ ಉತ್ಪಾದನೆಯನ್ನು ಹಾಗೇ ಉಳಿಸಿಕೊಳ್ಳಬೇಕು, ಶ್ರಮಿಕರ ಸಮಾಜವಾದೀ ವ್ಯವಸ್ಥೆ ಎಂದಿಗೂ ಬರಬಾರದು ಎಂಬ ನಿಲುವನ್ನು ತಾಳುತ್ತಾ

ಪುಟ 15 ಕ್ಕೆ





ನ್ಯಾಯಾಂಗ ನುಣುಚಿಕೆ, ನ್ಯಾಯಾಂಗ ಕಸರತ್ತು ಇತ್ಯಾದಿ

ಸರ್ವೋಚ್ಚ ನ್ಯಾಯಾಲಯದಲ್ಲಿ ಕಳವಳಕಾರೀ ಪ್ರವೃತ್ತಿಗಳು

ಕಾರ್ಯಾಂಗದ ಅಗತ್ಯಗಳಿಗೆ ಅನುಗುಣವಾಗಿ ವಿನಮ್ರವಾಗಿ ಹೊಂದಿಕೊಳ್ಳುವ ಒಂದು ಬೆದರಿದ ನ್ಯಾಯಾಂಗ ಎಂಬುದೊಂದು ಆತಂಕಕಾರಿ ಬೆಳವಣಿಗೆ. ಇದರಿಂದ ಸರಕಾರ ಕಾನೂನು ಮತ್ತು ಸಂವಿಧಾನದ ವಿಧಿ–ವಿಧಾನಗಳನ್ನು ಉಲ್ಲಂಘಿಸಿದಾಗ ಅದನ್ನು ಉತ್ತರದಾಯಿಯಾಗಿಸುವ ಮತ್ತು ನಾಗರಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ನ್ಯಾಯಾಂಗದ ಪಾತ್ರಕ್ಕೆ ಧಕ್ಕೆ ಬರುತ್ತದೆ. ನ್ಯಾಯಾಂಗದ ಸಮಗ್ರತೆ ಮತ್ತು ಸ್ವಾತಂತ್ರ್ಯದಲ್ಲಿ ಆಗಿರುವ ಸವೆತ, ನ್ಯಾಯಾಂಗ ನುಣುಚಿಕೆ, ನ್ಯಾಯಾಂಗ ಕಸರತ್ತು ಮೋದಿಯ ಸರ್ವಾಧಿಕಾರಶಾಹಿ ಆಳ್ವಿಕೆಯ ನೇರ ಫಲಿತಾಂಶ. ಈಗ, ಪ್ರಶಾಂತ ಭೂಷಣ ಅವರನ್ನು ನ್ಯಾಯಾಂಗ ನಿಂದನೆಯ ದೋಷಿ ಎಂದುದರ ವಿರುದ್ಧ ಎದ್ದು ಬಂದಿರುವ ವ್ಯಾಪಕ ಪ್ರತಿಭಟನೆಗಳು ಮತ್ತು ಅವರಿಗೆ ದೊರೆತಿರುವ ಬೆಂಬಲ ಉನ್ನತ ನ್ಯಾಯಾಂಗದಲ್ಲಿನ ಈ ಪ್ರವೃತ್ತಿಗಳನ್ನು ಹಿಂದಕ್ಕೆ ತಳ್ಳುವ ಕ್ರಿಯೆ ಆರಂಭ ಆಗಿದೆ ಎಂಬುದು ಸಂತೋಷದ ಸಂಗತಿ.



ಕೇವಲ ಆರು ವರ್ಷಗಳಲ್ಲಿ–
ಕಾರ್ಟೂನ್ ಕೃಪೆ:
ಇಂಡಿಯನ್ ಕಾರ್ಟೂನ್ ಗ್ಯಾಲರಿ



ಪ್ರಕಾಶ ಕಾರಟ್

ಹಿರಿಯ ವಕೀಲ ಪ್ರಶಾಂತ ಭೂಷಣ್ ಅವರನ್ನು ಕ್ರಿಮಿನಲ್ ನ್ಯಾಯಾಂಗ ನಿಂದನೆಯ ದೋಷಿ ಎಂದ ಸುಪ್ರಿಂ ಕೋರ್ಟಿನ ಮೂವರು ನ್ಯಾಯಾಧೀಶರುಗಳ ಪೀಠದ ತೀರ್ಪು ಆ ಸಂಸ್ಥೆಯ ಪ್ರತಿಷ್ಠೆಯನ್ನು ತಗ್ಗಿಸಿದೆ. ಇದು ದೇಶದ ಸರ್ವೋಚ್ಚ ನ್ಯಾಯಾಲಯ ವಿಮರ್ಶೆಗಳನ್ನು ಸಹಿಸುವದಿಲ್ಲ, ಭಿನ್ನಮತವನ್ನು ಶಿಕ್ಷಿಸಲು ನಿಂದನೆ ಕಾನೂನನ್ನು ಬಳಸುತ್ತದೆ ಎಂದು ಕೆಟ್ಟದಾಗಿ ಬಿಂಬಿಸಿದೆ.

ನ್ಯಾಯಾಲಯದ ಬಗ್ಗೆ ಅಪನಿಂದೆ ಮಾಡುವಂತದ್ದು ಎಂದು ನ್ಯಾಯಾಲಯಕ್ಕೆ ಕಂಡು ಬಂದ ಪ್ರಶಾಂತ ಭೂಷಣ್ ಅವರ ಎರಡು ಟ್ವೀಟ್‌ಗಳನ್ನು ನೋಡಿದರೆ ಇಂತಹ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ಸುಪ್ರಿಂ ಕೋರ್ಟಿನ ಮಾಜಿ ನ್ಯಾಯಾಧೀಶರುಗಳು ಹಲವಾರು ತೀರ್ಪುಗಳ ಬಗ್ಗೆ, ನ್ಯಾಯಾಲಯದ ಕಾರ್ಯವೈಖರಿಯ ಬಗ್ಗೆ ಹಲವಾರು ವಿಮರ್ಶೆಗಳನ್ನು ಮತ್ತು ಆರೋಪಗಳನ್ನು ಮಾಡಿದ್ದಾರೆ. ಅವರನ್ನೆಲ್ಲ ನ್ಯಾಯಾಲಯಕ್ಕೆ ಅಪಕೀರ್ತಿ ತಂದಿರುವ ಅಪರಾಧಿಗಳು ಎನ್ನಬೇಕೇ? ಅವರ ಮೇಲೆ ಕ್ರಮ ಕೈಗೊಂಡಿರದಿದ್ದರೆ, ಏಕೆ ಈ ಭಿನ್ನ ಮಾನದಂಡಗಳು?

ಮೂವರು ನ್ಯಾಯಾಧೀಶರ ಪೀಠ ಭೂಷಣ್‌ರವರಿಗೆ ಶಿಕ್ಷೆಯನ್ನು ಇನ್ನೂ ವಿಧಿಸಿಲ್ಲ. ಈ ತೀರ್ಪಿನ ವಿರುದ್ಧ ಬಂದಿರುವ ಭಾರೀ ಪ್ರತಿಭಟನೆಗಳಿಂದಾಗಿ ನ್ಯಾಯಾಲಯ, ಭೂಷಣ್ ಕ್ಷಮೆ ಕೋರಬೇಕು, ಅದರೊಂದಿಗೆ ಇದು ಮುಕ್ತಾಯವಾಗುತ್ತದೆ ಎಂದು ಹೇಳಬೇಕಾಗಿ ಬಂದಿದೆ. ಪ್ರಶಾಂತ್ ಭೂಷಣ್, ಇದು ತನ್ನ ನ್ಯಾಯಯುತ ವಿಮರ್ಶೆ ಎಂದು ನಂಬಿರುವುದರಿಂದ ಕ್ಷಮೆ ಕೋರಲು ನಿರಾಕರಿಸಿದ್ದಾರೆ. ಇದರಿಂದಾಗಿ ತೀರ್ಪು ಏನಾಗುತ್ತದೆ ಎಂದು ಕಾದು ನೋಡಬೇಕಷ್ಟೇ.

ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಭೂಷಣ್ ಅವರ ವಿರುದ್ಧ ಈ ತೀರ್ಪನ್ನು ಪ್ರತ್ಯೇಕವಾಗಿ ಕಾಣಲು ಸಾಧ್ಯವಿಲ್ಲ. ಇದು ಇತ್ತೀಚಿನ ವರ್ಷಗಳಲ್ಲಿ ಸುಪ್ರಿಂ ಕೋರ್ಟ್ ಕೆಲಸ ಮಾಡುತ್ತಿರುವ ಮತ್ತು ನ್ಯಾಯ ನೀಡಿಕೆ ಮಾಡುತ್ತಿರುವ ವೈಖರಿಯ ಬಗ್ಗೆ ಕಾಣ ಬಂದಿರುವ ಹಲವಾರು ಕಳವಳಕಾರೀ ಪ್ರವೃತ್ತಿಗಳ ಒಂದು ಭಾಗವಾಗಿದೆ. ನ್ಯಾಯಾಲಯ ಹೆಚ್ಚೆಚ್ಚಾಗಿ ಒಂದು ಕಾರ್ಯಾಂಗದ ನ್ಯಾಯಾಲಯವಾಗುತ್ತಿರುವಂತೆ ಕಾಣುತ್ತದೆ. ಇದಕ್ಕೆ ನಾಗರಿಕರ ಸಂವಿಧಾನಿಕ ಮತ್ತು ಮೂಲಭೂತ ಹಕ್ಕುಗಳನ್ನು ಎತ್ತಿ ಹಿಡಿಯುವ ಬಗ್ಗೆ ಏನೂ ಕಾಳಜಿಯಿದ್ದಂತಿಲ್ಲ. ನ್ಯಾಯಾಲಯದ ಕಾರ್ಯನಿರ್ವಹಣೆ, ಅದು ಕಾರ್ಯಾಂಗದ ಹಿತಗಳಿಗೆ ತಲೆಬಾಗಿರುವುದು, ಸಂವಿಧಾನಿಕ ಪ್ರಶ್ನೆಗಳಿಂದ, ಕಾರ್ಯಾಂಗದ ಘೋರ ನಿರ್ಧಾರಗಳಿಂದ ನುಣುಚಿಕೊಳ್ಳುತ್ತಿರುವುದು, ನ್ಯಾಯಾಲಯದ ತೀರ್ಪುಗಳ ಪರಾಮರ್ಶೆಯಲ್ಲಿ ನ್ಯಾಯಾಂಗದ ವಿಧಿ–ವಿಧಾನಗಳ ಉಲ್ಲಂಘನೆ ಮತ್ತು ಹೊಣೆಗಾರಿಕೆಯ ಕೊರತೆ ಇವೆಲ್ಲ ತಪಾಸಣೆಗೆ ಒಳಗಾಗಿವೆ.

ಕಳೆದ ಒಂದು ವರ್ಷದಲ್ಲಿ, ಈ ಪ್ರವೃತ್ತಿ ಹೆಚ್ಚು ಎದ್ದು ಕಾಣುತ್ತಿದೆ. ಇದರಲ್ಲಿ ಕಣ್ಣಿಗೆ ರಾಚುವಂತಹ ಉದಾಹರಣೆಯೆಂದರೆ, ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಪಟ್ಟಂತಹ ಸಂವಿಧಾನಿಕ ಮತ್ತು ಮೂಲಭೂತ ಹಕ್ಕುಗಳ ಪ್ರಶ್ನೆಗಳನ್ನು ಎತ್ತಿಕೊಂಡಿರುವ ರೀತಿ. ನ್ಯಾಯಾಲಯ ಇನ್ನೂ ಕೂಡ ಕಲಮು 370ಕ್ಕೆ ಸಂಬಂಧಪಟ್ಟ ಸಂವಿಧಾನಿಕ ತಿದ್ದುಪಡಿಯ ಮತ್ತು ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿರುವ ಕ್ರಮದ ಸಿಂಧುತ್ವಕ್ಕೆ ಸವಾಲು ಹಾಕಿರುವ ಅರ್ಜಿಗಳ ವಿಚಾರಣೆಯನ್ನು ಆರಂಭಿಸಿಲ್ಲ. ವಿಶೇಷವಾಗಿ, ಜಮ್ಮು ಮತ್ತು ಕಾಶ್ಮೀರದಲ್ಲಿ ಒಂದು ವರ್ಷಕ್ಕೂ ಹೆಚ್ಚು ಸಮಯದಿಂದ 4ಜಿ ಅಂತರ್ಜಾಲವನ್ನು ವಂಚಿಸಿರುವ ವಿಷಯದಲ್ಲಿ ಅಲ್ಲಿಯ ನಾಗರಿಕರ ಹಕ್ಕುಗಳನ್ನು ರಕ್ಷಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಕೊನೆಗೂ ಅದು ಈ ಕುರಿತ ನಿಷೇಧವನ್ನು ಹೇರಿರುವ ಸರಕಾರೀ ಸಮಿತಿಗೆ ಅದನ್ನು ಪರಾಮರ್ಶಿಸುವಂತೆ ಹೇಳಿದೆಯಷ್ಟೇ.

ಇನ್ನು ಕಾನೂನುಬಾಹಿರ ನಿರ್ಬಂಧಕ್ಕೆ ಒಳಪಟ್ಟ ವ್ಯಕ್ತಿಗಳನ್ನು ಹಾಜರುಪಡಿಸಬೇಕೆಂಬ ಹೆಬಿಯಸ್ ಕಾರ್ಪಸ್ ಅರ್ಜಿಗಳಿಗೆ ಸಂಬಂಧಪಟ್ಟಂತೆ, ನಾಗರಿಕರ ಸ್ವಾತಂತ್ರ್ಯದ ಹಕ್ಕನ್ನು ವಂಚಿಸುವ ಕ್ರಮಕ್ಕೆ ಕಾರ್ಯಾಂಗವನ್ನು ಉತ್ತರದಾಯಿಯಾಗಿಸುವ ತನ್ನ ಹೊಣೆಗಾರಿಕೆಯನ್ನೇ ನ್ಯಾಯಾಲಯ ತ್ಯಜಿಸಿ ಬಿಟ್ಟಿದೆ.

ಇತ್ತೀಚೆಗೆ ಒಂದು ವಿಲಕ್ಷಣ ಪ್ರಕರಣ ನಡೆದಿದೆ. ಕಾಂಗ್ರೆಸ್ ಮುಖಂಡ ಸೈಫುದ್ದಿನ್ ಸೋರುಝ್ ನಿರ್ಬಂಧದಲ್ಲಿ ಇಲ್ಲ, ಅವರು ಎಲ್ಲಿಗೆ ಬೇಕಾದರೂ ಹೋಗಲು ಸ್ವತಂತ್ರರು ಎಂದು ಸರಕಾರ ನ್ಯಾಯಾಲಯದ ಮುಂದೆ ಸಾರಿತು. ಅದೇ ಸಂಜೆ, ಅವರನ್ನು ತಮ್ಮ ಮನೆಯಿಂದ ಹೊರಬರದಂತೆ ನಿರ್ಬಂಧಿಸಿರುವ ದೃಶ್ಯಗಳು ಮಾಧ್ಯಮಗಳಲ್ಲಿ ಕಾಣಬಂದವು. ಆದರೂ ನ್ಯಾಯಾಲಯ ಇದರಿಂದಲೂ ವಿಚಲಿತಗೊಳ್ಳಲಿಲ್ಲ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನ್ಯಾಯಾಂಗ ನಿಂದನೆಯ ಆರೋಪವನ್ನು ಹಾಕಲಿಲ್ಲ.

ವಲಸೆ ಕಾರ್ಮಿಕರ ಶೋಚನೀಯ ಸ್ಥಿತಿಯನ್ನು ಕುರಿತ ಪ್ರಕರಣಗಳಲ್ಲಿ, ಮೊದಲಿಗೆ ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಲು ನಿರಾಕರಿಸಿತು. ಬದಲಾಗಿ ಈ ಕುರಿತ ಅದರ ಟಿಪ್ಪಣಿಗಳು ನ್ಯಾಯಾಲಯ ಮತ್ತು ಮಾನವ ಹಕ್ಕುಗಳ ನಡುವಿನ ದೂರವನ್ನು ತೋರಿಸಿ ಕೊಟ್ಟಿವೆ. ನಿಜ ಹೇಳಬೇಕೆಂದರೆ, ಈ ವಿಷಯದಲ್ಲಿ, ಮತ್ತು ಇನ್ನೂ ಇತರ ಹಲವು ವಿಷಯಗಳಲ್ಲಿ ಹೈಕೋರ್ಟುಗಳು ಹೆಚ್ಚು ಸಹಾನುಭೂತಿಪರವಾಗಿದ್ದವು, ವಲಸೆ ಕಾರ್ಮಿಕರ ನರಳಾಟಗಳ ವಾಸ್ತವಕ್ಕೆ ಸ್ಪಂದಿಸಿದವು.


ಚುನಾವಣಾ ಬಾಂಡುಗಳಿಗೆ ಸವಾಲು ಹಾಕುವ ಅರ್ಜಿಗಳನ್ನು ನ್ಯಾಯಾಲಯದಲ್ಲಿ ಸಲ್ಲಿಸಿ ಎರಡೂವರೆ ವರ್ಷಗಳಾಗಿವೆ. ಇದು ದೇಶದಲ್ಲಿ ಪ್ರಜಾಪ್ರಭುತ್ವದ ಮೇಲೆ ಜೀವನ್ಮರಣ ಪರಿಣಾಮ ಹೊಂದಿರುವ ಒಂದು ಪ್ರಶ್ನೆ. ಆದರೆ ಇನ್ನೂ ಕೂಡ ನ್ಯಾಯಾಲಯಕ್ಕೆ ಇದನ್ನು ಕೈಗೆತ್ತಿಕೊಳ್ಳಲು ಸಮಯವೇ ಸಿಕ್ಕಿಲ್ಲ. ಇದು ಪ್ರಸಕ್ತ ಸರಕಾರಕ್ಕೆ ನೆರವಾಗುವ ನ್ಯಾಯಾಂಗ ನುಣುಚಿಕೆಯ ಇನ್ನೊಂದು ಉದಾಹರಣೆ. ಮಹಾಸೋಂಕಿನ ಸಮಯದಲ್ಲಿ ತಾನು ಕೈಗೆತ್ತಿಕೊಳ್ಳುವ ಪ್ರಕರಣಗಳ “ಆದ್ಯತೆ”ಗಳ ಪಟ್ಟಿಯನ್ನು ತಯಾರಿಸಲು ನ್ಯಾಯಾಲಯ ನಿರ್ಧರಿಸಿತು. ಆದರೆ ಕಲಮು 370ರ ರದ್ಧತಿ, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಚಿಂದಿಗೊಳಿಸಿದ್ದು, ಮತ್ತು ಚುನಾವಣಾ ಬಾಂಡ್ ಈ ‘ಆದ್ಯತೆ’ಗಳಲ್ಲಿ ಸೇರಿಲ್ಲ.

ಇದರ ಮೊದಲು, ಆಗಿನ ಮುಖ್ಯ ನ್ಯಾಯಾಧೀಶ ರಂಜನ್ ಗೊಗೊಯ್ ನೇತೃತ್ವದ ಪೀಠದ ಅಡಿಯಲ್ಲಿ ಅಯೋಧ್ಯಾ ವಿವಾದದ ಮೇಲೆ ತೀರ್ಪು ಕೊಡಲು ನಲ್ವತ್ತಕ್ಕೂ ಹೆಚ್ಚು ದೈನಂದಿನ ವಿಚಾರಣೆಗಳನ್ನು ನಿಗದಿ ಪಡಿಸಿತು. ಅದು ಬಾಬ್ರಿ ಮಸೀದಿ ಇದ್ದ ಜಾಗದಲ್ಲಿ ಒಂದು ರಾಮಮಂದಿರ ಕಟ್ಟುವ ಆಳುವ ಪಕ್ಷದ ಆಶ್ವಾಸನೆಗೆ ಅನುಕೂಲಕರವಾದ ಒಂದು ತೀರ್ಪನ್ನು ಕೊಟ್ಟಿತು. ಆದರೆ, ತದ್ವಿರುದ್ಧವಾಗಿ, ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶಕ್ಕೆ ಅನುಮತಿ ನೀಡಿದ ಐವರು ನ್ಯಾಯಾಧೀಶರ ಪೀಠದ ತೀರ್ಪಿನ ಪ್ರಶ್ನೆ ಬಂದಾಗ, ಅದರ ಪರಾಮರ್ಶೆ ಅರ್ಜಿಯನ್ನು ಎತ್ತಿಕೊಂಡ ಪೀಠ ಒಂದು ವಿಚಿತ್ರ ನಿಲುವನ್ನು ತಳೆಯಿತು. ಈ ಪರಾಮರ್ಶೆ ಅರ್ಜಿಯನ್ನು ತಳ್ಳಿ ಹಾಕುವ ಬದಲು, ಅದು ಇದನ್ನು ಒಂದು ಇನ್ನೂ ವಿಸ್ತಾರವಾದ ಕಾನೂನಿನ ಪ್ರಶ್ನೆಗಳನ್ನು ಪರಿಶೀಲಿಸಲೆಂದು ಒಂದು ದೊಡ್ಡ ಪೀಠಕ್ಕೆ ಕಳಿಸಿತು. ಇದು ಯಾವುದೇ ಪರಾಮರ್ಶೆ ಅರ್ಜಿಯ ವಿಚಾರಣೆ ಮಾಡುವ ಪೀಠದ ವ್ಯಾಪ್ತಿಯ ಹೊರಗಿರುವ ಅಂಶವಾಗಿದೆ. ನಂತರ ಭಾರತದ ಮುಖ್ಯ ನ್ಯಾಯಾಧೀಶರು ಈ ಪ್ರಶ್ನೆಗಳನ್ನು ಪರಿಶೀಲಿಸಲು ಒಂದು ಒಂಬತ್ತು ನ್ಯಾಯಾಧೀಶರ ಪೀಠವನ್ನು ರಚಿಸಿದರು. ಇದು ‘ಆಸ್ಥೆ’ ಎಂಬುದು ಕಾನೂನು ಮತ್ತು ಸಂವಿಧಾನಕ್ಕಿಂತ ಮೇಲಿನ ಸ್ಥಾನವನ್ನು ಹೊಂದಿರಬೇಕು ಎಂಬ ಆಳುವ ಪಕ್ಷದ ನೋಟಕ್ಕೆ ಅನುಗುಣವಾಗಿರುವ ನ್ಯಾಯಾಂಗ ಕಸರತ್ತು.


ಸರ್ವೋಚ್ಚ ನ್ಯಾಯಾಲಯದ ಕಾರ್ಯನಿರ್ವಹಣೆಯಲ್ಲಿ ಕಾಣುತ್ತಿರುವ ಈ ಅನಾರೋಗ್ಯಕರ ಪ್ರವೃತ್ತಿಗಳಿಗೆ ಮುಖ್ಯ ಕಾರಣ ಮೋದಿ ಸರಕಾರದ ಬುಡಕ್ಕೇ ಬರುತ್ತದೆ. ಅದು ನ್ಯಾಯಾಧೀಶರುಗಳ ನೇಮಕದಲ್ಲಿ ಬಹಿರಂಗವಾಗಿಯೇ ಹಸ್ತಕ್ಷೇಪ ಮಾಡಿಕೊಂಡು ಬಂದಿದೆ. ಇದು ಕೊಲಿಜಿಯಂ ಶಿಫಾರಸು ಮಾಡಿದ್ದ ಗೋಪಾಲ ಸುಬ್ರಮಣ್ಯಂ ನೇಮಕವನ್ನು ತಡೆ ಹಿಡಿಯುವುದರೊಂದಿಗೆ ಆರಂಭವಾಯಿತು; ಹೈಕೋರ್ಟುಗಳ ನ್ಯಾಯಾಧೀಶರುಗಳ ಬಡ್ತಿ ಮತ್ತು ವರ್ಗಾವಣೆಗಳ ಮೇಲೆ ಪ್ರಭಾವ ಬೀರುತ್ತಿದೆ; ನ್ಯಾಯಮೂರ್ತಿ ಸತಶಿವಂರನ್ನು ಕೇರಳ ರಾಜ್ಯಪಾಲರಾಗಿ ನೇಮಿಸಿದ್ದು, ನ್ಯಾಯಮೂರ್ತಿ ಗೊಗೊಯ್ ಅವರನ್ನು ರಾಜ್ಯಸಭಾ ಸದಸ್ಯರಾಗಿ ನೇಮಿಸಿದ್ದು ಮುಂತಾಗಿ, ನಿವೃತ್ತರಾಗುತ್ತಿರುವ ಮುಖ್ಯ ನ್ಯಾಯಾಧೀಶರುಗಳಿಗೆ ಸೌಕರ್ಯಭರಿತ ಹುದ್ದೆಗಳನ್ನು ಒದಗಿಸುತ್ತಿದೆ.

ಕಾರ್ಯಾಂಗದ ಅಗತ್ಯಗಳಿಗೆ ಅನುಗುಣವಾಗಿ ವಿನಮ್ರವಾಗಿ ಹೊಂದಿಕೊಳ್ಳುವ ಒಂದು ಬೆದರಿದ ನ್ಯಾಯಾಂಗ ಎಂಬುದೊಂದು ಆತಂಕಕಾರಿ ಬೆಳವಣಿಗೆ. ಇದರಿಂದ ಸರಕಾರ ಕಾನೂನು ಮತ್ತು ಸಂವಿಧಾನದ ವಿಧಿ–ವಿಧಾನಗಳನ್ನು ಉಲ್ಲಂಘಿಸಿದಾಗ ಅದನ್ನು ಉತ್ತರದಾಯಿಯಾಗಿಸುವ ಮತ್ತು ನಾಗರಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ನ್ಯಾಯಾಂಗದ ಪಾತ್ರಕ್ಕೆ ಧಕ್ಕೆ ಬರುತ್ತದೆ. ನ್ಯಾಯಾಂಗದ ಮಸಗ್ರತೆ ಮತ್ತು ಸ್ವಾತಂತ್ರ್ಯದಲ್ಲಿ ಆಗಿರುವ ಸವೆತ ಮೋದಿಯ ಸರ್ವಾಧಿಕಾರಶಾಹಿ ಆಳ್ವಿಕೆಯ ಒಂದು ನೇರ ಫಲಿತಾಂಶ.

ಉನ್ನತ ನ್ಯಾಯಾಂಗದಲ್ಲಿನ ಈ ಪ್ರವೃತ್ತಿಗಳನ್ನು, ಹೆಚ್ಚೆಚ್ಚು ಕಾನೂನು ಬಂಧುಗಳು–ನಿವೃತ್ತ ನ್ಯಾಯಾಧೀಶರುಗಳು, ನ್ಯಾಯಶಾಸ್ತ್ರಜ್ಞರು, ವಕೀಲ ವೃಂದಗಳ ಸದಸ್ಯರುಗಳು ಪ್ರಶ್ನಿಸುತ್ತಿರುವುದು ಸಂತೋಷಕರ ಸಂಗತಿ. ಪ್ರಶಾಂತ ಭೂಷಣ ಅವರನ್ನು ನ್ಯಾಯಾಂಗ ನಿಂದನೆಯ ದೋಷಿ ಎಂದುದರ ವಿರುದ್ಧ ಎದ್ದು ಬಂದಿರುವ ವ್ಯಾಪಕ ಪ್ರತಿಭಟನೆಗಳು ಮತ್ತು ಅವರಿಗೆ ದೊರೆತಿರುವ ಬೆಂಬಲ ಉನ್ನತ ನ್ಯಾಯಾಂಗದಲ್ಲಿನ ಈ ಪ್ರವೃತ್ತಿಗಳನ್ನು ಹಿಂದಕ್ಕೆ ತಳ್ಳುವ ಕ್ರಿಯೆ ಆರಂಭವಾಗಿದೆ ಎಂಬುದನ್ನು ತೋರಿಸುತ್ತದೆ.



25.08.2020



26.08.2020

ಎರಡೂ ವ್ಯಂಗ್ಯಚಿತ್ರಗಳು:
ಕೃಪೆ: ಪಂಜು ಗಂಗೊಳ್ಳಿ





ಆಗಸ್ಟ್ ಪ್ರತಿಭಟನಾ ವಾರಾಚರಣೆ ಜನವಿರೋಧಿ ನಡೆಗಳ ವಿರುದ್ಧ ದೇಶವ್ಯಾಪಿ ಪ್ರತಿಭಟನೆಗಳ ಮಹಾಪೂರ

ಕೇಂದ್ರ ಸರಕಾರ ಘೋಷಿಸಿದ 20 ಲಕ್ಷ ಕೋಟಿ ಕೋರೋನಾ ಪರಿಹಾರ ಯಾರ ಜೇಬು ಸೇರಿದೆ?

ಕೋವಿಡ್ ಸಂಕಷ್ಟ ಸಮಯದಲ್ಲಿ ಸರಕಾರಗಳು ಜನರಿಗೆ ಸಹಾಯ ಮಾಡುವ ಬದಲು ಖಾಸಗಿಯವರಿಗೆ ಇನ್ನಷ್ಟು ಸುಲಿಗೆಗೆ ಅವಕಾಶ ಕೊಟ್ಟು ಜನವಿರೋಧಿಯಾಗಿದೆ* ಎಂದು ಅಕಖಒ ಜಿಲ್ಲಾ ಮುಖಂಡರಾದ ಸುನಿಲ್ ಕುಮಾರ್ ಬಜಾಲ್ ಆರೋಪಿಸಿದರು.

ಕೇಂದ್ರ ಹಾಗೂ ರಾಜ್ಯ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಅಕಖಒ ನೇತೃತ್ವದಲ್ಲಿ ದೇಶಾದ್ಯಂತ ನಡೆಯುತ್ತಿರುವ ಪ್ರತಿಭಟನಾ ಸಪ್ತಾಹದ ಭಾಗವಾಗಿ ಶುಕ್ರವಾರ ಪಂಜಿಮೊಗರು ಪ್ರದೇಶದಲ್ಲಿ ನಡೆದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮುಂದುವರಿಸುತ್ತಾ ಅವರು, ಕೇಂದ್ರ ಸರಕಾರ ಘೋಷಿಸಿದ್ದ 20 ಲಕ್ಷ ಕೋಟಿ ಪ್ಯಾಕೇಜ್ ಕೇವಲ ಘೋಷಣೆಯಾಗಿ ಉಳಿದಿದೆ ಹೊರತು ಜನಸಾಮಾನ್ಯರಿಗೆ ಯಾವುದೇ ರೀತಿಯಲ್ಲಿ ಪ್ರಯೋಜನವಾಗಿಲ್ಲ.ಆ ಹಣವು ಯಾರ ಜೇಬು ಸೇರಿದೆ? ಕೊರೊನಾ ಸಂಧರ್ಭದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಬಳಕೆ ಹಾಗೂ ಬಡ ಕುಟುಂಬಗಳಿಗೆ ಆರ್ಥಿಕ ಸಹಾಯ, ಆಹಾರ ವಸ್ತುಗಳ ವಿತರಣೆಯಾಗಬೇಕು. ಬಡ ಕುಂಟುಂಬಗಳಿಗೆ ಆರ್ಥಿಕ ಸಹಾಯ ನೀಡುವುದರಿಂದ ಅವರ ಬದುಕಿಗೆ ಸಹಾಯದ ಜೊತೆಗೆ ಅವರ ಕೊಳ್ಳುವಿಕೆ ಪ್ರಮಾಣ ಹೆಚ್ಚಾಗುತ್ತದೆ ಇದರಿಂದ ಆರ್ಥಿಕ ಚಟುವಟಿಕೆ ಚಕ್ರ ತಿರುಗಲು ಸಹಾಯವಾಗುತ್ತದೆ. ರಾಜ್ಯ ಸರಕಾರ ಘೋಷಿಸಿದ ಐದು ಸಾವಿರ ರೂಪಾಯಿಗಳು ಇನ್ನೂ ಕೂಡ ರಿಕ್ಷಾ ಚಾಲಕರಿಗೆ, ಕಟ್ಟಡ ಕಾರ್ಮಿಕರಿಗೆ ತಲುಪಿಲ್ಲ, ಪ್ಯಾಕೇಜ್‌ಗಳು ಕೇವಲ ಘೋಷಣೆಗೆ ಸೀಮಿತವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಐಎಂ ನಿಕಟಪೂರ್ವ ಕಾರ್ಪೊರೇಟರ್ ದಯಾನಂದ ಶೆಟ್ಟಿ ಮಾತನಾಡಿ ಕೇಂದ್ರ ಸರಕಾರ ಬಡವರ ಹಿತ ಕಾಯುವ ಬದಲು ಅದಾನಿ, ಅಂಬಾನಿಯ ಹಿತ ಕಾಯುತ್ತಿದೆ. ಜಿಲ್ಲೆಯಲ್ಲಿ ಕೊರೊನಾ ಹೆಸರಲ್ಲಿ ಜನರಿಂದ ಲಕ್ಷಾಂತರ ಹಣ ಲೂಟಿಯಾಗುತ್ತಿದ್ದರೂ ಆಧಾರ್ ಕಾರ್ಡ್ ತೋರಿಸಿದರೆ ಉಚಿತ ಚಿಕಿತ್ಸೆ ದೊರೆಯುತ್ತದೆ ಎಂದು ಸುಳ್ಳು ಭರವಸೆಗಳೊಂದಿಗೆ ಜನರಿಗೆ ವಂಚಿಸಲಾಗಿದೆ ಎಂದು ಆಪಾದಿಸಿದರು.

ಪ್ರತಿಭಟನೆ ನೇತೃತ್ವವನ್ನು ಸಿಪಿಐಎಂ ಪಂಜಿಮೊಗರು ಶಾಖೆ ಕಾರ್ಯದರ್ಶಿ ನೌಶಾದ್, ಬಶೀರ್, ಅನಿಲ್ ಡಿಸೋಜ, ಚರಣ್, ಜಯ, ನವೀನ್, ಮುಸ್ತಫಾ, ಸೌಮ್ಯ, ಸರಿತ, ಪ್ರಮೀಳಾ, ಆಶಾ ವಹಿಸಿದ್ದರು. ಇಬ್ರಾಹಿಂ ಖಲೀಲ್ ಸ್ವಾಗತಿಸಿ ಸಂತೋಷ್ ವಂದಿಸಿದರು.

ಕೇಂದ್ರ ಸರಕಾರದ ಜನವಿರೋಧಿ ನಡೆ ವಿರುದ್ಧ: ಸಿಪಿಐ(ಎಂ) ಪ್ರಚಾರಾಂದೋಲನ

ಗಂಗಾವತಿ: ದೇಶದಲ್ಲಿ ಕೋವಿಡ್ – 19 ರ ಹಾವಳಿ ತೀವ್ರವಾಗುತ್ತದೆ ಈಗಾಗಲೇ ದೇಶದಲ್ಲಿ ಇವತ್ತು ಸಾವಿರ ಅಮಾಯಕ ಪ್ರಜೆಗಳು ಸಾವನ್ನಪ್ಪುತ್ತಿದ್ದಾರೆ. ಸುಮಾರು 50 ಲಕ್ಷದಷ್ಟು ಜನ ಈ ಭಯಂಕರ ಸಾಂಕ್ರಾಮಿಕ ಪಿಡುಗಿನ ಸೋಂಕಿಗೆ ಒಳಗಾಗಿದ್ದಾರೆ. ಆದರೆ ಎಲ್ಲರಿಗೂ ಒಳ್ಳೆಯ ದಿನಗಳ ಭವಿಷ್ಯ ನುಡಿಯುತ್ತಿದ್ದ ಜಾದುಗಾರ ಮೋದಿ ತನ್ನ ವೈಫಲ್ಯವನ್ನು ಮರೆಮಾಚಲು ಜನರ ಗಮನವನ್ನು ಬೇರೆಡೆಗೆ ಸೆಳೆಯುತ್ತಿದ್ದಾರೆ. ಒಂದೆಡೆ ಗಡಿಯಲ್ಲಿ ಯುದ್ಧೋನ್ಮಾನವನ್ನು ಹುಟ್ಟು ಹಾಕಿ ಜನರಲ್ಲಿ ಆತಂಕವನ್ನು ಉಂಟುಮಾಡುತ್ತಿದ್ದಾರೆ ಎಂದು ಸಿಪಿಐ(ಎಂ) ತಾಲೂಕ ಕಾರ್ಯದರ್ಶಿ ನಿರುಪಾದಿ ಬೆಣಕಲ್ ಹೇಳಿದರು

ಅವರು ಇಂದು ಸ್ಥಳೀಯ ಪಕ್ಷದ ಬಜಾರ ಹಮಾಲರು ಮತ್ತು ಗಂಜ್ ಶಾಖೆವತಿಯಿಂದ ಪಕ್ಷದ ಕೇಂದ್ರ ಮತ್ತು ರಾಜ್ಯ ಸಮಿತಿ ಕರೆಯ ಮೇರೆಗೆ ಪ್ರಚಾರಾಂದೋಲನದ ಭಾಗವಾಗಿ ಇಂದು ನಗರದ ಸಿಬಿಎಸ್ ಸರ್ಕಲ್, ಗಂಜನಲ್ಲಿ ಮಹಾರಾಣ ಪ್ರತಾಪ ಸರ್ಕಲ್, ಎಪಿಎಂಸಿ, ಕೊಪ್ಪಳ ರೋಡನಲ್ಲಿ ಸಾರ್ವಜನಿಕರಿಗೆ ಕೇಂದ್ರದ ಜನವಿರೋಧಿ ನೀತಿ ಕುರಿತು ಮಾಹಿತಿ ಕೊಟ್ಟರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬುಡಕಟ್ಟು ಹಾಗೂ ಒಬಿಸಿ ಮತ್ತು ವಿಕಲಾಂಗರಿಗೆ ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಹಾಗೂ ಖಾಲಿ ಇರುವ ಹುದ್ದೆಗಳನ್ನು ಬರ್ತಿ ಮಾಡಬೇಕು. ತಕ್ಷಣದಿಂದಲೇ ಅಗತ್ಯವಿರುವ ಎಲ್ಲರಿಗೂ ಮುಂದಿನ ಆರು ತಿಂಗಳವರೆಗೆ ಪ್ರತಿಯೊಬ್ಬ ವ್ಯಕ್ತಿಗೆ 10 ಕೆ,ಜಿ,ಯಂತೆ ಉಚಿತ ಆಹಾರಧಾನ್ಯಗಳನ್ನು ವಿತರಣೆ ಮಾಡಬೇಕು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ವಿಸ್ತರಿಸಬೇಕು ಹಾಗೂ ಕೂಲಿ ದರವನ್ನು ಹೆಚ್ಚಿಸಬೇಕು ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯಯನ್ನು ಪ್ರಕಟಿಸಬೇಕು, ಕಾರ್ಮಿಕರ ಕಾನೂನುಗಳನ್ನು ತಿದ್ದುಪಡಿ ಅಮಾನತು ರದ್ದು ಮಾಡಿರುವುದನ್ನು ಎಲ್ಲ ಪ್ರಸ್ತಾವನೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಲಾಯಿತು.ಪಕ್ಷದ ಪ್ರಮುಖರಾದ ಹನುಮಂತಪ್ಪ, ನಾಗೇಶ ನಾಯ್ಕ, ಕೃಷ್ಣಪ್ಪ ನಾಯಕ, ಇಬ್ರಾಹಿಂ ಮೈಬು ಸಾಬ್, ಮಂಜುನಾಥ ನಾಯಕ, ಬಸವರಾಜ, ಚಂದುಸಾಭ ಇತರರು ಇದ್ದರು.

ಕೋಲಾರ:

ಸಿಪಿಐ(ಎಂ) ನ ದೇಶವ್ಯಾಪಿ ಪ್ರತಿರೋಧ ಸಪ್ತಾಹದ ಭಾಗವಾಗಿ ಬಂಗಾರಪೇಟೆ ತಾಲ್ಲೂಕು ಪಕ್ಷದ ಶಾಖೆಗಳ ವತಿಯಿಂದ ಇಂದು 26 ಆಗಸ್ಟ್ 2020 ರಂದು ಕಾರಹಳ್ಳಿ ಮತ್ತು ದೊಡ್ಡೂರುಕರಪನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯಗಳ ಮಂದೆ ಪ್ರತಿಭಟನೆಗಳನ್ನು ನಡೆಸಿ 16 ಅಂಶಗಳ ಬೇಡಿಕೆಗಳಿಗಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ ಮನವಿ ಪತ್ರಗಳನ್ನು ಸಲ್ಲಿಸಲಾಯಿತು.

ಮಂಡ್ಯ: ಕೋವಿಡ್ ಪರಿಹಾರಕ್ಕೆ ಒತ್ತಾಯಿಸಿ ಪ್ರತಿಭಟನಾ ಸಪ್ತಾಹ

ಕೋವಿಡ್ ಮತ್ತು ಲಾಕ್ ಡೌನ್ ನಿಂದಾಗಿ ಅನೇಕ ಬಡಜನರು, ನಿವೇಶನ ರಹಿತರು, ಬಿದಿಬದಿ ವ್ಯಾಪಾರಸ್ಥರು, ವ್ಯಾಪರಿಗಳು, ರೈತರು, ವಿದ್ಯಾರ್ಥಿಗಳು ಈಗೆ ಹಲವಾರು ಕುಟುಂಬಗಳು ಸಂಕಷ್ಟದಲ್ಲಿದ್ದಾರೆ. ಇವರಿಗೆ ಕೋವಿಡ್ ಪರಿಹಾರವನ್ನು ಒದಗಿಸಲು ಮತ್ತು ತಮ್ಮ ಬೇಡಿಕೆಗಳನ್ನು ಹೀಡೆರಿಸಲು ಒತ್ತಾಯಿಸಿ ಸಿಪಿಐಎಂ ನ ಭಾಗವಾಗಿ ಮಳವಳ್ಳಿಯ ಪುರಸಭೆ ಕಛೇರಿ ಎದುರು ಪ್ರತಿಭಟನಾ ಸಪ್ತಾಹ ನಡೆಸಿದ್ದಾರೆ.

ಈ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐಎಂ ಮಳವಳ್ಳಿ ತಾಲ್ಲೂಕು ಸಮಿತಿ ಕಾರ್ಯದರ್ಶಿ ದೇವಿ ರವರು ಮಾತನಾಡುತ್ತಾ ದೇಶದಲ್ಲಿ ಕೋವಿಡ್ 19ರ ಹಾವಳಿ ತೀವ್ರವಾಗುತ್ತಲೇ ಇದೆ ಈಗಾಗಲೇ ಐವತ್ತು ಸಾವಿರ ಭಾರತೀಯರು ಕೊರೊನ ಸೋಂಕಿಗೆ ಬಲಿಯಾಗಿದ್ದಾರೆ . 50 ಲಕ್ಷ ಮಂದಿ ಸೋಂಕಿಗೆ ಒಳಗಾಗಿದ್ದಾರೆ. ಆದರೆ ಎಲ್ಲರಿಗೂ ಒಳ್ಳೆಯ ದಿನಗಳ ಭವಿಷ್ಯ ನುಡಿಯುತ್ತಿದ್ದ ಜಾದೂಗಾರ ಮೋದಿ ತನ್ನ ವೈಫಲ್ಯವನ್ನು ಮರೆಮಾಚಲು ಜನರ ಗಮನವನ್ನು ಬೇರೆಡೆಗೆ ಸೆಳೆಯುತ್ತಿದ್ದಾರೆ.

ಲಾಕ್‌ಡೌನ್ ದೇಶದ ಬಹುಪಾಲು ಜನಗಳ ಮೇಲೆ, ಅದರಲ್ಲೂ ದಲಿತರು, ಬುಡಕಟ್ಟು ಜನರು, ಮಹಿಳೆಯರು, ಅಲ್ಪಸಂಖ್ಯಾತರು ಮತ್ತು ವಿಕಲಾಂಗರ ಮೇಲೆ ಹೇಳತೀರದ ಸಂಕಷ್ಟಗಳನ್ನು ಹೇರಿತು. ಕೇಂದ್ರ ಬಿಜೆಪಿ ಸರ್ಕಾರ ಅವರ ನೆರವಿಗೆ ಧಾವಿಸಲಿಲ್ಲ ಅಂತಹ ಕುಟುಂಬಗಳಿಗೆ ನಗದು ವರ್ಗಾವಣೆ ಮತ್ತು ಆಹಾರ ಧಾನ್ಯಗಳನ್ನು ಉಚಿತವಾಗಿ ವಿತರಿಸಬೇಕೆಂಬ ಬೇಡಿಕೆಯನ್ನು ಈಡೇರಿಸುವುದನ್ನು ನಿರಾಕರಿಸುತ್ತಲೇ ಬಂದಿದೆ ಸೋಂಕು ಹರಡುವುದನ್ನು ತಡೆಯುವಲ್ಲಿ ವಿಫಲವಾದ ಮೋದಿ ಸರಕಾರ ಈಗ ಅಷ್ಟೇ ಬೇಜವಾಬ್ದಾರಿಯಿಂದ ಲಾಕ್‌ಡೌನ್ ತೆರವು ಮಾಡುತ್ತಾ ತಾನು ಉಂಟುಮಾಡಿದ ಸಮಸ್ಯೆಯನ್ನು ಎದುರಿಸುವ ಹೊರೆಯನ್ನು ರಾಜ್ಯ ಸರ್ಕಾರಗಳಿಗೆ


ಪುಟ 16 ಕ್ಕೆ







ಹೊಸ ಶಿಕ್ಷಣ ನೀತಿಯಲ್ಲಿ ಎಲ್ಲವೂ ಇದೆ, ಆದರೆ ಏನೂ ಇಲ್ಲ



ಒಟ್ಟಾರೆಯಾಗಿ ಹೇಳುವುದಾದರೆ ಹೊಸ ಶಿಕ್ಷಣ ನೀತಿಯಲ್ಲಿ ಎಲ್ಲವೂ ಇದೆ ಮತ್ತು ಏನೂ ಇಲ್ಲ ಎನ್ನುವ ಸ್ಥಿತಿ ಇದೆ. ವರ್ತಮಾನದ ಶಿಕ್ಷಣ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಹೊಸ ಶಿಕ್ಷಣ ನೀಡುವ ಪರಿಹಾರಗಳು ಸಮಸ್ಯೆಯನ್ನು ಪರಿಹರಿಸುವ ಬದಲು ಇನ್ನೂ ಸಂಕೀರ್ಣಗೊಳಿಸಬಹುದು. ನಮ್ಮ ಅಭಿವೃದ್ಧಿ ರಾಜಕಾರಣ ಸಂಪೂರ್ಣ ಬಲಾಢ್ಯರ ಸ್ವಾಧೀನ ಇದೆ. ಇವರು ಜಾರಿಗ ತರುವ ಬಹುತೇಕ ಪಾಲಿಸಿಗಳು ಬಡತನವನ್ನು ಮತ್ತು ತಳಸ್ತರವನ್ನು ಸೃಷ್ಟಿಸುತ್ತಿವೆ. ಹೀಗಿರುವಾಗ ಶಿಕ್ಷಣ ನೀತಿ ಬಲಾಢ್ಯಪರ ಅಭಿವೃದ್ಧಿ ರಾಜಕಾರಣಕ್ಕೆ ವಿರುದ್ಧವಾಗಿರುತ್ತದೆ ಎಂದು ಗ್ರಹಿಸುವುದು ಅತಾರ್ಕಿಕವಾಗುತ್ತದೆ.

ಪ್ರೊ. ಎಂ. ಚಂದ್ರ ಪೂಜಾರಿ

ಯುವ ಜನಾಂಗಕ್ಕೆ ಸ್ಕಿಲ್ ಮತ್ತು ಮೌಲ್ಯಗಳನ್ನು ದಾಟಿಸುವುದು ಶಿಕ್ಷಣದ ಪ್ರಮುಖ ಉದ್ದೇಶಗಳು. ಆದಾಯ ಗಳಿಸಲು ಸ್ಕಿಲ್ ಅಥವಾ ಪರಿಣಿತಿ ಸಹಕರಿಸಿದರೆ, ಸಮಷ್ಠಿ ಬದುಕಿಗೆ ಅವಶ್ಯವಿರುವ ಲೋಕದೃಷ್ಟಿ ರೂಪಿಸಲು ಮೌಲ್ಯ ಸಹಕರಿಸುತ್ತದೆ. ಒಂದು ದೇಶಕ್ಕೆ ಸೇರಿದ ನಾವೆಲ್ಲ ನೆಮ್ಮದಿಯಿಂದ ಬದುಕಲು ಅವಶ್ಯವಿರುವ ಮೌಲ್ಯಗಳನ್ನು ಸಂವಿಧಾನ ಸೂಚಿಸಿದೆ. ಸಂವಿಧಾನಿಕ ಮೌಲ್ಯಗಳನ್ನು ಶಿಕ್ಷಿತರಲ್ಲಿ ರೂಪಿಸುವುದರಿಂದ ನವ ಸಮಾಜ ನಿರ್ಮಾಣ ಸಾಧ್ಯ. ವರ್ತಮಾನದ ಶಿಕ್ಷಣ ಪದ್ಧತಿ ಈ ಎರಡೂ ಉದ್ದೇಶಗಳನ್ನು ಈಡೇರಿಸಲು ವಿಫಲವಾಗಿದೆ ಎಂದು ಹೊಸ ಶಿಕ್ಷಣ ನೀತಿ ಬಂದಿದೆ. ಹೊಸ ಶಿಕ್ಷಣ ನೀತಿ ಬಂದ ಮೇಲೆ ಚರ್ಚೆಗಳಾಗುತ್ತಿವೆ. ಆದರೆ ಈ ಚರ್ಚೆಗಳು ಶಿಕ್ಷಣ ನೀತಿಯ ತೊಗಟೆ ಮೇಲೆ ಹೆಚ್ಚು ಕೇಂದ್ರೀತವಾಗಿವೆ. ಅಂದರೆ ಶಿಕ್ಷಣದ ಮಾಧ್ಯಮದ ಬಗ್ಗೆ, ಹಿಂದಿನ 7+3+2 ಪದ್ಧತಿ ಬದಲು 5+3+3+4 ಪದ್ದತಿ ಬಗ್ಗೆ, ಓಕೇಶನಲ್ ಕೋರ್ಸ್‌ಸ್, 4 ವರ್ಷದ ಫ್ಲೆಕ್ಸಿಬಲ್ ಡಿಗ್ರಿ ಕೋರ್ಸ್, ಮಲ್ಟಿ ಡಿಸಿಪ್ಲಿನರಿ ಕೋರ್ಸ್ ಇತ್ಯಾದಿಗಳ ಬಗ್ಗೆ ಹೆಚ್ಚು ಚರ್ಚೆಗಳಾಗುತ್ತಿವೆ. ಆದರೆ ಹೊಸ ಶಿಕ್ಷಣ ನೀತಿಯ ತಿರುಳಿನ ಬಗ್ಗೆ ಹೆಚ್ಚು ಚರ್ಚೆಗಳಾಗುತ್ತಿಲ್ಲ. ಅಂದರೆ ಏಕೆ ಹೊಸ ಶಿಕ್ಷಣ ಬಂದಿದೆ? ಶಿಕ್ಷಣ ಕ್ಷೇತ್ರ ವರ್ತಮಾನದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಹೊಸ ಶಿಕ್ಷಣ ನೀತಿ ಪರಿಹರಿಸಬಹುದೇ? ಒಂದು ವೇಳೆ ಪರಿಹರಿಸದಿದ್ದರೆ ಏಕೆ ಪರಿಹರಿಸುವುದಿಲ್ಲ? ಇತ್ಯಾದಿ ಪ್ರಶ್ನೆಗಳ ಸುತ್ತ ಚರ್ಚೆ ನಡೆಯುತ್ತಿಲ್ಲ. ನನ್ನ ಲೇಖನದ ಉದ್ದೇಶ ಈ ಮೂರು ಪ್ರಶ್ನೆಗಳನ್ನು ಚರ್ಚೆಗೆ ಎತ್ತಿಕೊಳ್ಳುವುದು.

ಏಕೆ ಹೊಸ ಶಿಕ್ಷಣ ನೀತಿ?

ಶಿಕ್ಷಣ ಕ್ಷೇತ್ರ ವರ್ತಮಾನದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಇವನ್ನು ಪರಿಹರಿಸಲು ಹೊಸ ಶಿಕ್ಷಣ ನೀತಿ ಬಂದಿದೆ. ಶಿಕ್ಷಣ ಕ್ಷೇತ್ರದ ವರ್ತಮಾನದ ಸಮಸ್ಯೆಗಳನ್ನು ಅರ್ಥಮಾಡಿಕೊಂಡರೆ ಹೊಸ ಶಿಕ್ಷಣ ನೀತಿಯಲ್ಲಿ ವರ್ತಮಾನದ ಸಮಸ್ಯೆಗಳಿಗೆ ಪರಿಹಾರ ಇದೆಯೇ ಎಂದು ತೀರ್ಮಾನಿಸಬಹುದು. ಒಂದು ವೇಳೆ ಪರಿಹಾರ ಇಲ್ಲದಿದ್ದರೆ ವರ್ತಮಾನದ ಸಮಸ್ಯೆಗಳು ಮುಂದುವರಿಯಬಹುದು.

1. ಮಾಧ್ಯಮದ ಸಮಸ್ಯೆ:

ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಬೇಕಾದ ಭಾಷೆಯ ಪ್ರಶ್ನೆಯನ್ನು ಮಾಧ್ಯಮದ ಚರ್ಚೆ ಒಳಗೊಂಡಿದೆ. ವರ್ತಮಾನದಲ್ಲಿ ತ್ರಿಭಾಷಾ ಸೂತ್ರ ಮಾಧ್ಯಮದ ಪ್ರಶ್ನೆಯನ್ನು ಪರಿಹರಿಸುತ್ತಿದೆ. ಎಲ್ಲ ರಾಜ್ಯಗಳಲ್ಲೂ ಆಯಾಯ ರಾಜ್ಯದ ಭಾಷೆ, ರಾಷ್ಟ್ರ ಭಾಷೆ ಮತ್ತು ಅಂತರಾಷ್ಟ್ರೀಯ ಭಾಷೆಗಳಲ್ಲಿ ಶಿಕ್ಷಣ ಇದೆ. ಉದಾಹರಣೆಗೆ, ಕರ್ನಾಟಕದಲ್ಲಿ ಕನ್ನಡ ರಾಜ್ಯ ಭಾಷೆ, ಹಿಂದಿ ರಾಷ್ಟ್ರ ಭಾಷೆ ಮತ್ತು ಇಂಗ್ಲೀಷ್ ಅಂತರಾಷ್ಟ್ರೀಯ ಭಾಷೆಯಾಗಿ ಬಳಕೆಯಾಗುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಮಾಧ್ಯಮದ ಬಗ್ಗೆ ಹೊಸ ಬೆಳವಣಿಗೆಗಳು ಮುಂಚೂಣಿಗೆ ಬಂದಿವೆ. ಎಲ್ಲ ರಾಜ್ಯಗಳಲ್ಲೂ ರಾಜ್ಯ ಭಾಷೆಯ ಬದಲು ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಬೇಕೆನ್ನುವ ಡಿಮ್ಯಾಂಡ್ ಹೆಚ್ಚಾಗಿದೆ. ದಲಿತ, ಬುಡಕಟ್ಟು, ಹಿಂದುಳಿದ ವರ್ಗಗಳು ತಮ್ಮ ಮಕ್ಕಳಿಗೂ ಇಂಗ್ಲೀಷ್ ಭಾಷೆಯಲ್ಲಿ ಶಿಕ್ಷಣ ನೀಡಬೇಕೆಂದುಒತ್ತಾಯಿಸುತ್ತಿದ್ದಾರೆ. ಇವರ ವಾದ ಸರಳ ಇದೆ. ಅನುಕೂಲಸ್ಥರ ಮಕ್ಕಳು ಖಾಸಗಿ ಶಾಲೆಗಳ ಇಂಗ್ಲೀಷ್ ಮಾಧ್ಯಮದಲ್ಲಿ ಓದಿ ಮುಂದೆ ಹೋಗುತ್ತಿದ್ದಾರೆ. ನಮ್ಮ ಮಕ್ಕಳು ಸರಕಾರಿ ಶಾಲೆಗಳ ಕನ್ನಡ ಮಾಧ್ಯಮದಲ್ಲಿ ಓದಿ ಹಿಂದುಳಿದಿದ್ದಾರೆ. ನಮಗೆ ಖಾಸಗಿ ಇಂಗ್ಲೀಷ್ ಮಾಧ್ಯಮ ಶಾಲೆಗಳಲ್ಲಿ ಓದಿಸುವಷ್ಟು ಶಕ್ತಿಯಿಲ್ಲ. ಆದುದರಿಂದ ಸರಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಬೇಕೆನ್ನುವುದು ಇವರ ಒತ್ತಾಯ. ಜನರ ಒತ್ತಾಯವನ್ನು ಅರ್ಥಮಾಡಿಕೊಂಡು ಕರ್ನಾಟಕದಲ್ಲಿ ಕುಮಾರಸ್ವಾಮಿ ಸರಕಾರ ತರಗತಿ ಒಂದರಿಂದಲೇ ಇಂಗ್ಲೀಷ್ ಭಾಷೆಯನ್ನು ಕಲಿಸಲು ಆರಂಭಿಸಿದೆ. ಇದೇ ರೀತಿ ಪಂಜಾಬ್, ಪ.ಬಂಗಾಳ ಮತ್ತು ಇತರ ರಾಜ್ಯಗಳು ಇಂಗ್ಲೀಷ್ ಶಿಕ್ಷಣಕ್ಕೆ ಒತ್ತು ನೀಡುತ್ತಿವೆ. ಇಂತಹ ಸಂದರ್ಭದಲ್ಲಿ ಹೊಸ ಶಿಕ್ಷಣ ನೀತಿಯಲ್ಲಿ ಮಾತೃಭಾಷೆಯಲ್ಲಿ 1–5ನೇ ತರಗತಿ ತನಕ ಶಿಕ್ಷಣ ನೀಡಬೇಕೆನ್ನುವ ಆಶಯ ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬರಬಹುದೆನ್ನುವ ಸಂದೇಹ ಇದೆ.

2. ಶಿಕ್ಷಣದ ವಾಣಿಜ್ಯೀಕರಣ:

ಲೋವರ್ ಶಿಕ್ಷಣದ ಶೇ.25–30 ಶಾಲೆಗಳು (ಶೇ.40ರಷ್ಟು ವಿದ್ಯಾರ್ಥಿಗಳು) ಖಾಸಗಿ ಒಡೆತನದಲ್ಲಿವೆ. ಸಾಮಾನ್ಯ ಉನ್ನತ ಶಿಕ್ಷಣದ ಶೇ.77ರಷ್ಟು ಸಂಸ್ಥೆಗಳು ಖಾಸಗಿಯವರು ನಡೆಸುತ್ತಿದ್ದಾರೆ. ಪ್ರೊಫೆಶನಲ್ ಕಾಲೇಜುಗಳ (ಮೆಡಿಕಲ್, ಎಂಜಿನೀಯರಿಂಗ್ ಕಾಲೇಜುಗಳ) ಶೇ.80ಕ್ಕಿಂತಲೂ ಹೆಚ್ಚಿನ ಸಂಸ್ಥೆಗಳು ಖಾಸಗಿ ಒಡೆತನದಲ್ಲಿವೆ. ಶೇ.54ರಷ್ಟು ವಿಶ್ವವಿದ್ಯಾಲಯಗಳನ್ನು ಖಾಸಗಿಯವರು ನಡೆಸುತ್ತಿದ್ದಾರೆ. ಹಿಂದೆ ಖಾಸಗಿಯವರು ಸಮಾಜ ಸೇವೆ ಮಾಡುವ ಉದ್ದೇಶದಿಂದ ಶಿಕ್ಷಣ ಸಂಸ್ಥೆಗಳನ್ನು ತೆರೆಯುತ್ತಿದ್ದರು. ಆದರೆ ಇಂದು ಬಹುತೇಕ ಖಾಸಗಿ ಸಂಸ್ಥೆಗಳು ಶಿಕ್ಷಣದ ವ್ಯಾಪಾರ ಮಾಡುವ ಉದ್ದೇಶದಿಂದ ಶಿಕ್ಷಣ ಸಂಸ್ಥೆಗಳನ್ನು ತೆರೆಯುತ್ತಿದ್ದಾರೆ. ಸರಕಾರಿ ಸಂಸ್ಥೆಗಳಲ್ಲಿ ಕೆಲವು ಸಾವಿರ ರುಪಾಯಿಗಳಲ್ಲಿ ನಡೆಯುವ ಶಿಕ್ಷಣ ಖಾಸಗಿ ಸಂಸ್ಥೆಗಳಲ್ಲಿ ಕೆಲವು ಲಕ್ಷ ರುಪಾಯಿಗಳಲ್ಲೂ ಪೂರೈಸುವುದಿಲ್ಲ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಖಾಸಗಿ ಶಿಕ್ಷಣ ಸಂಸ್ಥೆಗಳು ಅನುಕೂಲಸ್ಥರ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುತ್ತಿವೆ. ಇವು ಹೆಚ್ಚುತ್ತಾ ಹೋದಂತೆ ಬಡ ಮಕ್ಕಳು ಶಿಕ್ಷಣ ಪಡೆಯುವುದು ಕಷ್ಟವಾಗುತ್ತದೆ.

3. ಶಿಕ್ಷಣ ಮತ್ತು ಉದ್ಯೋಗದ ಸಮಸ್ಯೆ:

ಶಿಕ್ಷಣ ಮತ್ತು ಉದ್ಯೋಗ ಸಂಬಂಧದ ಮೇಲಿನ ಬಹುತೇಕ ಚರ್ಚೆಗಳಲ್ಲಿ ಶಿಕ್ಷಣ ಮತ್ತು ಉದ್ಯೋಗದ ಸಮಸ್ಯೆಯನ್ನು ಶಿಕ್ಷಣ ಪಡೆದವರ ಉದ್ಯೋಗಕ್ಕೆ ಸೀಮಿತಗೊಂಡಂತೆ ಚರ್ಚಿಸಲಾಗುತ್ತಿದೆ. ಆದರೆ ಇದು ಕೇವಲ ಶಿಕ್ಷಣ ಪಡೆದವರ ಸಮಸ್ಯೆಯಲ್ಲ; ಶಿಕ್ಷಣ ನೀಡುವವರ ಸಮಸ್ಯೆಯೂ ಆಗಿದೆ. ಆದುದರಿಂದ ಈ ಸಮಸ್ಯೆಗೆ ಎರಡು ಮುಖಗಳಿವೆ. ಒಂದು, ಶಿಕ್ಷಣ ಸಂಸ್ಥೆಯಲ್ಲಿ ದುಡಿಯುವವರ ಸಮಸ್ಯೆ ಮತ್ತು ಎರಡು ಶಿಕ್ಷಣ ಪಡೆದವರು ಉದ್ಯೋಗ ಪಡೆಯುವ ಸಮಸ್ಯೆ. ಬಹುತೇಕ ಶಿಕ್ಷಣ ಸಂಸ್ಥೆಗಳು ಖಾಸಗಿ ಒಡೆತನದಲ್ಲಿವೆ ಎನ್ನುವುದನ್ನು ಈಗಾಗಲೇ ನೋಡಿದ್ದೇವೆ. ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ, ಸಂಬಳ ಮತ್ತು ಸಾಮಾಜಿಕ ಭದ್ರತೆಗಳಿಲ್ಲ. ಇನ್ನು ಸರಕಾರಿ ಸಂಸ್ಥೆಗಳಲ್ಲಿ ಶೇ.50ರಷ್ಟು ಹುದ್ದೆಗಳು ಖಾಲಿ ಇವೆ. ಇವನ್ನು ಒಪ್ಪಂದ ಆಧಾರದಲ್ಲಿ ಅಥವಾ ಅರೆಕಾಲಿಕ ಅಥವಾ ಅತಿಥಿ ಉಪನ್ಯಾಸಕರು ನಿಭಾಯಿಸುತ್ತಿದ್ದಾರೆ. ಖಾಯಂ ಉದ್ಯೋಗಿಗಳು ಮತ್ತು ಅತಿಥಿ ಉಪನ್ಯಾಸಕರ ಸಂಬಳ ನಡುವೆ ಆಕಾಶ ಭೂಮಿ ಅಂತರವಿದೆ. ಶಿಕ್ಷಣ ನೀಡುವವರನ್ನು ಅರೆಹೊಟ್ಟೆಯಲ್ಲಿಟ್ಟು ಗುಣಮಟ್ಟದ ಶಿಕ್ಷಣ ನಿರೀಕ್ಷಿಸುವುದು ಉನ್ನತ ಶಿಕ್ಷಣದ ಲಕ್ಷಣವಲ್ಲ; ಉನ್ನತಮಟ್ಟದ ಶೋಷಣೆಯ ಲಕ್ಷಣ. ಶಿಕ್ಷಣ ಪಡೆದವರ ಉದ್ಯೋಗದ ಸಮಸ್ಯೆಗೂ ಎರಡು ಮುಖಗಳಿವೆ. ಒಂದು, ಶಿಕ್ಷಣ ಸಂಸ್ಥೆಗಳು ನೀಡುವ ಶಿಕ್ಷಣ ಅವರನ್ನು ನೇಮಕ ಮಾಡುವ ಸಂಸ್ಥೆಗಳ ಅಗತ್ಯಕ್ಕೆ ಪೂರಕವಾಗಿಲ್ಲ ಎನ್ನುವುದು ಮೊದಲ ಸಮಸ್ಯೆ. ಎರಡು, ಶಿಕ್ಷಣದ ಗುಣಮಟ್ಟ ತುಂಬಾ ಕಳಪೆಯಾಗಿದೆ ಎನ್ನುವುದು ಎರಡನೇ ಸಮಸ್ಯೆ.



4. ಹಣಕಾಸಿನ ಸಮಸ್ಯೆ:

ಶಿಕ್ಷಣದ ಮೇಲೆ ಜಿಡಿಪಿಯ ಶೇ.6ರಷ್ಟು ವಿನಿಯೋಜಿಸಬೇಕೆಂದು 1968ರಲ್ಲಿ ಬಂದ ಮೊದಲನೇ ಶಿಕ್ಷಣ ನೀತಿ ಹೇಳಿದೆ. ನಂತರ 1986ರಲ್ಲಿ ಬಂದ ಎರಡನೇ ಶಿಕ್ಷಣ ನೀತಿ ಕೂಡ ಶೇ.6 ರಷ್ಟು ವಿನಿಯೋಜಿಸಬೇಕೆಂದು ಹೇಳಿದೆ. ಆದರೆ ಇಲ್ಲಿ ವರೆಗೆ ಯಾವ ಸರಕಾರವೂ ಶಿಕ್ಷಣದ ಮೇಲೆ ಜಿಡಿಪಿಯ ಶೇ.6 ರಷ್ಟು ವಿನಿಯೋಜಿಸಿಲ್ಲ. ಯುಪಿಎ–2 ಸರಕಾರದ (2009–2014)ರ ಅವಧಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟಾಗಿ ಶಿಕ್ಷಣದ ಮೇಲೆ ದೇಶದ ಜಿಡಿಪಿಯ ಶೇ.3.2 ರಷ್ಟು ಮಾತ್ರ ವಿನಿಯೋಜಿಸಿವೆ. ಎನ್.ಡಿ.ಎ–2 ಸರಕಾರ ಅವಧಿಯಲ್ಲಿ(2014–19) ಅದು ಇನ್ನಷ್ಟು ಕಡಿಮೆಯಾಗಿ ಜಿಡಿಪಿಯ ಶೇ.2.9 ರಷ್ಟು ಮಾತ್ರ ವಿನಿಯೋಜಿಸಲಾಗಿದೆ. (ಮೂಲ: ನಿಖಿಲ್ ಪಾಲ್, ಇಂಡಿಯಾ ಟುಡೆ ಜನವರಿ 31, 2020)

5. ಮೀಸಲಾತಿ ಸಮಸ್ಯೆ:

ಮೀಸಲಾತಿಯನ್ನು ಸರಕಾರಗಳು ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲು ಬಳಸಿದಷ್ಟು ಸಾಮಾಜಿಕ ನ್ಯಾಯ ಒದಗಿಸಲು ಬಳಸಿಲ್ಲ. ಸಾಮಾಜಿಕ ನ್ಯಾಯ ಒದಗಿಸುವುದು ಸರಕಾರದ ಉದ್ದೇಶವಾಗಿದ್ದರೆ ಎಲ್ಲರಿಗೂ ಸರಕಾರವೇ ಶಿಕ್ಷಣ ನೀಡಬೇಕಿತ್ತು. ಆದರೆ ಸರಕಾರವೇ ಎಲ್ಲರಿಗೂ ಶಿಕ್ಷಣ ನೀಡುವ ಬದಲು ಖಾಸಗಿ ಸಂಸ್ಥೆಗಳಿಗೆ ಶಿಕ್ಷಣ ನೀಡಲು ಅವಕಾಶ ಕಲ್ಪಿಸಿದೆ. ಅಷ್ಟು ಮಾತ್ರವಲ್ಲ ಮೆಡಿಕಲ್, ಇಂಜಿನೀಯರಿಂಗ್ ಮುಂತಾದ ಪ್ರೊಫೆಶನಲ್‌ಶಿಕ್ಷಣದ ಪೂರೈಕೆಯನ್ನು ಹತೋಟಿಯಲ್ಲಿಟ್ಟುಕೊಂಡು ಖಾಸಗಿ ಸಂಸ್ಥೆಗಳು ಶಿಕ್ಷಣದ ಹೆಸರಲ್ಲಿ ದರೋಡೆ ಮಾಡಲು ಅವಕಾಶ ಕಲ್ಪಿಸಲಾಯಿತು. ಪೂರೈಕೆ ಕಡಿಮೆ ಮಾಡಿ ಇರುವ ಅಲ್ಪ ಸ್ವಲ್ಪ ಸೀಟುಗಳನ್ನು ಮೀಸಲಾತಿ ಮೂಲಕ ಹಂಚಲಾಯಿತು. ಇದರಿಂದ ಮೇಲ್ಜಾತಿ ಮತ್ತು ತಳಜಾತಿಗಳ ನಡುವೆ ಜೀವನಪರ್ಯಂತ ಕೊನೆಗೊಳ್ಳದ ವೈಮನಸ್ಸು ಸೃಷ್ಟಿಯಾಯಿತು. ಈ ವೈಮನಸ್ಸನ್ನು ರಾಜಕೀಯ ಪಕ್ಷಗಳು ಜನರನ್ನು ಒಡೆದು ಆಳಲು ಬಳಸಿವೆ. ಮಂಡಲ್ ವರ್ಸಸ್ ಕಮಂಡಲ್ ಅಥವಾ ಅದ್ವಾನಿ ರಥಯಾತ್ರೆ ಇದಕ್ಕೆ ಉತ್ತಮ ಉದಾಹರಣೆ. ಸಮಾಜದಲ್ಲಿರುವ ವಿವಿಧ ಗುಂಪುಗಳು ಜಾತಿ, ಧರ್ಮದ ಹೆಸರಲ್ಲಿ ಪರಸ್ಪರ ಕಚ್ಚಾಡಿದರೆ ಇವರೆಲ್ಲ ಒಟ್ಟು ಸೇರಿ ತಮಗೆ ಶಿಕ್ಷಣ ಕೊಡಿ, ಆರೋಗ್ಯ ಕೊಡಿಯೆಂದು ಕೇಳುವ ಸಂದರ್ಭವೇ ಸೃಷ್ಟಿಯಾಗುವುದಿಲ್ಲ. ಜೊತೆಗೆ ಖಾಸಗಿ ಬಂಡವಾಳ ಶಿಕ್ಷಣದ ವ್ಯಾಪಾರ ಮೂಲಕ ತಮ್ಮ ಲಾಭ ಹೆಚ್ಚಿಸಿಕೊಳ್ಳುವುದು ಸುಲಭವಾಯಿತು. ಶಿಕ್ಷಣದ ಪೂರೈಕೆಯನ್ನು ಹೆಚ್ಚಿಸುವುದು ಈ ಸಮಸ್ಯೆ ದೂರಗಾಮಿ ಪರಿಹಾರ.

ಪುಟ 10 ಕ್ಕೆ

ಹೊಸ ಶಿಕ್ಷಣ ನೀತಿಯಲ್ಲಿ ಎಲ್ಲವೂ ಇದೆ, ಆದರೆ ಏನೂ ಇಲ್ಲ......

ಪುಟ 9 ರಿಂದ

ಆದರೆ ಆ ದಿಶೆಯಲ್ಲಿ ಸರಕಾರಗಳು ಮಾಡಿದ ಪ್ರಯತ್ನ ಅತ್ಯಂತ ಕಡಿಮೆ.

6. ಶಿಕ್ಷಣದ ದಾಖಲಾತಿ:

ಲೋವರ್ ಪ್ರಾಥಮಿಕ ದಾಖಲಾತಿ ಶೇ.93 ರಷ್ಟಿದೆ, ಸೆಕೆಂಡರಿ ದಾಖಲಾತಿ ಶೇ.75ರಷ್ಟಿದೆ. ಆದರೆ ಉನ್ನತ ಶಿಕ್ಷಣದ ದಾಖಲಾತಿ ತುಂಬಾ ಕಡಿಮೆ ಇದೆ. ಕಾಲೇಜು ಮತ್ತು ಅದಕ್ಕಿಂತ ಹೆಚ್ಚಿನ ಶಿಕ್ಷಣದ ದಾಖಲಾತಿ ಶೇ.25ರ ಆಸುಪಾಸಿನಲ್ಲಿದೆ. ಸಮಾಜದ ಎಲ್ಲ ವರ್ಗಗಳಿಂದಲೂ ಇದೇ ಪ್ರಮಾಣದ ಸರಾಸರಿ ದಾಖಲಾತಿ ಇಲ್ಲ. ದಲಿತ, ಬುಡಕಟ್ಟು, ಹಿಂದುಳಿದ ಜಾತಿಗಳ ದಾಖಲಾತಿ ಸರಾಸರಿ ದಾಖಲಾತಿಗಿಂತ ಕಡಿಮೆ ಇದೆ. ಸಮಾಜದ ಎಲ್ಲ ವರ್ಗಗಳ ದಾಖಲಾತಿಯನ್ನು ಹೆಚ್ಚಿಸುವ ಅಗತ್ಯವಿದೆ.

7. ಶಿಕ್ಷಣ ಸಂಸ್ಥೆಗಳ ಆಡಳಿತ:

ಶಿಕ್ಷಣದ ಆಡಳಿತ ಸಂಪೂರ್ಣ ಬ್ಯುರೋಕ್ರೆಸಿಮಯವಾಗಿದೆ. ಬುಡದಿಂದ ತುದಿ ತನಕ ನೌಕರಶಾಹಿಯೇ ತುಂಬಿದೆ. ಟೀಚರ್ಸ್, ಪೋಷಕರು, ವಿದ್ಯಾರ್ಥಿಗಳು ಎಲ್ಲೂ ಕಾಣುವುದಿಲ್ಲವೆಂದು ಹೊಸ ಶಿಕ್ಷಣ ನೀತಿಯ ಕರಡು ಪ್ರತಿಯಲ್ಲಿ ದಾಖಲಾಗಿತ್ತು. ಕೇವಲ ನೌಕರಶಾಹಿ ತುಂಬಿರುವುದು ಮಾತ್ರವಲ್ಲ ಶಿಕ್ಷಣದ ಆಡಳಿತ ಹೆಚ್ಚು ಹೆಚ್ಚು ಕೇಂದ್ರೀಕರಣಗೊಳ್ಳುತ್ತಿದೆ. ಪಾಲುದಾರರ ಭಾಗವಹಿಸುವಿಕೆಯನ್ನು ತೋರಿಸಲು ಲೋವರ್ ಶಿಕ್ಷಣದಲ್ಲಿ ಶಾಲಾ ಉಸ್ತುವಾರಿ ಸಮಿತಿ ಎನ್ನುವ ನಾಮಕಾವಸ್ಥೆ ವ್ಯವಸ್ಥೆ ಇದೆ. ಇದು ಮಕ್ಕಳ ಡ್ರಾಪ್‌ಔಟ್, ಶಿಕ್ಷಕರ ಹಾಜರಾತಿ, ಸಣ್ಣಮಟ್ಟ ಮೂಲಸೌಕರ್ಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತದೆ. ಪಠ್ಯ ರಚನೆ ಬಗ್ಗೆ ಅಥವಾ ಶಾಲೆ ಲೋಕೇಶನ್ ತೀರ್ಮಾನದ ಬಗ್ಗೆ ಅಥವಾ ಇತರ ದೊಡ್ಡ ತೀರ್ಮಾನದಲ್ಲಿ ಶಾಲಾ ಉಸ್ತುವಾರಿ ಸಮಿತಿ ಪಾತ್ರ ಇಲ್ಲ. ಇದೇ ರೀತಿಯಲ್ಲಿ ಉನ್ನತ ಶಿಕ್ಷಣದ ಆಡಳಿತ ಕೂಡ ಇದೆ. ಸೆನೆಟ್, ಸಿಂಡಿಕೇಟ್‌ಗಳಿಗೆ ಸರಕಾರ ನಡೆಸುವ ರಾಜಕೀಯ ಪಕ್ಷ ತನ್ನ ಕಾರ್ಯಕರ್ತರನ್ನು ನೇಮಿಸುತ್ತದೆ. ಕುಲಪತಿ, ಕುಲಸಚಿವರ ನೇಮಕಾತಿಯಲ್ಲಿ ಸಾಕಷ್ಟು ಭ್ರಷ್ಟಾಚಾರ ಇದೆ ಎನ್ನುವ ಸುದ್ದಿ ಇದೆ. ಕರ್ನಾಟಕ ಸರಕಾರ ಕೆಲವು ವರ್ಷಗಳ ಹಿಂದೆ ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯಿದೆಯನ್ನು ತಿದ್ದುಪಡಿ ಮಾಡಿ ನೇಮಕಾತಿ ಮತ್ತು ಒಂದು ಕೋಟಿಗಿಂತ ಹೆಚ್ಚಿನ ಮೊತ್ತದ ಖರೀದಿಯನ್ನು ಕೇಂದ್ರೀಕರಿಸಿದೆ. ಹಣಕಾಸಿನ ನಿರ್ಣಯ ಸಂಪೂರ್ಣ ಕೇಂದ್ರೀಕರಣಗೊಂಡಿದೆ. ಆರ್ಥಿಕ ಸ್ವಾಯತ್ತತೆ ಇಲ್ಲದೆಅಕಾಡೆಮಿಕ್ ಸ್ವಾಯತ್ತತೆಗೆ ವಿಶೇಷ ಮಹತ್ವ ಇರುವುದಿಲ್ಲ. ಈ ಕುರಿತು ಹೊಸ ಶಿಕ್ಷಣ ನೀತಿ ಏನು ಹೇಳುತ್ತದೆಯೆಂದು ನೋಡಬೇಕಾಗಿದೆ.

8. ಮೌಲ್ಯದ ಪ್ರಶ್ನೆ:

ಶಿಕ್ಷಣದ ಉದ್ದೇಶ ಯುವ ಜನತೆಗೆ ಸ್ಕಿಲ್ ದಾಟಿಸುವುದು ಮಾತ್ರವಲ್ಲ, ಮೌಲ್ಯ ರೂಪಿಸುವುದು ಕೂಡ ಶಿಕ್ಷಣದ ಉದ್ದೇಶವಾಗಿದೆ. ಮೌಲ್ಯರಹಿತ ಶಿಕ್ಷಣ ಮನುಷ್ಯತ್ವವೇ ಇಲ್ಲದ ಮೆಶಿನ್‌ಗಳನ್ನು ಅಥವಾ ರಾಕ್ಷಸರನ್ನು ಸೃಷ್ಟಿಸುತ್ತದೆ. ಮನುಷ್ಯತ್ವ ಇಲ್ಲದ ರಾಜಕೀಯ ನಾಯಕರನ್ನು, ಜಡ್ಜ್‌ಗಳನ್ನು, ಅಧಿಕಾರಿಗಳನ್ನು ಮಾಧ್ಯಮದವರನ್ನು ಮೌಲ್ಯರಹಿತ ಶಿಕ್ಷಣ ಸೃಷ್ಟಿಸುತ್ತದೆ. ಇತ್ತೀಚಿನ ಕೊರೋನ ಸಂದರ್ಭದಲ್ಲಿ ಶಿಕ್ಷಣದ ಮೌಲ್ಯರಹಿತತೆ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಪ್ರಕಟವಾಗಿದೆ. ರೋಗಿಗಳು ಜೀವನ್ಮರಣದ ನಡುವೆ ಹೋರಾಟ ನಡೆಸುವಾಗ ಆಸ್ಪತ್ರೆಗೆ ಸೇರಿಸಿಕೊಳ್ಳಲು ನಿರಾಕರಿಸುವ ವೈದ್ಯರು, ಶೇ.70ರಷ್ಟಿರುವ ಬಡಜನರ ಆದಾಯ ಮೂಲದ ಬಗ್ಗೆ ಕಿಂಚಿತ್ ಯೋಚಿಸದೆ ಲಾಕ್‌ಡೌನ್ ಘೋಷಿಸುವ ನಾಯಕರು, ಇಂತಹ ನಾಯಕರನ್ನು ಹಾಡಿಹೊಗಳುವ ಮಾಧ್ಯಮಗಳು, ಕೊರೋನ ಮೂಲಸೌಕರ್ಯಗಳ ಖರೀದಿಯಲ್ಲಿ ಕೋಟಿಗಟ್ಟಲೆ ಲಂಚ ಪಡೆಯುವ ರಾಜಕಾರಣಿಗಳು, ಇವೆಲ್ಲವನ್ನು ನೋಡಿಯೂ ನೋಡದಂತಿದ್ದ ಜಡ್ಜ್‌ಗಳು – ಇವೆಲ್ಲವೂ ಮೌಲ್ಯರಹಿತ ಶಿಕ್ಷಣದ ಫಲಗಳು.

ವರ್ತಮಾನದ ಸಮಸ್ಯೆಗಳನ್ನು ಹೊಸ ಶಿಕ್ಷಣ ಪರಿಹರಿಸುತ್ತಿದೆಯೇ?

ಶಿಕ್ಷಣ ಕ್ಷೇತ್ರ ವರ್ತಮಾನದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಮೇಲಿನ ಪ್ಯಾರಾಗಳಲ್ಲಿ ನೋಡಿದ್ದೇವೆ. ಹೊಸ ಶಿಕ್ಷಣ ನೀತಿ ಮೇಲಿನ ಸಮಸ್ಯೆಗಳನ್ನು ಪರಿಹರಿಸುವಂತಿದೆಯೇ? ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಮೇಲಿನ ಎಲ್ಲ ಸಮಸ್ಯೆಗಳನ್ನು ಹೊಸ ಶಿಕ್ಷಣ ನೀತಿ ಗುರುತಿಸಿದೆ ಎನ್ನುವುದು ಅದರ ಹೆಗ್ಗಳಿಕೆ ಮತ್ತು ಅದು ಅಷ್ಟಕ್ಕೇ ಅಂದರೆ ಗುರುತಿಸುವಿಕೆ ಸೀಮಿತವಾಗಿರುವುದು ಹೊಸ ನೀತಿಯ ಕೊರತೆ ಎನ್ನುವುದು ನನ್ನ ವಾದ.

1. ಮಾಧ್ಯಮದ ಸಮಸ್ಯೆ:

ಹೊಸ ಶಿಕ್ಷಣ ನೀತಿ ಹಿಂದಿನ ತ್ರಿಭಾಷಾ ಸೂತ್ರಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ 1–5ನೇ ಅಥವಾ 8ನೇ ತರಗತಿ ತನಕ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಬೇಕೆಂದು ಹೇಳುತ್ತದೆ. ಆದರೆ ಇದೇ ಡಾಕ್ಯುಮೆಂಟಲ್ಲಿ ಒಂದು ಶರತ್ತು ಕೂಡ ಇದೆ. ಅದೇನೆಂದರೆ ಎಲ್ಲೆಲ್ಲಿ ಸಾಧ್ಯವಾಗುತ್ತದೋ ಅಲ್ಲೆಲ್ಲ ಸಾಧ್ಯವಾದಷ್ಟು ಮಟ್ಟಿಗೆ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಬೇಕೆನ್ನುತ್ತದೆ ಹೊಸ ಶಿಕ್ಷಣ ನೀತಿ. ಒಂದು ಜಿಲ್ಲೆಯಲ್ಲಿ ಕನಿಷ್ಠ ಐದರಿಂದ ಆರು ಮಾತೃಭಾಷೆಗಳಿರುವ ಜನರಿದ್ದಾರೆ. ಇಡೀ ರಾಜ್ಯವನ್ನು ಪರಿಗಣಿಸಿದರೆ 25ರಿಂದ 30 ಮಾತೃಭಾಷೆಗಳನ್ನು ಮಾತಾಡುವ ಜನರ ದೊಡ್ಡ ಗುಂಪುಗಳನ್ನು ನೋಡಬಹುದು. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಶಾಲೆಗಳನ್ನು ತೆರೆದು ಅಥವಾ ಮೇಸ್ಟ್ರುಗಳನ್ನು ನೇಮಕ ಮಾಡಿ ಶಿಕ್ಷಣ ಕೊಡುವವರು ಯಾರು? ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ನಂತರ ವಿದ್ಯಾರ್ಥಿಯ ಪಾಡೇನು? ಜನರ ಬೇಡಿಕೆ ಮಾತೃಭಾಷೆಯಲ್ಲಿ ಶಿಕ್ಷಣ ಅಲ್ಲ; ಇಂಗ್ಲೀಷ್ ಭಾಷೆಯಲ್ಲಿ ಶಿಕ್ಷಣವೆಂದು ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ಜನರ ಇಂಗ್ಲೀಷ್ ಮೋಹ ಹೋಗಬೇಕಾದರೆ ಇಲ್ಲಿ ಭಾರತೀಯ ಭಾಷೆಗಳು ಮಾತ್ರ ಕಾರುಬಾರು ಮಾಡಬೇಕು. ಅಂದರೆ ಇಂಗ್ಲೀಷ್ ಭಾಷೆಯ ಶಿಕ್ಷಣವನ್ನು ಸಂಪೂರ್ಣ ನಿಷೇಧಿಸಬೇಕು. ಇಂಗ್ಲೀಷ್ ಭಾಷೆಯನ್ನು ನಿಷೇಧಿಸುವುದೆಂದರೆ ಮಧ್ಯಮ ವರ್ಗವನ್ನು ಎದುರು ಹಾಕಿಕೊಳ್ಳುವುದು. ಅಷ್ಟೊಂದು ಧೈರ್ಯ ಈ ಸರಕಾರಕ್ಕೆ ಇದೆಯೇ?

2. ಶಿಕ್ಷಣದ ವಾಣೀಜ್ಯೀಕರಣ:

ಎಜುಕೇಶನ್ ಒಂದು ಸಾರ್ವಜನಿಕ ಸರಕು ಅಥವಾ ಸರಕಾರವೇ ಕೊಡಬೇಕಾದ ಸವಲತ್ತೆಂದು ಹೇಳುತ್ತಲೇ ಎಲ್ಲರಿಗೂ ಶಿಕ್ಷಣ ನೀಡಲು ಖಾಸಗಿಯವರು ಭಾಗವಹಿಸುವುದು ಅನಿವಾರ್ಯ ಎನ್ನುವುದನ್ನು ಹೊಸ ಶಿಕ್ಷಣ ನೀತಿ ಒಪ್ಪಿಕೊಳ್ಳುತ್ತದೆ. ದೇಶದೊಳಗಿನ ಬಂಡವಾಳ ಮಾತ್ರವಲ್ಲ ಪರದೇಶಿ ಬಂಡವಾಳ ಕೂಡ ಬೇಕೆಂದು ವಾದಿಸುತ್ತಿದೆ. ಶಿಕ್ಷಣ ಸಂಸ್ಥೆಗಳ ಒಡೆತನದ ಬಗ್ಗೆ ಶಿಕ್ಷಣ ನೀತಿ ತಲೆ ಕೆಡಿಸಿಕೊಳ್ಳುವುದಿಲ್ಲ. ಅವನ್ನು ರೆಗ್ಯುಲೇಟ್ ಮಾಡುವ ಮೂಲಕ ಖಾಸಗಿ ಸಂಸ್ಥೆಗಳನ್ನು ಕೂಡ ಸಾಮಾಜಿಕ ನ್ಯಾಯ ನೀಡಲು ಬಳಸಬಹುದೆನ್ನುವ ಹುಸಿ ಭರವಸೆಯನ್ನು ಹೊಸ ಶಿಕ್ಷಣ ನೀತಿ ವ್ಯಕ್ತ ಪಡಿಸುತ್ತದೆ. All fees and charges set by private HEIs will be transparently and fully disclosed and there shall be no arbitrary increases in these fees/charges during the period of enrollment of any student. This fee determining mechanism will ensure reasonable recovery of cost while ensuring that HEIs discharge their social obligations. ಇವೆಲ್ಲ ಖಾಸಗಿ ಸಂಸ್ಥೆಗಳನ್ನು ರೆಗ್ಯುಲೇಟ್ ಮಾಡುತ್ತೇವೆ ಎಂದು ತೇಪೆ ಹಚ್ಚುವ ಭರವಸೆಗಳು. ಶಿಕ್ಷಣ ಮತ್ತು ಆರೋಗ್ಯ ಎರಡು ಕೂಡ ಕೋಟಿಗಟ್ಟಲೆ ಬಂಡವಾಳ ಹೂಡಿಕೆ ನಡೆದಿರುವ ಕ್ಷೇತ್ರಗಳು. ಹಲವು ಎಂಎಲ್‌ಎ, ಎಂಪಿಗಳು ಶಿಕ್ಷಣ, ಆರೋಗ್ಯ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಇವರು ಚುನಾವಣೆಯಲ್ಲೂ ಹಣಕಾಸು ಹೂಡುತ್ತಾರೆ ಮತ್ತು ಚುನಾಯಿತರಾಗುತ್ತಿದ್ದಾರೆ. ಇವರೇ ಶಿಕ್ಷಣ, ಆರೋಗ್ಯ ಕ್ಷೇತ್ರದ ಕಾನೂನು ರೂಪಿಸುವವರು. ಇವರಿಂದ ಎಲ್ಲರಿಗೂ ಗುಣಮಟ್ಟದ ಉಚಿತ ಶಿಕ್ಷಣ ನಿರೀಕ್ಷಿಸುವುದು ಅಸಾಧ್ಯ.

3. ಶಿಕ್ಷಣ ಮತ್ತು ಉದ್ಯೋಗದ ಪ್ರಶ್ನೆ

ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಾತಿ, ತರಬೇತಿ, ಗುಣಮಟ್ಟ ಸುಧಾರಣೆ ಇತ್ಯಾದಿಗಳ ಬಗ್ಗೆ ಹೊಸ ಶಿಕ್ಷಣ ನೀತಿಯಲ್ಲಿ ಪ್ರಸ್ತಾವ ಇದೆ. HEI will have clearly defined, independent and transparent process and criteria for faculty recruitment. ವರ್ತಮಾನದ ಶಿಕ್ಷಣ ವ್ಯವಸ್ಥೆಯಲ್ಲೂ ಶಿಕ್ಷಕರನ್ನು ಆಯ್ಕೆ ಮಾಡುವ, ತರಬೇತು ನೀಡುವ ಸ್ವತಂತ್ರ ಸಂಸ್ಥೆಗಳಿವೆ. ವರ್ತಮಾನದಲ್ಲೂ ಶಿಕ್ಷಕರಿಗೆ ಉತ್ತಮ ಸಂಬಳ ಇದೆ. ಆದರೆ ಇವೆಲ್ಲ ಅನ್ವಯವಾಗುವುದು ಸರಕಾರಿ ಸಂಸ್ಥೆಗಳಲ್ಲಿ ದುಡಿಯುವ ಕೆಲವೇ ಕೆಲವು ಖಾಯಂ ಶಿಕ್ಷಕರಿಗೆ ಮಾತ್ರ. ಖಾಸಗಿ ಮತ್ತು ಸರಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ದುಡಿಯುವ ಬಹುತೇಕರು ಸರಕಾರ ಹೇಳುವ ಯಾವುದೇ ಸವಲತ್ತನ್ನು ಪಡೆಯುತ್ತಿಲ್ಲ ಎನ್ನುವುದನ್ನು ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ಖಾಸಗಿ ಸಂಸ್ಥೆಗಳಲ್ಲಿ ದುಡಿಯುವವರಿಗೆ, ಸರಕಾರಿ ಸಂಸ್ಥೆಗಳಲ್ಲಿ ಒಪ್ಪಂದದ ಆಧಾರದಲ್ಲಿ ದುಡಿಯುವವರಿಗೆ ಇವೆಲ್ಲ ಅನ್ವಯವಾಗುವುದಿಲ್ಲ. ಹಾಗೆಂದುಹೊಸ ಶಿಕ್ಷಣ ನೀತಿಯಲ್ಲಿ ಎಲ್ಲೂ ಈಗ ಇರುವ ಅತಿಥಿ ಉಪನ್ಯಾಸಕರು, ಒಪ್ಪಂದ ಆಧಾರದ ನೇಮಕಾತಿ, ಖಾಸಗಿ ಸಂಸ್ಥೆಗಳಲ್ಲಿ ಕಡಿಮೆ ಸಂಬಳಕ್ಕೆ ದುಡಿಸುವ ಕ್ರಮವನ್ನು ರದ್ದುಗೊಳಿಸಿ ಎಲ್ಲರಿಗೂ ಗೌರವಯುತ ಸಂಬಳ ನೀಡುವ ಉದ್ಯೋಗ ವ್ಯವಸ್ಥೆಯನ್ನು ಖಾಸಗಿ ಮತ್ತು ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಗೆ ತರಲಾಗುವುದು ಎನ್ನುವ ಹೇಳಿಕೆಗಳಿಲ್ಲ. ಇನ್ನು ಶಿಕ್ಷಣದ ಗುಣಮಟ್ಟ ಸುಧಾರಣೆ ಸಂಬಂದಿಸಿದಂತೆ –1) a holistic and multi-disciplinary education will be given 2) 4 years undergraduate education will be given with the option of quitting out in the middle 3) HEI will focus on research and innovation 4) creative thinking will be encouraged.

4. ಹಣಕಾಸಿನ ಪ್ರಶ್ನೆ:

ಹಿಂದಿನ ಶಿಕ್ಷಣ ನೀತಿಗಳಂತೆ ಇದು ಕೂಡ ಜಿಡಿಪಿಯ ಶೇ.6 ರನ್ನು ಶಿಕ್ಷಣದ ಮೇಲೆ ವಿನಿಯೋಜಿಸಬೇಕೆಂದು ಆಶಯ ವ್ಯಕ್ತ ಪಡಿಸಿದೆ. ಈ ಸರಕಾರ ಈಗಾಗಲೇ ಆರು ವರ್ಷಗಳ ಆಡಳಿತ ಪೂರೈಸಿದೆ. ಈ ಆರು ವರ್ಷಗಳಲ್ಲಿ ಶಿಕ್ಷಣದ ಮೇಲೆ ಹಿಂದಿನ ಸರಕಾರಗಳು ಮಾಡಿದ ಹೂಡಿಕೆಯಿಂದ ಹೆಚ್ಚು ಹೂಡಿಕೆ ಮಾಡಿದ ದಾಖಲೆಗಳಿಲ್ಲ. ಶಿಕ್ಷಣದ ಮೇಲೆ ಹೆಚ್ಚು ವಿನಿಯೋಜನೆ ಮಾಡುವ ರಾಜಕೀಯ ಮನಸ್ಸಿದ್ದರೆ ಹೊಸ ಶಿಕ್ಷಣ ನೀತಿ ಬರಲು ಕಾಯಬೇಕಾಗಿಲ್ಲ. ಇವರ ಆಡಳಿತದಲ್ಲಿ ನಡೆದ ಹಣಕಾಸಿನ ವಿನಿಯೋಜನೆಯನ್ನು ಗಮನಿಸಿದರೆ ಜಿಡಿಪಿಯ ಶೇ.6ರಷ್ಟು ವಿನಿಯೋಜನೆ ಕೇವಲ ಘೋಷಣೆಯಾಗಿ ಉಳಿಯುವ ಸಾಧ್ಯತೆ ಹೆಚ್ಚಿದೆ.

5. ಮೀಸಲಾತಿ ಪ್ರಶ್ನೆ :

ಹಿಂದುಳಿದ ಸಮುದಾಯಗಳನ್ನು ಒಳಗೊಳ್ಳುವ ಕುರಿತು ದಲಿತ, ಬುಡಕಟ್ಟು, ಅಲ್ಪಸಂಖ್ಯಾತ, ಹಿಂದುಳಿದ ಜಾತಿ – ಪರಿಭಾಷೆಗಳ ಬದಲು ಹೊಸ ಶಿಕ್ಷಣ ನೀತಿಯಲ್ಲಿ 'ಸೋಶಿಯಲಿ ಏಕನಾಮಿಕಲಿ ಡಿಸ್‌ಎಡ್ವೆಂಟೇಜ್ಡ್ ಗ್ರೂಪ್ಸ್' (ಸಾಮಾಜಿಕವಾಗಿ ಆರ್ಥಿಕವಾಗಿ ಪ್ರತಿಕೂಲ ಪರಿಸ್ಥಿತಿ ಇರುವ ಗುಂಪುಗಳು) ಎನ್ನುವ ಪರಿಭಾಷೆ ಹೆಚ್ಚು ಬಳಕೆಯಾಗಿದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ದಲಿತ, ಬುಡಕಟ್ಟು, ಅಲ್ಪಸಂಖ್ಯಾತ, ಹಿಂದುಳಿದ ಜಾತಿ ಇತ್ಯಾದಿ ಚಾರಿತ್ರಿಕವಾಗಿ ಹಿಂದುಳಿದವರನ್ನು ಗುರುತಿಸಲು ಕೂಡ ಈ ಡಾಕ್ಯುಮೆಂಟ್ ಹಿಂಜರಿಯುತ್ತಿದೆ. ಅದರ ಬದಲು ಎಲ್ಲರನ್ನು ಮೂಟೆ ಕಟ್ಟಿ 'ಸೋಶಿಯಲಿ ಏಕನಾಮಿಕಲಿ ಡಿಸ್‌ಎಡ್ವಂಟೇಜ್ಡ್ ಗ್ರೂಪ್ಸ್' ಎಂದು ಗುರುತಿಸಲು ಪ್ರಯತ್ನಿಸುತ್ತಿದೆ.

6. ದಾಖಲಾತಿ:

ಉನ್ನತ ಶಿಕ್ಷಣದ ದಾಖಲಾತಿ ದರವನ್ನು ಇಂದಿನ ಶೇ.26ರಿಂದ 2035ರ ವೇಳೆಗೆ ಶೇ.50ಕ್ಕೆ ಏರಿಸುವ ಉದ್ದೇಶವನ್ನು ಹೊಸ ಶಿಕ್ಷಣ ನೀತಿ ಹೊಂದಿದೆ. ದಾಖಲಾತಿ ಏರಿಕೆ ಆಗಬೇಕಾದರೆ ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚಾಗಬೇಕು. ಆದರೆ ಸಂಖ್ಯೆ ಹೆಚ್ಚಿಸುವ ಪ್ರಸ್ತಾವಗಳು ತುಂಬಾ ವಿರಳ. ಹೆಚ್ಚಿಸುವ ಬದಲು ಈಗ ಇರುವ ಸಣ್ಣಮಟ್ಟ ಮತ್ತು ಏಕ ಶಿಸ್ತಿನ ವಿಶ್ವವಿದ್ಯಾಲಯಗಳನ್ನು ಕಡಿಮೆ ಮಾಡಿ ದೊಡ್ಡ ವಿಶ್ವವಿದ್ಯಾಲಯಗಳನ್ನು ಆರಂಬಿಸುವ ಇರಾದೆಯನ್ನು ಪಾಲಿಸಿ ವ್ಯಕ್ತ ಪಡಿಸುತ್ತಿದೆ. ಲೋವರ್ ಎಜುಕೇಶನ್‌ನಲ್ಲೂ ಇದೇ ಪ್ರವೃತ್ತಿಯನ್ನು ನೋಡಬಹುದು. ವರ್ತಮಾನದಲ್ಲಿ ಅಂಗನವಾಡಿ, ಏಕೋಪಧ್ಯಾಯ ಶಾಲೆಗಳನ್ನು ವಸತಿ ಪ್ರದೇಶದಲ್ಲಿ ಆರಂಭಿಸಿ ಲೋವರ್ ಎಜುಕೇಶನ್ ದಾಖಲಾತಿ ಹೆಚ್ಚಿಸಲಾಗಿದೆ. ಆದರೆ ಹೊಸ ಶಿಕ್ಷಣ ನೀತಿ ಪ್ರಕಾರ ವಸತಿ ಸಮೀಪ ಶಾಲೆಗಳು ಗುಣಮಟ್ಟ ಸುಧಾರಣೆ ದೃಷ್ಟಿಯಿಂದ ಸರಿಯಾದ ಕ್ರಮವಲ್ಲ. ಏಕೆಂದರೆ ಇಂತಹ ಸಣ್ಣಮಟ್ಟ ಶಾಲೆಗಳ ಸುಧಾರಣೆಗೆ ವಿನಿಯೋಜನೆ ಹೆಚ್ಚಿಸಿದರೆ (ಉತ್ತಮ ಸವಲತ್ತು ಕೊಡುವುದು, ಹೆಚ್ಚು ಅಧ್ಯಾಪಕರನು ನೇಮಕ ಮಾಡುವುದು) ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದಿಲ್ಲ ಎನ್ನುವ ನಿಲುವನ್ನು ಹೊಸ ಶಿಕ್ಷಣ ನೀತಿ ತಾಳುತ್ತದೆ. ಇಂತಹ ವಸತಿ ಸಮೀಪ ಶಾಲೆಗಳ ಬದಲು ಊರಿಂದ 5–10 ಕಿಮೀ ದೂರದಲ್ಲಿ ಸುಸಜ್ಜಿತ ಶಾಲೆಗಳನ್ನು ಆರಂಭಿಸಿದರೆ ಲೋವರ್ ಎಜುಕೇಶನ ಗುಣಮಟ್ಟ ಸುಧಾರಣೆ ಆಗಬಹುದೆನ್ನುವುದು ಹೊಸ ಶಿಕ್ಷಣ ನೀತಿಯ ನಿಲುವು. ಶಿಕ್ಷಣ ಸಂಸ್ಥೆಗಳ ಸಂಖ್ಯೆ ಕಡಿಮೆ ಮಾಡಿ ಗುಣಮಟ್ಟ ಹೆಚ್ಚಿಸಲು ಮಾಡುವ ಪ್ರಯತ್ನ ದಾಖಲಾತಿ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ಅದರಲ್ಲೂ ಹೆಣ್ಣುಮಕ್ಕಳ ಶಿಕ್ಷಣದ ಮೇಲೆ ಪರಿಣಾಮ ಬಿರಬಹುದು.

7. ಶಿಕ್ಷಣದ ಆಡಳಿತದ ಪ್ರಶ್ನೆ:

ಹೊಸ ಶಿಕ್ಷಣ ನೀತಿಯಲ್ಲಿ ಎಲ್ಲೂ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಶಿಕ್ಷಣ ಸಂಸ್ಥೆಗಳ ಆಡಳಿತದಲ್ಲಿ ಮುಖ್ಯ ಪಾಲುದಾರರನ್ನಾಗಿಸುವ ದಾಖಲೆಗಳಿಲ್ಲ. ಆಡಳಿತದಲ್ಲಿ ಬಿಡಿ ಹೊಸ ಶಿಕ್ಷಣ ನೀತಿಯನ್ನು ರೂಪಿಸುವಾಗ ಶಿಕ್ಷಕರ ಅಥವಾ ವಿದ್ಯಾರ್ಥಿಗಳ ಸಂಘಟನೆಗಳೊಂದಿಗೆ ಚರ್ಚಿಸಿದ ದಾಖಲೆಗಳಿಲ್ಲ. ಉನ್ನತ ಶಿಕ್ಷಣದ ಆಡಳಿತವನ್ನು ಹಿಂದೆ ಹಲವು ಸಂಸ್ಥೆಗಳು ನೋಡಿಕೊಳ್ಳುತ್ತಿದ್ದವು. ಅವನ್ನು ರದ್ದುಗೊಳಿಸಿ ಒಂದೇ ಸಂಸ್ಥೆಯ ಕೆಳಗೆ ಹಿಂದಿನ ಹಲವು ಫಂಕ್ಷನ್‌ಗಳನ್ನು ತರಲು ಹೊಸ ಶಿಕ್ಷಣ ನೀತಿ ಬಯಸುತ್ತದೆ. Regulatory system of higher education will ensure that the distinct functions of regulation, accreditation, funding and academic standard setting will be performed by distinct, independent and empowered bodies. These four structures will be set up as four independent vertical

ಪುಟ 14 ಕ್ಕೆ

ಶತಮಾನೋತ್ಸವ ಲೇಖನಮಾಲೆ-41

1920-2020

ವಿಶೇಷ ಮಹಾಧಿವೇಶನ 1958:

ಚುನಾವಣಾ ವಿಜಯಗಳು ಹಾಗೂ ತೀವ್ರ ವಾಗ್ವಾದಗಳ ಹಿನ್ನೆಲೆಯಲ್ಲಿ

1957ರಲ್ಲಿ, ಕಮ್ಯುನಿಸ್ಟ್ ಪಕ್ಷವು ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಗಳಿಸಿದ ಮತಗಳಿಗಿಂತ ಎರಡು ಪಟ್ಟು ಹೆಚ್ಚು ಮತಗಳನ್ನು ಗಳಿಸಿತು ಮತ್ತು ಗೆದ್ದ ಸ್ಥಾನಗಳು ಹಾಗೂ ಗಳಿಸಿದ ಮತಗಳು ಎರಡರಲ್ಲೂ ಪಕ್ಷವು ಎರಡನೇ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಹಲವಾರು ರಾಜಕೀಯ, ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಸಮಸ್ಯೆಗಳನ್ನು ಚರ್ಚೆ ಮಾಡಲು ಪ್ಲೀನಂ ನಡೆಸಬೇಕೆಂದು ಕೇಂದ್ರ ಸಮಿತಿಯು ಮಾಡಿದ್ದ ತೀರ್ಮಾನವನ್ನು ಸಾರ್ವತ್ರಿಕ ಚುನಾವಣೆಗಳ ಕಾರಣದಿಂದಾಗಿ ನಡೆಸಲಾಗಲಿಲ್ಲ. ಪ್ಲೀನಂನ ಬದಲು ಚುನಾವಣೆಯಾದ ಕೂಡಲೇ ಪಕ್ಷದ ಒಂದು ವಿಶೇಷ ಮಹಾಧಿವೇಶನ, ಪಕ್ಷದ ಐದನೇ ಮಹಾಧಿವೇಶನವನ್ನು 1958 ಏಪ್ರಿಲ್ 6ರಿಂದ 13ರವರೆಗೆ ಅಮೃತಸರದಲ್ಲಿ ನಡೆಸಲಾಯಿತು. ರಾಜಕೀಯ ನಿರ್ಣಯ ಹಾಗೂ ಸಂಘಟನಾತ್ಮಕ ವರದಿಗಳನ್ನು ಚರ್ಚೆ ಮಾಡಿ ಅಂಗೀಕರಿಸುವುದರ ಜತೆಯಲ್ಲೇ, ಆ ವಿಶೇಷ ಮಹಾಧಿವೇಶನವು ಪಕ್ಷದ ಸಂವಿಧಾನವನ್ನು ಚರ್ಚೆ ಮಾಡಿ ಅಂಗೀಕರಿಸಿತು. ಪರಿಷ್ಕರಣವಾದ ಮತ್ತು ಪಂಥವಾದದ ವಿರುದ್ಧ ಹೋರಾಡುವ ಆಶಯದ ಹೊರತಾಗಿಯೂ, ಈ ಸಂವಿಧಾನದಲ್ಲಿ ಪಕ್ಷದ ಕೆಲವು ವಿಭಾಗಗ'ಳಲ್ಲಿ ಇದ್ದ ಇವೇ ಪ್ರವೃತ್ತಿಗಳ ಒಂದು ಪ್ರತಿಫಲನವಿತ್ತು. ಇದು ಪಕ್ಷದೊಳಕ್ಕೆ, ವಿಶೇಷವಾಗಿ 1957ರ ಚುನಾವಣಾ ಫಲಿತಾಂಶಗಳ ನಂತರ, ಸಂಸದೀಯ ಭ್ರಮೆ ಹರಿದು ಬಂದಿದ್ದನ್ನು ಪ್ರಕಟಪಡಿಸಿತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಮೂಲಭೂತ ಸೈದ್ಧಾಂತಿಕ ಪ್ರಶ್ನೆಗಳ ಮೇಲೆ ಪಕ್ಷದ ಒಳಗಡೆ ಕ್ರಮೇಣ ತೀವ್ರವಾದ ವಾಗ್ವಾದಗಳು ನಡೆದ ಅವಧಿಗಳಲ್ಲಿ 1957ರ ನಂತರದ ಅವಧಿಯೂ ಒಂದಾಗಿತ್ತು. ಆದಾಗ್ಯೂ, ಪಕ್ಷವು ಆ ಎಲ್ಲಾ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನೂ ಬದಿಗೊತ್ತಿ 1957ರಲ್ಲಿ ನಡೆದ ಎರಡನೇ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸುವ ಹೋರಾಟದಲ್ಲಿ ಐಕ್ಯತೆಯಿಂದ ಒಟ್ಟುಗೂಡಿತು. ಕೇಂದ್ರದಲ್ಲಿ ಮತ್ತು ಕೇರಳವನ್ನು ಹೊರತುಪಡಿಸಿ ಉಳಿದೆಲ್ಲಾ ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರವನ್ನು ಉಳಿಸಿಕೊಂಡರೂ, ದೇಶದ ರಾಜಕೀಯ ಭೂಪ್ರದೇಶದಲ್ಲಿ ಅಸಾಧಾರಣವಾದ ಬದಲಾವಣೆ ಆಯಿತು.

1957ರಲ್ಲಿ, ಕಮ್ಯುನಿಸ್ಟ್ ಪಕ್ಷವು ಮೊದಲ ಸಾರ್ವತ್ರಿಕ ಚುನಾವಣೆ(1951–52)ಯಲ್ಲಿ ಗಳಿಸಿದ ಮತಗಳಿಗಿಂತ ಎರಡು ಪಟ್ಟು ಹೆಚ್ಚು ಮತಗಳನ್ನು ಗಳಿಸಿತು ಮತ್ತು ಗೆದ್ದ ಸ್ಥಾನಗಳು ಹಾಗೂ ಗಳಿಸಿದ ಮತಗಳು ಎರಡರಲ್ಲೂ ಪಕ್ಷವು ಎರಡನೇ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಕೇರಳದಲ್ಲಿ ಪಕ್ಷವು ಬಹುಮತ ಗಳಿಸಿದರೆ, ಆಂಧ್ರ ಮತ್ತು ಪಶ್ಚಿಮ ಬಂಗಾಳದಲ್ಲಿ ಪ್ರಮುಖ ವಿರೋಧ ಪಕ್ಷವಾಗಿ ಹೊರಹೊಮ್ಮಿತು. ದೇಶದ ಪ್ರತಿಯೊಂದು ವಿಧಾನಸಭೆಯಲ್ಲೂ ಪಕ್ಷವು ಸ್ಥಾನಗಳನ್ನು ಗೆದ್ದುಕೊಂಡಿತು, ಆದರೆ ಹಿಂದಿನ ಚುನಾವಣೆಯಲ್ಲಿ ಬಿಹಾರ, ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ರಾಜಾಸ್ತಾನದಂತಹ ರಾಜ್ಯಗಳಲ್ಲಿ ಒಂದು ಸ್ಥಾನವನ್ನೂ ಗಳಿಸಿರಲಿಲ್ಲ. ಬಹುತೇಕ ಕೈಗಾರಿಕಾ ಹಾಗೂ ಕಾರ್ಮಿಕ ವರ್ಗದ ಕೇಂದ್ರಗಳಲ್ಲಿ ಪಕ್ಷವು ಉತ್ತಮ ಪ್ರದರ್ಶನ ನೀಡಿತ್ತು. ಏನೇನೂ ಶಕ್ತಿಯಿಲ್ಲದ ರಾಜ್ಯಗಳಲ್ಲಿಯೂ ಕೂಡ ಪಕ್ಷವು ತನ್ನ ಮತವನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿತ್ತು. ಒಟ್ಟಾರೆಯಾಗಿ, ಒಟ್ಟು ಮತಗಳಲ್ಲಿ ಪಕ್ಷವು 11% ಮತಗಳನ್ನು ಮತ್ತು 1 ಕೋಟಿ 20 ಲಕ್ಷ ಮತಗಳನ್ನು ಗಳಿಸಿತ್ತು. ಒಟ್ಟು ಮತದಾನವಾದ ಮತಗಳ ಸಂಖ್ಯೆಯ ಅನುಪಾತದಲ್ಲಿ ಲೆಕ್ಕ ಹಾಕಿದ್ದರೆ, ಪಕ್ಷವು ಇನ್ನೂ ಹೆಚ್ಚು ಸ್ಥಾನಗಳನ್ನು ಗಳಿಸಬಹುದಾಗಿತ್ತು.

ಈ ಚುನಾವಣೆಯ ಫಲಿತಾಂಶಗಳನ್ನು ಪುನರಾವಲೋಕನ ಮಾಡಿದ ನಂತರ, ಪಕ್ಷದ ಮೇಲೆ ಜನರು ತೋರಿದ ವಿಶ್ವಾಸಕ್ಕಾಗಿ ಪಕ್ಷವು ಅವರಿಗೆ ಧನ್ಯವಾದಗಳನ್ನು ಸಲ್ಲಿಸಿತು ಮತ್ತು ಅಗತ್ಯವಾಗಿ ಸರಿಪಡಿಸಲೇಬೇಕಾದ ದೌರ್ಬಲ್ಯಗಳನ್ನು ಗುರುತಿಸಿತು. ಪಾಳೇಗಾರಿ ಶಕ್ತಿಗಳು ಪ್ರಾಬಲ್ಯ ಹೊಂದಿರುವ ಮಧ್ಯಪ್ರದೇಶ ಮತ್ತು ರಾಜಾಸ್ತಾನ ರಾಜ್ಯಗಳಲ್ಲಿ ಜನಸಂಘದಂತಹ ಕೋಮುವಾದೀ ಪಕ್ಷಗಳು ತಮ್ಮ ಸ್ಥಾನಗಳನ್ನು ಮತ್ತು ಮತಗಳನ್ನು ಹೆಚ್ಚಿಸಿಕೊಂಡಿರುವುದನ್ನು ಪಕ್ಷವು ಗಮನಿಸಿತು. ಕಮ್ಯುನಿಸ್ಟ್ ಚಳುವಳಿ ಮತ್ತಿತರ ಪ್ರಗತಿಪರ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ದುರ್ಬಲವಾಗಿರುವ ಒರಿಸ್ಸಾದಂತಹ ರಾಜ್ಯಗಳಲ್ಲಿಯೂ ಅವರು ನೆಲೆ ಕಂಡುಕೊಂಡಿದ್ದರು. ಹಲವಾರು ಗ್ರಾಮೀಣ ಪ್ರದೇಶಗಳಲ್ಲಿ ನಾವು ಸ್ಥಾನ ಗಳಿಸುವಲ್ಲಿ ವಿಫಲರಾಗಿದ್ದೇವೆ ಎಂದು ಕೂಡ ಗಮನಿಸಿದ ಪಕ್ಷವು ಅಂಥಲ್ಲಿ ರೈತರ ನಡುವೆ ಕಿಸಾನ್‌ಸಭಾ ಹಾಗೂ ಪಕ್ಷವನ್ನು ಇನ್ನೂ ಬಲಪಡಿಸಬೇಕೆಂದು ಸೂಚಿಸಿತು.

ಸಾರ್ವತ್ರಿಕ ಚುನಾವಣೆಗಳ ನಂತರದಲ್ಲಿ ಕೂಡಲೇ ಸೇರಿದ ಪಕ್ಷದ ಕೇಂದ್ರ ಸಮಿತಿಯು, 'ಸಾಮೂಹಿಕ ಪಕ್ಷ' ಕಟ್ಟುವ ಪ್ರಯತ್ನದೊಂದಿಗೆ ಪಕ್ಷದ ಸದಸ್ಯತ್ವವನ್ನು ಎರಡು ಪಟ್ಟು ಹೆಚ್ಚಿಸಬೇಕೆಂದು ಕರೆ ನೀಡಿತು. ಹಲವಾರು ರಾಜಕೀಯ, ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಸಮಸ್ಯೆಗಳನ್ನು ಚರ್ಚೆ ಮಾಡಲು ಪ್ಲೀನಂ ನಡೆಸಬೇಕೆಂದು ಕೇಂದ್ರ ಸಮಿತಿಯು ಮಾಡಿದ್ದ ತೀರ್ಮಾನವನ್ನು ಸಾರ್ವತ್ರಿಕ ಚುನಾವಣೆಗಳ ಕಾರಣದಿಂದಾಗಿ ನಡೆಸಲಾಗಲಿಲ್ಲ. ಪ್ಲೀನಂನ ಬದಲು ಚುನಾವಣೆಯಾದ ಕೂಡಲೇ ಪಕ್ಷದ ಒಂದು ವಿಶೇಷ ಮಹಾಧಿವೇಶನವನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು. ಆ ಪ್ರಕಾರವಾಗಿ ಒಂದು ವಿಶೇಷ ಮಹಾಧಿವೇಶನ, ಪಕ್ಷದ ಐದನೇ ಮಹಾಧಿವೇಶನವನ್ನು 1958 ಏಪ್ರಿಲ್ 6ರಿಂದ 13ರವರೆಗೆ ಅಮೃತಸರದಲ್ಲಿ ನಡೆಸಲಾಯಿತು.

ರಾಜಕೀಯ ನಿರ್ಣಯ ಹಾಗೂ ಸಂಘಟನಾತ್ಮಕ ವರದಿಗಳನ್ನು ಚರ್ಚೆ ಮಾಡಿ ಅಂಗೀಕರಿಸುವುದರ ಜತೆಯಲ್ಲೇ, ಆ ವಿಶೇಷ ಮಹಾಧಿವೇಶನವು ಪಕ್ಷದ ಸಂವಿಧಾನವನ್ನು ಚರ್ಚೆ ಮಾಡಿ ಅಂಗೀಕರಿಸಿತು. 'ಕಾರ್ಮಿಕ ವರ್ಗದ ನೇತೃತ್ವದಲ್ಲಿ, ಕಾರ್ಮಿಕ ವರ್ಗ ಮತ್ತು ರೈತಾಪಿಗಳ ಮೈತ್ರಿಯ ಆಧಾರದಲ್ಲಿ ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕು, ಮತ್ತು ಸಮಾಜವಾದ ಹಾಗೂ ಸಮತಾವಾದವನ್ನು ಸಾಕಾರಗೊಳಿಸಬೇಕು' ಎನ್ನುವುದು ಪಕ್ಷದ ಗುರಿಯಾಗಬೇಕು ಎಂದು ಪಕ್ಷದ ಸಂವಿಧಾನದ ಪ್ರಸ್ತಾವನೆಯು ಘೋಷಿಸಿತು. ಮುಂದುವರಿದು, ಕೋಮುವಾದ, ಜಾತಿ, ಅಸ್ಪೃಶ್ಯತೆ ಮತ್ತು ಮಹಿಳೆಯರಿಗೆ ಸಮಾನ ಹಕ್ಕುಗಳ ನಿರಾಕರಣೆಗಳಂತಹ ಅಂಧಶ್ರದ್ಧೆಗಳು ಮತ್ತು ಆಚರಣೆಗಳ ವಿರುದ್ಧ ಪಕ್ಷವು ಹೋರಾಡುತ್ತದೆ ಎಂದೂ ವಿಶದಪಡಿಸಿತು. ಸಮಾಜವಾದಿ ಸಮಾಜದ ಸ್ಥಾಪನೆಗಾಗಿನ ಈ ಹೋರಾಟದಲ್ಲಿ 'ಪರಿಷ್ಕರಣವಾದ, ಶಾಸ್ತ್ರಾಂಧತೆ ಮತ್ತು ಪಂಥವಾದಗಳ ಪ್ರವೃತ್ತಿಗಳ ಎಲ್ಲ ಪ್ರಕಟರೂಪಗಳ ವಿರುದ್ಧ ಕಾದಾಡುವುದಾಗಿ ಮತ್ತು ಭಾರತೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಅನ್ವಯಿಸುವ ಮೂಲಕ, 'ಭಾರತದ ಇತಿಹಾಸ ಮತ್ತು ರಾಷ್ಟ್ರೀಯ ವೈಶಿಷ್ಟ್ಯತೆಗಳು ಹಾಗೂ ಭಾರತೀಯ ಜನರ ಅತ್ಯುತ್ತಮ ಪರಂಪರೆಗಳನ್ನು ಗಣನೆಗೆ ತೆಗೆದುಕೊಂಡು' ನೀತಿಗಳನ್ನು ಕೂಲಂಕುಷವಾಗಿ ಯೋಜಿಸಲಾಗುವುದು ಎಂದು ಸಂವಿಧಾನವು ಘೋಷಿಸಿತು.

ಪರಿಷ್ಕರಣವಾದ ಮತ್ತು ಪಂಥವಾದದ ವಿರುದ್ಧ ಹೋರಾಡುವ ಆಶಯದ ಹೊರತಾಗಿಯೂ, ಪಕ್ಷದ ಸಂವಿಧಾನದಲ್ಲಿ ಪಕ್ಷದ ಕೆಲವು ವಿಭಾಗಗಳಲ್ಲಿ ಇದ್ದ ಇವೇ ಪ್ರವೃತ್ತಿಗಳ ಒಂದು ಪ್ರತಿಫಲನವಿತ್ತು. ಪಕ್ಷವು 'ಸಂಸತ್ತಿನಲ್ಲಿ ಬಹುಮತ ಗಳಿಸುವ ಮೂಲಕ ಮತ್ತು ಅದಕ್ಕೆ ಬೆಂಬಲವಾಗಿ ಸಾಮೂಹಿಕ ಕಾರ್ಯಾಚರಣೆಗಳ ಮೂಲಕ .. ಪ್ರತಿಗಾಮಿ ಶಕ್ತಿಗಳ ಪ್ರತಿರೋಧವನ್ನು ಮೀರಿ ನಿಲ್ಲಬಲ್ಲದು, ಮತ್ತು ಸಂಸತ್ತು ಜನತೆಯ ಇಚ್ಛಾಶಕ್ತಿಯ ಒಂದು ಸಾಧನವಾಗುವಂತೆ ಖಾತ್ರಿಪಡಿಸಬಹುದು' ಮತ್ತು 'ಆರ್ಥಿಕ, ಸಾಮಾಜಿಕ ಮತ್ತು ಪ್ರಭುತ್ವ ಸಂರಚನೆಯಲ್ಲಿ ಒಂದು ಮೂಲಭೂತ ಬದಲಾವಣೆಯನ್ನು' ತರಬಲ್ಲದು ಎಂದು ಘೋಷಿಸಿತು. ಇದು ಪಕ್ಷದೊಳಕ್ಕೆ, ವಿಶೇಷವಾಗಿ 1957ರ ಚುನಾವಣಾ ಫಲಿತಾಂಶಗಳ ನಂತರ, ಸಂಸದೀಯ ಭ್ರಮೆ ಹರಿದು ಬಂದಿದ್ದನ್ನು ಪ್ರಕಟಪಡಿಸಿತು.

ಪಕ್ಷದ ಸಂವಿಧಾನದಲ್ಲಿ ಅಳವಡಿಸಿದ ಇನ್ನೊಂದು ಪರಿಷ್ಕರಣವಾದಿ ಸಂಘಟನಾತ್ಮಕ ನೀತಿಗಳ ಪ್ರತಿಫಲನ ಎಂದರೆ, ಸಮಿತಿಗಳನ್ನು ರಚಿಸುವ ರೀತಿಯಲ್ಲಿ ತಂದ ಬದಲಾವಣೆಗಳು. ರಾಷ್ಟ್ರೀಯ ಮಂಡಳಿ, ಕೇಂದ್ರೀಯ ಕಾರ್ಯಕಾರಿ ಸಮಿತಿ ಮತ್ತು ಕಾರ್ಯದರ್ಶಿ ಮಂಡಳಿ ಎಂಬ ಮೂರು ಶ್ರೇಣಿಗಳ ಒಂದು ರಚನೆಯನ್ನು ಆರಂಭಿಸಲಾಯಿತು. ಇದು ಸದಸ್ಯರು ವಿವಿಧ ಹಂತಗಳ ವಿವಿಧ ಸಭೆಗಳ ನಿರ್ಧಾರಗಳ ಜಾರಿಗಿಂತ ಹೆಚ್ಚಾಗಿ ಈ ಸಭೆಗಳಲ್ಲಿ ಭಾಗವಹಿಸುವುದರಲ್ಲೇ ಸಮಯ ಕಳೆಯುವಂತಾಗುತ್ತಿತ್ತು. ಪಕ್ಷದ ಆಂತರಿಕ ಪ್ರಜಾಪ್ರಭುತ್ವದ ಹೆಸರಿನಲ್ಲಿ ಈ ಸಮಿತಿಗಳಲ್ಲಿ, ರಾಜಕೀಯ ಮತ್ತು ಸೈದ್ಧಾಂತಿಕ ಮಟ್ಟದ ಪರಿವೆಯೆ ಇಲ್ಲದೆ, ವಿವಿಧ ಸಮಿತಿಗಳಲ್ಲಿ ಸದಸ್ಯರ ಸಂಖ್ಯೆಯನ್ನೂ ಹೆಚ್ಚಿಸಲಾಯಿತು. ಕ್ರಾಂತಿಕಾರಿ ಆಂದೋಲನದ ಸ್ವರೂಪ, ಸ್ವಭಾವ ಮತ್ತು ಆಳವನ್ನು ಪರಿಗಣಿಸದೆ, ಪ್ರಾದೇಶಿಕ ಪ್ರತಿನಿಧಿತ್ವ ಮತ್ತು ಮತ್ತು ಸದಸ್ಯತ್ವವನ್ನೇ ಗಮನಕ್ಕೆ ತಗೊಳ್ಳಲಾಯಿತು, ಹೀಗೆ ಸಂಘಟನಾತ್ಮಕ ಆಚರಣೆಗಳಲ್ಲಿ ಒಂದು ಪರಿಷ್ಕರಣವಾದೀ ತಿಳುವಳಿಕೆ ವ್ಯಕ್ತಗೊಳ್ಳಲಾರಂಭಿಸಿತು.

ಪಕ್ಷದ ಸಂವಿಧಾನ ಸದಸ್ಯರಿಗೆ 12 ಕರ್ತವ್ಯಗಳನ್ನು ವಿಧಿಸಿತು–ಪಕ್ಷದ ಚಟುವಟಿಕೆಗಳಲ್ಲಿ ನಿಯಮಿತವಾಗಿ ಭಾಗವಹಿಸುವುದು, ಮಾರ್ಕ್ಸ್‌ವಾದ–ಲೆನಿನವಾದದ ಅಧ್ಯಯನ, ಪಕ್ಷದ ಪತ್ರಿಕೆಗಳನ್ನು ಓದುವುದು ಮತ್ತು ಬೆಂಬಲಿಸುವುದು, ಪಕ್ಷದ ಶಿಸ್ತನ್ನು ಪಾಲಿಸುವುದು, ಜನಸಮೂಗಳ ಸೇವೆ, ಪರಸ್ಪರ ಸಂಗಾತಿ ವರ್ತನೆ, ವಿಮರ್ಶೆ ಮತ್ತು ಸ್ವವಿಮರ್ಶೆಯನ್ನು ಪಾಲಿಸುವುದು, ಭಾರತೀಯ ಜನತೆಯ ಸಂಪ್ರದಾಯಗಳು ಮತ್ತು ಅವರ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ತಿಳಿವನ್ನು ಆಳಗೊಳಿಸುವುದು.

ಅದೇ ರೀತಿಯಲ್ಲಿ, ಅದು ಪಕ್ಷದ ಪ್ರತಿಯೊಬ್ಬ ಸದಸ್ಯನಗೂ ಏಳು ಹಕ್ಕುಗಳನ್ನು ಖಾತರಿಪಡಿಸಿತು. ಪಕ್ಷದ ಘಟಕಗಳಿಗೆ ಮತ್ತು ಸಮಿತಿಗಳಿಗೆ ಆಯ್ಕೆಯಾಗುವ, ಚರ್ಚೆಗಳಲ್ಲಿ ಮುಕ್ತವಾಗಿ ಭಾಗವಹಿಸಿ ಪಕ್ಷದ ನೀತಿಗಳನ್ನು ರೂಪಿಸಲು ಕೊಡುಗೆ ನೀಡುವ, ಪಕ್ಷದ ಸಭೆಗಳಲ್ಲಿ ಪಕ್ಷದ ಸಮಿತಿಗಳನ್ನು ಮತ್ತು ಕಾರ್ಯನಿರ್ವಾಹಕರನ್ನು ಟೀಕೆ ಮಾಡುವ ಮತ್ತು ತಮ್ಮ ಅಭಿಪ್ರಾಯಗಳನ್ನು ಮೇಲಿನ ಸಮಿತಿಗಳಿಗೆ ಸಲ್ಲಿಸುವ ಹಕ್ಕುಗಳನ್ನು ಖಾತರಿಪಡಿಸಿತು. ಪ್ರಜಾಸತ್ತಾತ್ಮಕ ಕೇಂದ್ರವಾದದ ತತ್ವಗಳನ್ನು ಸವಿಸ್ತಾರವಾಗಿ ವಿವರಿಸಿದ ಸಂವಿಧಾನವು ಅದನ್ನು ಪಕ್ಷದಲ್ಲಿ ಅಳವಡಿಸುವುದು ಹೇಗೆ ಎಂಬುದನ್ನು ವಿಶದಪಡಿಸಿತು.

ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಲು ಜನರು ನಡೆಸುವ ಹೋರಾಟಗಳ ನಾಯಕರಾಗಿ ಪಕ್ಷದ ಮೂಲ ಘಟಕಗಳಾದ ಶಾಖೆಗಳು ಪರಿವರ್ತನೆಗೊಳ್ಳುವುದನ್ನು ಖಾತ್ರಿಪಡಿಸುವ ಮೂಲಕ ಸಾಮೂಹಿಕ ಚಟುವಟಿಕೆಗಳು ಮತ್ತು ಸಾಮೂಹಿಕ ಕಾರ್ಯವೈಖರಿಯಲ್ಲಿ ಆಮೂಲಾಗ್ರವಾಗಿ ಬದಲಾವಣೆ ತರಬೇಕೆಂದು ಮಹಾಧಿವೇಶನವು ತೀರ್ಮಾನ ಮಾಡಿತು. 'ಪ್ರತಿಯೊಂದು ಕೆಲಸಕ್ಕೂ ಸಂಗಾತಿಗಳಿರಬೇಕು ಮತ್ತು ಪ್ರತಿಯೊಬ್ಬ ಸಂಗಾತಿಗೂ ಕೆಲಸಗಳಿರಬೇಕು' ಎನ್ನುವ ರೀತಿಯಲ್ಲಿ ಪ್ರತಿಯೊಂದು ರಂಗದಲ್ಲೂ ನಿರಂತರ ಚಟುವಟಿಕೆಗಳು ನಡೆಯುವಂತೆ ನೋಡಿಕೊಳ್ಳಬೇಕು ಎಂದು ಪಕ್ಷ ನಿರ್ಧರಿಸಿತು.

ಪೂರ್ಣಾವಧಿ ಕಾರ್ಯಕರ್ತರ ಸಂಖ್ಯೆಯನ್ನು ಹೆಚ್ಚಿಸಬೇಕು, ಕಾಲಕಾಲಕ್ಕೆ ಅವರ ಕಾರ್ಯವನ್ನು ಪರಿಶೀಲಿಸಬೇಕು, ಅವರಿಗೆ ಸಾಕಷ್ಟು ಸಂಬಳ ನೀಡುವ ಹಾಗೂ ಅವರ ವೈದ್ಯಕೀಯ ವೆಚ್ಚಗಳನ್ನು ಭರಿಸುವ ಮೂಲಕ ಅವರ ಕನಿಷ್ಠ ಅಗತ್ಯಗಳನ್ನು ಖಾತರಿಪಡಿಸಬೇಕೆಂದು ಮಹಾಧಿವೇಶನ ತೀರ್ಮಾನ ಮಾಡಿತು. ಪೂರ್ಣಾವಧಿ ಕಾರ್ಯಕರ್ತರ ಜತೆಯಲ್ಲೇ, ಆ ಕಾಲದ ವಿಶೇಷ ಲಕ್ಷಣವಾಗಿದ್ದ ದೊಡ್ಡ ಸಂಖ್ಯೆಯ ಪಕ್ಷದ ಸದಸ್ಯರು ನಿಷ್ಕ್ರಿಯರಾಗದಿರುವಂತೆ ಗಮನಿಸಬೇಕು ಎಂದು ಪಕ್ಷ ನಿರ್ಣಯ ಮಾಡಿತು. ಪಕ್ಷದ ಕಾರ್ಯಕರ್ತರಲ್ಲಿ ಅಖಿಲ ಭಾರತ ಮಟ್ಟದ ತಿಳುವಳಿಕೆಯನ್ನು ಹೆಚ್ಚಿಸುವ ಸಲುವಾಗಿ ಪಕ್ಷದ ಶಿಕ್ಷಣವನ್ನು ಉತ್ತಮಪಡಿಸಬೇಕು, ಜನಪ್ರಿಯ ಸಾಹಿತ್ಯವನ್ನು ಸಿದ್ಧಪಡಿಸಬೇಕು ಮತ್ತು ರಾಜಕೀಯ ಶಾಲೆಗಳನ್ನು ನಡೆಸಬೇಕು ಎಂದು ಯೋಜಿಸಿತು. ಪಕ್ಷವು ನಡೆಸುವ ಹೋರಾಟಗಳ ವಿಧಾನವನ್ನು ಉತ್ತಮಪಡಿಸಬೇಕೆಂದೂ ಹೇಳಿತು. ಪಕ್ಷವು ನಡೆಸುವ ಹಲವಾರು ಪತ್ರಿಕೆಗಳಲ್ಲಿನ ಲೇಖನಗಳು ಜೀವಂತವಾಗಿರದೆ ಪಾರಿಭಾಷಿಕ ಶಬ್ದಗಳ ಮೂಲಕ ಆಕರ್ಷಣೆ ಕಳೆದುಕೊಂಡಿರುತ್ತವೆ ಮತ್ತು ಅವುಗಳಲ್ಲಿ ಸಾಕಷ್ಟು ವಾಸ್ತವಾಂಶಗಳು ಇಲ್ಲದಿರುವುದು ವಿಷಾದಕರ ಎಂದು ಮಹಾಧಿವೇಶನ ಅಭಿಪ್ರಾಯಪಟ್ಟಿತು. ಪಕ್ಷವು ಅಂಗೀಕರಿಸಿರುವ ನಿರ್ಣಯಗಳು ಕೂಡ ಉದ್ದವಾಗಿದ್ದು ಕರಾರುವಾಕ್ಕಾಗಿರುವುದಿಲ್ಲ. 'ಒಂದು ಸಾಮೂಹಿಕ ಪಕ್ಷವಾಗಿ ಬೆಳೆಯುತ್ತಿರುವಾಗ ಸಮೂಹದ ತಿಳುವಳಿಕೆಗೆ ಅನುಗುಣವಾಗಿ ನಾವು ಮಾತನಾಡಬೇಕು ಮತ್ತು ಬರೆಯಲು ಸಾಧ್ಯವಾಗಬೇಕು.'

ಎಲ್ಲಾ ಮಟ್ಟಗಳಲ್ಲಿನ ನಾಯಕತ್ವದ ಕಾರ್ಯನಿರ್ವಹಣೆಯ ಬಗ್ಗೆ ಪಕ್ಷವು ಸ್ವವಿಮರ್ಶಾತ್ಮಕವಾಗಿ ಚಿಂತನೆ ನಡೆಸಿತು. ಚಳುವಳಿಯ ಅಗತ್ಯಗಳನ್ನು ಎದುರಿಸಲು ಮತ್ತು ಎಲ್ಲಾ ಹಂತಗಳಲ್ಲೂ ಸಮಿತಿಗಳ ಸರಿಯಾದ ಕಾರ್ಯನಿರ್ವಹಣೆಯನ್ನು ಖಾತರಿಪಡಿಸಲು ನಾಯಕತ್ವವು ಪರಿಪಕ್ವತೆ ಮತ್ತು ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಸಂಘಟನಾತ್ಮಕ ವರದಿಯು ಒತ್ತಿಹೇಳಿತು. ಸಭ್ಯತೆ, ಸಹನೆ, ಸ್ನೇಹಮಯ ನಡವಳಿಕೆ, ವಿಮರ್ಶೆಗೆ ಗಮನ ನೀಡುವುದು, ತೀರ್ಮಾನ ಮತ್ತು ಅನುಷ್ಠಾನದ ನಡುವಿನ ಹಾಗೂ ಮಾತು ಮತ್ತು ಆಚರಣೆಗಳ ನಡುವಿನ ಕರ್ತವ್ಯಚ್ಯುತಿಗಳನ್ನು ಕಡಿಮೆಮಾಡುವುದು, ವ್ಯಕ್ತಿವಾದದ ವಿರುದ್ಧ ಹೋರಾಡುವುದು, ಶಿಸ್ತನ್ನು ಬಲಪಡಿಸುವುದು ಇವುಗಳನ್ನು ಆದ್ಯತೆಯ ಕೆಲಸಗಳು ಎಂದು ಪಕ್ಷವು ಗುರುತಿಸಿತು. ಕೆಳಗಿನಿಂದ ಬರುವ ಟೀಕೆಗಳಿಗೆ ಮತ್ತು ಸಲಹೆಗಳಿಗೆ ಅಧಿಕಾರಿಶಾಹಿ ತಾತ್ಸಾರ ಮನೋಭಾವವು ಜತೆಯಲ್ಲೇ 'ರಂಗವಾದ, ಒಕ್ಕೂಟವಾದ ಮತ್ತು ಸ್ಥಳೀಯವಾದ' ಗಳಂತಹ ಪ್ರತ್ಯೇಕತಾವಾದಿ ಪ್ರವೃತ್ತಿಗಳು ಪಕ್ಷದೊಳಗಿನ ವಿಶಿಷ್ಟವಾದ ಲಕ್ಷಣವಾಗಿ ಪರಿಣಮಿಸಿದೆ ಎಂದು ಮಹಾಧಿವೇಶನವು ಗಮನಿಸಿತು. ಈ ಎಲ್ಲಾ ಪ್ರವೃತ್ತಿಗಳ ವಿರುದ್ಧ ಹೋರಾಡಬೇಕೆಂದು ಮಹಾಧಿವೇಶನವು ನಿರ್ಣಯ ಮಾಡಿತು. ಪ್ರಜಾಸತ್ತಾತ್ಮಕ ಕೇಂದ್ರವಾದ ಮತ್ತು ಶ್ರಮಿಕರ ಸರ್ವಾಧಿಕಾರ ಎಂಬ ತಾತ್ವಿಕ ವಿಚಾರಗಳ ಬಗ್ಗೆ ಪ್ರಶ್ನೆ ಮಾಡುವವರನ್ನು ಮಹಾಧಿವೇಶನವು ಟೀಕಿಸಿತು ಮತ್ತು ಅದು ಪರಿಷ್ಕರಣವಾದದ ಅಭಿವ್ಯಕ್ತಿಯಾಗಿದ್ದು ಅದರ ವಿರುದ್ಧವೂ ಹೋರಾಡಬೇಕಾದ ಅಗತ್ಯತೆಯ

ಪುಟ 14 ನೋಡಿ



ಶಾಹೀನ್‌ಬಾಗ್ ಮತ್ತು ಬಿಜೆಪಿ:

ಎ.ಎ.ಪಿ.ಯ ಸಂಪೂರ್ಣ ತಪ್ಪು ತಿಳುವಳಿಕೆ

ಜನರು ತಮ್ಮ ಸ್ವಂತ ಅನುಭವದಲ್ಲೇ ಒಂದು ಘೋಷಣೆಯಿಂದ ಆಕರ್ಷಿತರಾಗಿ ಸ್ವಯಂಪ್ರೇರಿತವಾಗಿಯೇ ಚಳುವಳಿಗೆ ಮುಂದಾಗುತ್ತಾರೆ, ಇದು ಅವರ ರಾಜಕೀಯ ಡಿಎನ್‌ಎಯಲ್ಲಿ ಅಚ್ಚಾಗಿರುತ್ತದೆ ಎನ್ನುವ ಸಾಮಾನ್ಯ ಚಳುವಳಿಯ ಪಾಠವನ್ನು ಸ್ವತಃ ಇಂತಹ ಒಂದು ಚಳುವಳಿಯಿಂದ ಬಂದವರೂ ಮರೆಯುತ್ತಿದ್ದಾರೆ. ಭ್ರಷ್ಟಾಚಾರ–ವಿರೋಧಿ ಆಂದೋಲನ ಮತ್ತು ಲೋಕಪಾಲ್ ಮಸೂದೆಯ ಘೋಷಣೆ ದೆಹಲಿಯ ಸಾವಿರಾರು ನಾಗರಿಕರನ್ನು ಮತ್ತು ಭಾರತದ ವಿವಿಧ ಭಾಗಗಳ ಜನರನ್ನು ರಾಮಲೀಲಾ ಮೈದಾನದಲ್ಲಿ ಅನಿರ್ದಿಷ್ಟ ಧರಣಿಗೆ ಕರೆತಂದಿತ್ತು ಎಂಬುದನ್ನು ಎ.ಎ.ಪಿ. ಮರೆಯಬಾರದು. ಭಾರದ್ವಾಜ್ ಅವರು ಶಾಹೀನ್‌ಬಾಗ್‌ನ ಬಗ್ಗೆ ಹೇಳಿದಂತೆ, ಆ ಸಮಯದಲ್ಲಿ ಶೀಲಾ ದೀಕ್ಷಿತ್ ಅವರ ನೇತೃತ್ವದ ದೆಹಲಿ ಸರಕಾರವನ್ನು ಅಸ್ಥಿರಗೊಳಿಸಲು ಲೋಕಪಾಲ್ ಚಳುವಳಿಯನ್ನೂ ಸಹ ಬಿಜೆಪಿಯೇ ಸೃಷ್ಟಿಸಿತ್ತು ಎಂದು ಹೇಳಬಹುದೇ? ಹೀಗೆ ಆರೋಪಿಸುವುದು ಅಸಂಬದ್ಧ, ಮತ್ತು ಜನಚಳುವಳಿಗೆ ಮತ್ತು ಎ.ಎ.ಪಿ ಜನನಕ್ಕೆ ಮಾಡುವ ಅವಮಾನ. ಅದೇ ರೀತಿಯಲ್ಲಿ ಶಾಹೀನ್‌ಬಾಗ್‌ನ ಪ್ರತಿಭಟನಾಕಾರರು ಬಿಜೆಪಿಯ ದಾಳಗಳು ಎಂದು ಆರೋಪಿಸುವುದು ಕೂಡ.

ಬೃಂದಾ ಕಾರಟ್ ಅನು: ಲವಿತ್ರ ವಿ.

ಒಂದು ಪ್ರತಿಭಟನೆಯನ್ನು ಕೀಳಾಗಿಸಲು ಮತ್ತು ರಾಕ್ಷಸೀಯವೆಂದು ಚಿತ್ರಿಸಲು ಅನೇಕ ಹಾದಿಗಳಿವೆ. ಆದರೆ ಶಾಹಿನ್‌ಬಾಗ್ ಪ್ರತಿಭಟನೆಗಳನ್ನು ಗುರಿಮಾಡಿರುವುದಂತೂ ಅಸಹ್ಯಕಾರಿಯಾಗಿದೆ. ಇಂತಹ ಇತ್ತೀಚಿನ ಸುತ್ತು ಎಂದರೆ, ಇತ್ತೀಚಿಗೆ ಆಮ್ ಆದ್ಮಿ ಪಕ್ಷ(ಎ.ಎ.ಪಿ.)ದ ಮುಖ್ಯ ವಕ್ತಾರ ಮತ್ತು ಶಾಸಕರಾದ ಸೌರಭ್ ಭರದ್ವಾಜ್ ಅವರ ಅನಿರೀಕ್ಷಿತ ಹೇಳಿಕೆ ಪ್ರತಿಭಟನೆಯ ನಾಯಕರು ಎಂದು ಹೇಳಿಕೊಳ್ಳುವ ಸ್ಥಳೀಯ ನಿವಾಸಿಗಳ ಒಂದು ಗುಂಪನ್ನು ಬಿಜೆಪಿಗೆ ಸೇರಿಸಿಕೊಂಡುದಕ್ಕೆ ಪ್ರತಿಕ್ರಿಯಿಸುತ್ತಾ, ಸಂಪೂರ್ಣ ಶಾಹೀನ್‌ಬಾಗ್ ಪ್ರತಿಭಟನೆಯು ದೆಹಲಿಯ ಚುನಾವಣಾ ಪ್ರಚಾರಕ್ಕೆ ಕೋಮುವಾದಿ ರೂಪ ಕೊಡಲು ಬಿಜೆಪಿಯವರಿಂದ ರೂಪಿಸಿದ ತಂತ್ರವಾಗಿದೆ ಎಂದು ಭಾರದ್ವಾಜ್ ಸಾರಿದ್ದಾರೆ. "ನಿಜ, ಅದು ಪ್ರಜಾಪ್ರಭುತ್ವಕ್ಕಾಗಿ ನಡೆಯುತ್ತಿರುವ ಪ್ರತಿಭಟನೆ ಎಂದು ನಂಬಿ ಪ್ರಜಾಪ್ರಭುತ್ವದ ಪರವಾಗಿರುವ ಅನೇಕರು ಪ್ರತಿಭಟನೆಯಲ್ಲಿ ಸೇರಿಕೊಂಡರು. ಆದರೆ ಅವರ ನಂಬಿಕೆಗೆ ದ್ರೋಹ ಬಗೆಯಲಾಯಿತು. ಏಕೆಂದರೆ ಆ ಪ್ರತಿಭಟನೆಯು ಬಿಜೆಪಿಯವರಿಂದ ಸೃಷ್ಟಿಯಾದದ್ದು ಎಂಬುದು ಈಗ ಸ್ಪಷ್ಟವಾಗಿದೆ" ಎಂದು ಪತ್ರಿಕಾ ಗೋಷ್ಠಿಯಲ್ಲಿ ಶಾಸಕ ಸೌರಭ ಭಾರದ್ವಾಜ ಹೇಳಿದ್ದಾರೆ. ಬಿಜೆಪಿಯದ್ದು ಬೂಟಾಟಿಕೆಯೆಂಬುದರಲ್ಲಿ ಸಂದೇಹವೇನಿಲ್ಲ. ಆದರೆ ಅದರ ಮೇಲೆ ಆಕ್ರಮಣ ಮಾಡಲು ಪ್ರಯತ್ನಿಸುವ ಭರದಲ್ಲಿ ಈತ ಶಾಹೀನಬಾಗ್‌ನ ವಿರುದ್ಧ ಬಿಜೆಪಿಯ ಜತೆ ನಿಂತಂತಾಗಿದೆ. ಈ ರೀತಿಯ ಹೇಳಿಕೆ ನೀಡುವ ಮೊದಲು, ಬಿಜೆಪಿಗೆ ಸೇರಿದ ಆ ಜನಗಳು ಯಾರು ಎಂದು ಆ ಪ್ರದೇಶದ ತಮ್ಮದೇ ಶಾಸಕ ಸಹಯೋಗಿಯಿಂದ ಸತ್ಯವನ್ನು ಕಂಡುಹಿಡಿಯಬೇಕಿತ್ತು. ಹಾಗೇನಾದರೂ ಮಾಡಿದ್ದರೆ ಅವರು ಈ ಮಂದಿ ಯಾವುದೇ ರೀತಿಯಲ್ಲಿ ಕಲ್ಪಿಸಿಕೊಂಡರೂ ಶಾಹೀನಬಾಗ್ ಪ್ರತಿಭಟನೆಯ "ನಾಯಕರು" ಆಗಿರಲಿಲ್ಲ ಮತ್ತು ಅಲ್ಲಿನ ನಿವಾಸಿಗಳು ದೃಢೀಕರಿಸಿದಂತೆ ಆ ಚಳುವಳಿಯ ಪರಿಧಿಯಲ್ಲಿಯೂ ಇರಲಿಲ್ಲ ಎಂಬುದು ಗೊತ್ತಾಗುತ್ತಿತ್ತು.

ಎ.ಎ.ಪಿ.ಯಲ್ಲಿರುವ ಸ್ವತಃ ಭಾರದ್ವಾಜ್ ಮತ್ತು ಸಹೋದ್ಯೋಗಿಗಳೆಲ್ಲರೂ ಒಂದು ಸಾಮೂಹಿಕ ಚಳುವಳಿಯ ರಾಜಕೀಯ ಉತ್ಪನ್ನಗಳು. ಆದರೂ, ಇವರೇ ಜನರು ತಮ್ಮ ಸ್ವಂತ ಅನುಭವದಲ್ಲೇ ಒಂದು ಘೋಷಣೆಯಿಂದ ಆಕರ್ಷಿತರಾಗಿ ಸ್ವಯಂಪ್ರೇರಿತವಾಗಿಯೇ ಚಳುವಳಿಗೆ ಮುಂದಾಗುತ್ತಾರೆ, ಇದು ಅವರ ರಾಜಕೀಯ ಡಿಎನ್‌ಎಯಲ್ಲಿ ಅಚ್ಚಾಗಿರುತ್ತದೆ ಎನ್ನುವ ಸಾಮಾನ್ಯ ಚಳುವಳಿಯ ಪಾಠವನ್ನು ಮರೆಯುತ್ತಿದ್ದಾರೆ. ಭ್ರಷ್ಟಾಚಾರ–ವಿರೋಧಿ ಆಂದೋಲನ ಮತ್ತು ಲೋಕಪಾಲ್ ಮಸೂದೆಯ ಘೋಷಣೆ ದೆಹಲಿಯ ಸಾವಿರಾರು ನಾಗರಿಕರನ್ನು ಮತ್ತು ಭಾರತದ ವಿವಿಧ ಭಾಗಗಳ ಜನರನ್ನು ರಾಮಲೀಲಾ ಮೈದಾನದಲ್ಲಿ ಅನಿರ್ದಿಷ್ಟ ಧರಣಿಗೆ ಕರೆತಂದಿತ್ತು ಎಂಬುದನ್ನು ಎ.ಎ.ಪಿ. ಮರೆಯಬಾರದು. ಕುಖ್ಯಾತ ಕಪಿಲ್ ಮಿಶ್ರ ಸೇರಿದಂತೆ ಬಿಜೆಪಿಯಲ್ಲಿದ್ದ ಹಲವರು ಎ.ಎ.ಪಿ. ಸೇರಿದರು ಮತ್ತು ಅವರಿಗೆ ಟಿಕೆಟ್ ಕೂಡ ನೀಡಲಾಯಿತು. ಭಾರದ್ವಾಜ್ ಅವರು ಶಾಹೀನ್‌ಬಾಗ್‌ನ ಬಗ್ಗೆ ಹೇಳಿದಂತೆ, ಆ ಸಮಯದಲ್ಲಿ ಶೀಲಾ ದೀಕ್ಷಿತ್ ಅವರ ನೇತೃತ್ವದ ದೆಹಲಿ ಸರಕಾರವನ್ನು ಅಸ್ಥಿರಗೊಳಿಸಲು ಲೋಕಪಾಲ್ ಚಳುವಳಿಯನ್ನೂ ಸಹ ಬಿಜೆಪಿಯೇ ಸೃಷ್ಟಿಸಿತ್ತು ಎಂದು ಹೇಳಬಹುದೇ? ಹೀಗೆ ಆರೋಪಿಸುವುದು ಅಸಂಬದ್ಧ, ಮತ್ತು ಜನಚಳುವಳಿಗೆ ಮತ್ತು ಎ.ಎ.ಪಿ ಜನನಕ್ಕೆ ಮಾಡುವ ಅವಮಾನ. ಅದೇ ರೀತಿಯಲ್ಲಿ ಶಾಹೀನ್‌ಬಾಗ್‌ನ ಪ್ರತಿಭಟನಾಕಾರರು ಬಿಜೆಪಿಯ ದಾಳಗಳು ಎಂದು ಆರೋಪಿಸುವುದು ಕೂಡ.

ಇಲ್ಲ, ಶಾಹಿನ್ ಬಾಗ್ ಖಂಡಿತವಾಗಿಯೂ ಬಿಜೆಪಿ ಸೃಷ್ಟಿಸಿದ್ದಲ್ಲ. ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ)ಯನ್ನು ಪಾಸು ಮಾಡಿಸಿಕೊಂಡದ್ದು ಮತ್ತು ಅದನ್ನನುಸರಿಸಿ ಸಿಎಎ, ಎನ್‌ಪಿಆರ್ ಮತ್ತು ಎನ್‌ಆರ್‌ಸಿ ಯ 'ಕ್ರೊನೋಲೊಜಿ" ಬಗ್ಗೆ ಅಮಿತ್ ಶಾ ಅವರ ಘೋಷಣೆಯಿಂದ ಒಂದಿಡೀ ಸಮುದಾಯದಲ್ಲಿ ಉಂಟಾದ ಒಂದು ಆಳವಾದ, ನ್ಯಾಯಸಮ್ಮತವಾದ ಮತ್ತು ವ್ಯಾಪಕ ಆತಂಕವನ್ನು ಈ ಪ್ರತಿಭಟನೆ ಬಿಂಬಿಸುತ್ತದೆ ಎಂಬುದು ಇದನ್ನು ದೂರದಿಂದಲಾದರೂ ನೋಡುತ್ತಿರುವ ಎಲ್ಲರಿಗೂ ಗೊತ್ತೇ ಇದೆ. ಶಾಹೀನ್‌ಬಾಗ್‌ನ ಧೈರ್ಯಶಾಲಿ ಮಹಿಳೆಯರು ತಮ್ಮ ಧರಣಿಯ ಮೂಲಕ ಲಕ್ಷಾಂತರ ಜನರ ಹೃದಯಗಳನ್ನು ಮಿಡಿದಿದ್ದಾರೆ. ಆದ್ದರಿಂದ ಜಾಮಿಯಾ ವಿಶ್ವವಿದ್ಯಾಲಯದಲ್ಲಿ ದಬ್ಬಾಳಿಕೆಯ ವಿರುದ್ಧ ಎಂದು ಆರಂಭವಾದ ಪ್ರತಿಭಟನೆ (ಈ ಪ್ರದೇಶದ ಅನೇಕ ಕುಟುಂಬಗಳು ಜಾಮೀಯಾದಲ್ಲಿ ಅಧ್ಯಯನ ಮಾಡುತ್ತಿರುವುದರಿಂದ), ದಶಕಗಳಲ್ಲಿ ಕಂಡಿರದಂತಹ ಅತೀ ದೊಡ್ಡ ಮಹಿಳಾ ನೇತೃತ್ವದ ನಿರಂತರ ಪ್ರತಿಭಟನೆಯಾಗಿ ಬೆಳೆಯಿತು, ಭಾರತದಾದ್ಯಂತ ಪ್ರತಿಧ್ವನಿಸಿತು. ಜನರು ಅದರಲ್ಲೂ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಕಾರಣ, ಭಾರತದ ನಾಗರಿಕರಾಗಿ ತಮ್ಮ ಅಸ್ತಿತ್ವವು ನೇರವಾಗಿ ಭಾರತದ ಸಂವಿಧಾನದೊಂದಿಗೆ ತಳುಕು ಹಾಕಿಕೊಂಡಿದೆ ಎಂಬುದರ ಆಳವಾದ ಪರಿಜ್ಞಾನ ಅವರಲ್ಲಿ ಮೂಡಿತ್ತು. ಎಲ್ಲಾ ಕಡೆ ರಾಷ್ಟ್ರಧ್ವಜವನ್ನು ಹಾರಿಸಲಾಯಿತು, ಯುವ ಸಮುದಾಯದಿಂದ ಸಂವಿಧಾನದ ಓದು ಶುರುವಾಯಿತು ಮತ್ತು ಸಂವಿಧಾನದ ಕುರಿತು ನಡೆಯುವ ಸಭೆಗಳನ್ನು ಜನರು ಗಮನವಿಟ್ಟು ಆಲಿಸಿದರು. ಸ್ವತಂತ್ರ ಭಾರತದಲ್ಲಿನ ಚಳುವಳಿಗಳ ಏರಿಳಿತಗಳಲ್ಲಿನ ಒಂದು ಮಹತ್ವದ ಕ್ಷಣವೆಂದರೆ "ಜಾತ್ಯತೀತತೆ", "ಪ್ರಜಾಪ್ರಭುತ್ವ", "ಸಮಾನ ಪೌರತ್ವ ಹಕ್ಕುಗಳು" ಎಂಬ ಪದಗಳು ಪ್ರತಿದಿನ ಮಾಡುವ ಅಸಂಖ್ಯಾತ ಭಾಷಣಗಳಲ್ಲಿ ಪುನರಾವರ್ತನೆಗೊಳ್ಳುತ್ತಿದ್ದುದು. ಶಾಹಿನ್‌ಬಾಗ್ ಪ್ರತಿಭಟನೆಯಿಂದ ಪ್ರೇರೇಪಿತಗೊಂಡು ದೇಶಾದ್ಯಂತ ನೂರಕ್ಕೂ ಹೆಚ್ಚು ಇದೇ ಮಾದರಿಯ ಮಹಿಳಾ ನೇತೃತ್ವದ ಪ್ರತಿಭಟನೆಗಳು ನಡೆದವು.


ಪ್ರತಿಭಟನೆಯ ಮತ್ತೊಂದು ಪ್ರಮುಖ ಲಕ್ಷಣವೆಂದರೆ, ಸಮುದಾಯದ ಮೂಲಭೂತವಾದಿ ಶಕ್ತಿಗಳು ಈ ಸಮಸ್ಯೆಯ ದಾರಿ ತಪ್ಪಿಸಿ ಹಿಂದೂ ಮುಸ್ಲಿಂ ವಿರೋಧಿ ಭಾವವನ್ನು ಬಿತ್ತಲು ಪ್ರಯತ್ನಿಸಿದರೂ ಶಾಹಿನ್ ಬಾಗ್ ಮತ್ತು ಇತರ ಚಳುವಳಿಗಳ ಸ್ಥಳದಲ್ಲಿನ ಮಹಿಳೆಯರು ಕೋಮು ವಿಭಜಕ ಭಾಷಣಗಳನ್ನು ಮಾಡಲು ತಮ್ಮ ವೇದಿಕೆಗಳಲ್ಲಿ ಎಂದಿಗೂ ಅನುಮತಿ ನೀಡಲಿಲ್ಲ. ಮತ್ತೊಂದು ಪ್ರತಿಭಟನಾ ಸ್ಥಳದಲ್ಲಿ, ಭಾಷಣಕಾರರೊಬ್ಬರು "ಸಮುದಾಯವನ್ನು ಸಜ್ಜುಗೊಳಿಸುವ" ಕುರಿತು ಮಾತನಾಡುವಾಗ ಅಲ್ಲಿನ ಮಹಿಳೆಯರು ಆಕ್ಷೇಪ ವ್ಯಕ್ತಪಡಿಸಿದ್ದಕ್ಕೆ ನಾನೇ ಸಾಕ್ಷಿಯಾಗಿದ್ದೆ. ಆಕ್ಷೇಪಿಸಿದ ಮಹಿಳೆ "ಇದು ಕೇವಲ ಒಂದು ಸಮುದಾಯಕ್ಕೆ ಮಾತ್ರವಲ್ಲ, ಎಲ್ಲಾ ಭಾರತೀಯರಿಗಾಗಿ ಇರುವುದು" ಎಂದು ಪ್ರತಿಕ್ರಿಯಿಸಿದ್ದರು. ಭಾರತದ ಸ್ವಾತಂತ್ರ್ಯದ ನಂತರ, ಸಮುದಾಯಗಳ ಒಳಗಿನ ಮೂಲಭೂತವಾದಿ ಶಕ್ತಿಗಳು ಮಹಿಳೆಯರನ್ನ ಧರ್ಮದ ಹೆಸರಿನಲ್ಲಿ ವಿಭಜನೆ ಮಾಡುವುದಕ್ಕೆ ನಾವು ಸಾಕ್ಷಿಯಾಗಿದ್ದೇವೆ. ರಾಜಕೀಯ ಯಶಸ್ಸಿನ ಏಣಿಯನ್ನು ಏರಲು ಹಿಂದುತ್ವ ಬಲಪಂಥೀಯ ಮಹಿಳೆಯರು ಕೋಮು ದ್ವೇಷವನ್ನು ಹುಟ್ಟು ಹಾಕಲು, ಹೆಚ್ಚಿಸಲು ಮುಂದಾಗಿದ್ದನ್ನು ನಾವು ನೋಡಿದ್ದೇವೆ. ಇವರ ಪಡಿಯಚ್ಚಿನಂತೆ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳ ಮಹಿಳೆಯರೂ ಸಹ ದ್ವೇಷದ ಭಾಷೆ ಮಾತಾಡುತ್ತಿರುವುದನ್ನು ನೋಡಿದ್ದೇವೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಶಾಹಿನ್‌ಭಾಗ್ ಪ್ರತಿಭಟನೆಯು ಮುಸ್ಲಿಂ ಮಹಿಳೆಯರ ನೇತೃತ್ವದಲ್ಲಿನ ಜಾತ್ಯಾತೀತ, ಪ್ರಜಾಸತ್ತಾತ್ಮಕ ಮತ್ತು ಶಾಂತಿಯುತವಾಗಿ ನಡೆದ ಅಖಿಲ ಭಾರತ ಪ್ರತಿಭಟನೆಯಾಗಿದೆ.

ನಾನು ನನ್ನ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸಹಯೋಗಿಗಳೊಂದಿಗೆ ಅನೇಕ ಸಂದರ್ಭಗಳಲ್ಲಿ ನಮ್ಮ ಸೌಹಾರ್ದವನ್ನು ವ್ಯಕ್ತಪಡಿಸಲು ಶಾಹಿನ್‌ಬಾಗ್‌ಗೆ ಹೋಗಿದ್ದೇವೆ. ಇಂತಹ ಮೊದಲ ಭೇಟಿ ಧರಣಿ ಆರಂಭದ ಮೊದಲ ದಿನಗಳಲ್ಲೇ ನಡೆದಿತ್ತು. ನಾವು, ಈ ಸ್ಥಳದ ಸಾಮಾನ್ಯ ಮಹಿಳೆಯರು ಆತ್ಮವಿಶ್ವಾಸದಿಂದ ಸಂಘಟನೆಯ ಕೇಂದ್ರಕ್ಕೆ ಬಂದ ಪರಿವರ್ತನೆಯನ್ನು ನೋಡಿದ್ದೇವೆ. ಇಂತಹ ಬದಲಾವಣೆಯನ್ನು ವಿವಿಧ ರಾಜಕೀಯ ಬಣ್ಣಗಳ ಅನೇಕರಿಗೆ ನಂಬಲು ಕಷ್ಟವಾಗುತ್ತಿದೆ. ಬಿಜೆಪಿ ಮೊದಲಿಂದಲೂ ಈ ಮಹಿಳೆಯರು ಪುರುಷರ ಕೈಗೊಂಬೆಗಳಾಗಿದ್ದಾರೆ ಎಂಬ ಸಿದ್ಧಾಂತವನ್ನು ಬಿಜೆಪಿ ಮೊದಲಿನಿಂದಲೂ ಹರಡುತ್ತಲೇ ಬಂದಿದೆ. ಇತ್ತೀಚೆಗೆ ನ್ಯಾಯಾಲಯದ ವಿಚಾರಣೆಯಲ್ಲಿ ಸಿಎಎ ವಿರೋಧಿ ಪ್ರತಿಭಟನೆಯಲ್ಲಿನ ಮಹಿಳೆಯರ ಸ್ಥಿತಿ ಹೇಗಿದೆ ಎಂದರೆ " ಪ್ಯಾಲೆಸ್ಟೈನ್‌ನಲ್ಲಿ ಇದ್ದಂತೆ, ಮಹಿಳೆಯರು ಮತ್ತು ಮಕ್ಕಳನ್ನು ಪುರುಷರು ತಮ್ಮ ಮುಂದೆ ನಿಲ್ಲಿಸಿದಂತೆ ಇದೆ" ಎಂಬ ಇಂತಹದೇ ಅತಿರೇಕದ, ಅಜ್ಞಾನದ ಮಾತುಗಳನ್ನು ಹೇಳುತ್ತ ಸಂಘ ಪರಿವಾರದ ಅರ್ಜಿದಾರರೊಬ್ಬರು ವಾದಿಸುವುದನ್ನು ಕೇಳಿ ಆಶ್ಚರ್ಯವಾಯಿತು. ಈ ಸಂದರ್ಭದಲ್ಲಿ ಅವರು ನ್ಯಾಯಾಲಯದಿಂದ ತೀವ್ರ ಗದರಿಕೆಯನ್ನು ಎದುರಿಸಬೇಕಾಯಿತು. ಆದರೆ ಮಹಿಳೆಯರಿಗೆ ಒಂದು ಸ್ವತಂತ್ರ ಅಸ್ತಿತ್ವ ಇದೆ ಎಂದು ಗುರುತಿಸಲು ಸಾಧ್ಯವಾಗದಿರುವುದು ಪಿತೃಪ್ರಧಾನ ವ್ಯವಸ್ಥೆಗೆ ತಟ್ಟಿರುವ ಶಾಪವಾಗಿದೆ. ಇಂತಹ ಸಂಕುಚಿತ ಚಿಂತನೆಯನ್ನು ಎ.ಎ.ಪಿ. ವಕ್ತಾರರು ಪ್ರತಿಧ್ವನಿಸಿದ್ದು ದುರದೃಷ್ಟಕರ.


ಶಾಹೀನ್‌ಬಾಗ್‌ಕ್ಕಿಂತ ಬಹಳ ಮುಂಚೆಯೇ ದೆಹಲಿಯನ್ನು ಧ್ರುವೀಕರಿಸಲು ಬಿಜೆಪಿ ಪ್ರಯತ್ನಿಸಿತ್ತು. ಮಹಿಳೆಯರು ಮತ್ತು ಶಾಹೀನ್‌ಬಾಗ್‌ನ ನಿವಾಸಿಗಳು ಸೇರಿದಂತೆ ದೆಹಲಿಯ ಜನರು ಬಿಜೆಪಿಯನ್ನು ಹಿಮ್ಮೆಟ್ಟಿಸಿದರು. ಇವತ್ತು ಸಿಎಎ ವಿರೋಧಿ ಪ್ರತಿಭಟನೆಗಳನ್ನು ಈಶಾನ್ಯ ದೆಹಲಿಯಲ್ಲಿನ ಕೋಮು ಹಿಂಸಾಚಾರದೊಂದಿಗೆ ಜೋಡಿಸಲು ದೆಹಲಿ ಪೋಲಿಸರು ಘಟನೆಗಳ ಸಮಾಲೆಯನ್ನು ಉತ್ಪಾದಿಸುತ್ತಿದ್ದಾರೆ. ಶಾಹೀನ್‌ಬಾಗ್ ಪ್ರತಿಭಟನೆಯ ಮುಖವಾಯಿತು. ಯಾವುದೋ ಕಾರಣಕ್ಕಾಗಿ ತಮ್ಮನ್ನು ಸೇರಿಕೊಂಡವರನ್ನು ತಮ್ಮ ಸುಳ್ಳು ಕಥನಗಳಲ್ಲಿ ಸಾಕ್ಷಿಗಳಾಗಿ ಬಳಸುವುದು ಬಿಜೆಪಿಯವರಿಗೆ ಸಾಧ್ಯವಾಗದ ಸಂಗತಿಯೇನೂ ಅಲ್ಲ. ಅದೇನೆ ಇರಲಿ, ಭಾರದ್ವಾಜ ಶಾಹೀನ್‌ಬಾಗ್ ಮಹಿಳೆಯರ ಬಗ್ಗೆ ನೀಡಿರುವ ಹೇಳಿಕೆಗಾಗಿ ಅವರಿಗೆ ವಿಷಾದ ವ್ಯಕ್ತಪಡಿಸಬೇಕು. ಬಿಜೆಪಿಯ ಕೋಮುವಾದಿ ಇಬ್ಬಂದಿತನಕ್ಕೆ ಬೇರೆ ಸಾಕಷ್ಟು ಪುರಾವೆಗಳಿವೆ. ಅದಕ್ಕಾಗಿ ಶಾಹೀನ್‌ಬಾಗ್ ಪ್ರತಿಭಟನೆಯ ಮೇಲೆ ಗುರಿಯಿಡಬೇಕಾಗಿಯೇನೂ ಇಲ್ಲ.

ಪ್ರಿಯ ಎ.ಎ.ಪಿ.,

ಇಲ್ಲ, ಶಾಹಿನ್ ಬಾಗ್ ಖಂಡಿತವಾಗಿಯೂ ಬಿಜೆಪಿ ಸೃಷ್ಟಿಸಿದ್ದಲ್ಲ. ಭಾರದ್ವಾಜ ಶಾಹೀನ್‌ಬಾಗ್ ಮಹಿಳೆಯರ ಬಗ್ಗೆ ನೀಡಿರುವ ಹೇಳಿಕೆಗೆ ಅವರಿಗೆ ವಿಷಾದ ವ್ಯಕ್ತಪಡಿಸಬೇಕು. ಬಿಜೆಪಿಯ ಕೋಮುವಾದಿ ಇಬ್ಬಂದಿತನಕ್ಕೆ ಬೇರೆ ಸಾಕಷ್ಟು ಪುರಾವೆಗಳಿವೆ. ಅದಕ್ಕಾಗಿ ಶಾಹೀನ್‌ಬಾಗ್ ಪ್ರತಿಭಟನೆಯ ಮೇಲೆ ಗುರಿಯಿಡಬೇಕಾಗಿಯೇನೂ ಇಲ್ಲ.



ಹಿಂದೂ ರಾಷ್ಟ್ರವು ಹಿಂದೂಗಳ ಹಿತ ಕಾಯುತ್ತದೆ ಎಂಬುದು ತಪ್ಪು ಕಲ್ಪನೆ



ಹಿಂದೂರಾಷ್ಟ್ರವು, ವಾಸ್ತವವಾಗಿ ಹಿಂದೂಗಳನ್ನು ಮತ್ತು ಮುಸ್ಲಿಮರನ್ನು ಸಮಾನವಾಗಿ ದಮನ ಮಾಡುವ ಒಂದು ನಿರಂಕುಶ ಪ್ರಭುತ್ವವಾಗುತ್ತದೆ. ಈಗಾಗಲೇ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ದೇಶೀಯ ಕಾರ್ಪೊರೇಟ್–ಹಣಕಾಸು ಬಂಡವಾಳ, ಈ ಗುಂಪುಗಳು ಹಿಂದೂಗಳನ್ನು ಮತ್ತು ಮುಸ್ಲಿಮರನ್ನು ಅಭೂತಪೂರ್ವ ಮಟ್ಟದಲ್ಲಿ ಶೋಷಣೆಗೆ ಒಳಪಡಿಸಿವೆ ಎಂಬುದನನು ನೋಡುತ್ತಿದ್ದೇವೆ. ಹಿಂದೂ ರಾಷ್ಟ್ರವು ಇಂತಹ ಶೋಷಣೆಗೆ ಅನುವು ಮಾಡಿಕೊಡುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಹಿಂದೂ ರಾಷ್ಟ್ರವು ಹಿಂದೂಗಳ ಪ್ರಭುತ್ವವಾಗುವುದಿಲ್ಲ. ಅದು ಏಕಸ್ವಾಮ್ಯ ಬಂಡವಾಳದ ಪ್ರಭುತ್ವವಾಗುತ್ತದೆ. ಹಿಂದುಗಳ ಪರಿಸ್ಥಿತಿಯು ಹಿಂದೆ ಇದ್ದುದಕ್ಕಿಂತ ಯಾವ ರೀತಿಯಲ್ಲಿಯೂ ಉತ್ತಮವಾಗುವುದಿಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಹಿಂದೂ ಪಾರಮ್ಯದ ಭಾವನೆಯನ್ನು ವ್ಯೈ ಮನಗಳಲ್ಲಿ ತುಂಬಿಕೊಂಡಿರುವ ಒಂದು ರಾಜಕೀಯ ಪಕ್ಷವೆಂದರೆ ಭಾರತೀಯ ಜನತಾ ಪಕ್ಷ (ಬಿಜೆಪಿ) ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಬಿಜೆಪಿಯು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ರಾಜಕೀಯ ವೇದಿಕೆ. ಹಿಂದೂ ರಾಷ್ಟ್ರದ ಸ್ಥಾಪನೆಯೇ ತನ್ನ ಪರಮ ಗುರಿ ಎಂದು ಹೇಳಿಕೊಳ್ಳುವ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಒಂದು ಫ್ಯಾಸಿಸ್ಟ್ ತೆರನ ಸಂಘಟನೆ. ಸಂವಿಧಾನದ ಚೌಕಟ್ಟಿನೊಳಗೇ ಕಾರ್ಯನಿರ್ವಹಿಸಬೇಕಾದ ಅನಿವಾರ್ಯತೆಯಿಂದಾಗಿ ಬಿಜೆಪಿಯ ತನ್ನ ಮಾತೃ ಸಂಸ್ಥೆ ಆರ್‌ಎಸ್‌ಎಸ್ ಹೊಂದಿರುವ ಹಿಂದೂ ರಾಷ್ಟ್ರ ಸ್ಥಾಪನೆಯ ಆಶಯವನ್ನು ಬಹಿರಂಗವಾಗಿ ಘೋಷಿಸಲು ಸಾಧ್ಯವಿಲ್ಲವಾದರೂ, ಆ ಆಶಯವನ್ನು ಕಾರ್ಯತಃ ಅನುಷ್ಠಾನಗೊಳಿಸುವಲ್ಲಿ ವಿಶ್ವ ಪ್ರಯತ್ನ ಮಾಡುತ್ತಿದೆ. ಆದ್ದರಿಂದ, ಈ ಹಿಂದೂರಾಷ್ಟ್ರ ಎಂಬುದರ ಅರ್ಥ–ವ್ಯಾಪ್ತಿ ಏನು ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ನಿಖರವಾಗಿ ಹೇಳುವುದಾದರೆ, ಭಾರತ ಸಂವಿಧಾನದ ಮೂಲ ಆಶಯಗಳಲ್ಲೊಂದಾದ ಮತ–ಧರ್ಮ ನಿರಪೇಕ್ಷತೆಯನ್ನು (ಜಾತ್ಯತೀತತೆಯನ್ನು) ಬುಡಮೇಲು ಮಾಡುವ, ಅಥವಾ ಇನ್ನೂ ಹೆಚ್ಚು ಸ್ಪಷ್ಟವಾಗಿ ಹೇಳುವುದಾದರೆ, ಮುಸ್ಲಿಂ ಅಲ್ಪಸಂಖ್ಯಾತರ ಸ್ಥಾನಮಾನಗಳನ್ನು ಎರಡನೇ ದರ್ಜೆಯ ನಾಗರಿಕರ ಮಟ್ಟಕ್ಕೆ ಇಳಿಸುವುದೇ ಹಿಂದೂ ರಾಷ್ಟ್ರದ ಪ್ರತಿಪಾದನೆಯ ತಿರುಳು ಎನ್ನಬಹುದು. ಜನಸಂಖ್ಯೆಯ ಶೇ. 80ಕ್ಕಿಂತಲೂ ಅಧಿಕ ಮಂದಿ ಹಿಂದೂಗಳೇ ಇರುವ ದೇಶದಲ್ಲಿ ಒಂದು ಹಿಂದೂರಾಷ್ಟ್ರವು ಸ್ಥಾಪನೆಯಾದರೆ ಇಡೀ ಹಿಂದೂ ಸಮುದಾಯದ ಅಭ್ಯುದಯವಾಗಲಿದೆ ಎಂಬುದಾಗಿ ಹಲವರು ಅಕ್ಷರಶಃ ಅರ್ಥೈಸಿಕೊಂಡು ಅದನ್ನು ನಂಬುತ್ತಾರೆ.

ಆದರೆ ಮೂಲಭೂತವಾಗಿ ಇದೊಂದು ತಪ್ಪು ಕಲ್ಪನೆ. ಈ ಕಲ್ಪನೆಯ ಹಿಂದೂರಾಷ್ಟ್ರವು, ವಾಸ್ತವವಾಗಿ ಮತ್ತು ಅಗತ್ಯವಾಗಿ, ಹಿಂದೂಗಳನ್ನು ಮತ್ತು ಮುಸ್ಲಿಮರನ್ನು ಸಮಾನವಾಗಿ ದಮನ ಮಾಡುವ ಒಂದು ನಿರಂಕುಶ ಪ್ರಭುತ್ವವಾಗುತ್ತದೆ. ಈ ನಿರಂಕುಶ ಪ್ರಭುತ್ವವು, ಹಿಂದೂಗಳ ಮತ್ತು ಮುಸ್ಲಿಮರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಿತ್ತುಕೊಳ್ಳುತ್ತದೆ. ಭಾರತದ ಒಕ್ಕೂಟ ವ್ಯವಸ್ಥೆಯನ್ನು ನಾಶಪಡಿಸುತ್ತದೆ. ಬಹುತೇಕ ಹಿಂದೂಗಳನ್ನು ಯಾವ ರೀತಿಯಲ್ಲಿಯೂ ಮುಸ್ಲಿಮರಿಗಿಂತ ಕಡಿಮೆ ಇಲ್ಲ ಎನ್ನುವ ಮಟ್ಟದಲ್ಲಿ ತುಳಿಯುತ್ತದೆ. ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ದೇಶೀಯ ಕಾರ್ಪೊರೇಟ್–ಹಣಕಾಸು ಬಂಡವಾಳ, ಈ ಗುಂಪುಗಳು ಹಿಂದೂಗಳನ್ನು ಮತ್ತು ಮುಸ್ಲಿಮರನ್ನು ಅಭೂತಪೂರ್ವ ಮಟ್ಟದಲ್ಲಿ ಶೋಷಣೆಗೆ ಒಳಪಡಿಸಿವೆ. ಹಿಂದೂ ರಾಷ್ಟ್ರವು ಇಂತಹ ಶೋಷಣೆಗೆ ಅನುವು ಮಾಡಿಕೊಡುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಹಿಂದೂ ರಾಷ್ಟ್ರವು ಹಿಂದೂಗಳ ಪ್ರಭುತ್ವವಾಗುವುದಿಲ್ಲ. ಅದು ಏಕಸ್ವಾಮ್ಯ ಬಂಡವಾಳದ ಪ್ರಭುತ್ವವಾಗುತ್ತದೆ. ಹಿಂದುಗಳ ಪರಿಸ್ಥಿತಿಯು ಹಿಂದೆ ಇದ್ದುದಕ್ಕಿಂತ ಯಾವ ರೀತಿಯಲ್ಲಿಯೂ ಉತ್ತಮವಾಗುವುದಿಲ್ಲ. ಬದಲಾಗಿ, ಅಪರಿಮಿತವಾಗಿ ಕೆಟ್ಟದಾಗುತ್ತದೆ. ಮುಸ್ಲಿಮರ ಪರಿಸ್ಥಿತಿಯೂ ಸಹ ಅಷ್ಟೇ ಹೀನಾಯವಾಗುತ್ತದೆ. ಏಕೆಂದರೆ, ಏಕಸ್ವಾಮ್ಯ ಬಂಡವಾಳದ ಶೋಷಣೆಗೆ ಮುಕ್ತ ಅವಕಾಶ ದೊರೆಯುತ್ತದೆ.

ಆಧುನಿಕ ಶ್ರವಣ ಕುಮಾರ
ಕಾರ್ಟೂನ್ ಕೃಪೆ:
ಇಂಡಿಯನ್
ಕಾರ್ಟೂನ್ ಗ್ಯಾಲರಿ



ಬಹಳ ಕಾಲದಿಂದಲೂ ಏಕಸ್ವಾಮ್ಯ ಬಂಡವಾಳವು ಏರು ಗತಿಯಲ್ಲೇ ಇದೆ. ಹಾಗಾಗಿ, ಹಿಂದೂಗಳ ಪಾರಮ್ಯವನ್ನು ಹೊಗಳಿ ಚುನಾವಣಾ ಬೆಂಬಲ ಪಡೆಯುವ ಮತ್ತು ಸಮಾಜದ ಮೇಲೆ ಹಾಗೂ ರಾಜಕೀಯ ವ್ಯವಸ್ಥೆಯ ಮೇಲೆ ಏಕಸ್ವಾಮ್ಯ ಬಂಡವಾಳವು ತನ್ನ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸುವ ಅಗತ್ಯವೇನಿದೆ ಎಂದು ವಾದಿಸಬಹುದು. ಇಂತಹ ಅಗತ್ಯ ಮತ್ತು ಕಾರಣ ಯಾವುದು ಎಂಬುದನ್ನು ಜಾಗತಿಕ ಬಂಡವಾಳಶಾಹಿಯ ಬಿಕ್ಕಟ್ಟು ಇತ್ತೀಚೆಗೆ ಭಾರತದ ಅರ್ಥ ವ್ಯವಸ್ಥೆಯನ್ನು ತಟ್ಟುತ್ತಿರುವ ತೀವ್ರತೆಯಲ್ಲಿ ಕಾಣಬಹುದು. ಹಿಂದೆ ಏಕಸ್ವಾಮ್ಯ ಬಂಡವಾಳವು ಅವಲಂಬಿಸುತ್ತಿದ್ದ ಕೆಲವು ಹಳೆಯ ಆಧಾರಗಳು ಈಗ ಕೆಲಸಕ್ಕೆ ಬಾರದಂತಾಗಿವೆ. ಬಹಳ ಹಿಂದೆಯೇ ಜನರಿಗೆ ನೀಡಲಾಗಿದ್ದ ಹನಿ ಹನಿಯಾಗಿ ಮೇಲಿಂದ ತೊಟ್ಟಿಕ್ಕುವ ಆರ್ಥಿಕ ಅಭಿವೃದ್ಧಿಯ ಭರವಸೆ ಹುಸಿಯಾಗಿದೆ. 11ನೇ ಪಂಚವಾರ್ಷಿಕ ಯೋಜನಾ ದಾಖಲೆಯಲ್ಲಿ, ಬೃಹತ್ತಾಗಿ ಬೆಳೆಯುತ್ತಿರುವ ಜಿಡಿಪಿಯಿಂದ ಸರ್ಕಾರವು ಹೆಚ್ಚಿನ ತೆರಿಗೆಯನ್ನು ಸಂಗ್ರಹಿಸಿಕೊಳ್ಳುತ್ತದೆ ಮತ್ತು ಅದನ್ನು ಬಡವರಿಗಾಗಿ ಖರ್ಚು ಮಾಡುತ್ತದೆ ಎನ್ನುವ ರೀತಿಯಲ್ಲಿ ತೋರಿಸಲಾಗಿದ್ದ ಆಸೆಯು ಅರ್ಥಹೀನವಾಗಿ ಪರಿಣಮಿಸಿದೆ. ತದನಂತರ, ಆದಾಯ ಮತ್ತು ಸಂಪತ್ತಿನ ಅಸಮಾನತೆಯು ಅಗಾಧವಾಗಿ ಬೆಳೆದಿದೆ. ಕೊರೊನಾ ಹರಡುವ ಮೊದಲೇ, ಬಿಕ್ಕಟ್ಟಿನ ಪರಿಣಾಮವಾಗಿ ನಿರುದ್ಯೋಗವು ಕಳೆದ ಐದು ದಶಕಗಳಲ್ಲಿ ಎಂದೂ ಕಾಣದ ಮಟ್ಟಕ್ಕೆ ಏರಿತ್ತು. ಗ್ರಾಮೀಣ ಭಾರತದಲ್ಲಿ ಜನರ ಸಂಕಷ್ಟಗಳು ಅದೆಷ್ಟು ತೀವ್ರವಾಗಿದ್ದವು ಎಂದರೆ, ಕೇಂದ್ರ ಸರ್ಕಾರವು ಎನ್ ಎಸ್ ಎಸ್ (ರಾಷ್ಟ್ರೀಯ ಮಾದರಿ ಸಮೀಕ್ಷೆ) ದತ್ತಾಂಶಗಳನ್ನು ಕುಟಿಲ ತಂತ್ರೋಪಾಯಗಳ ಮೂಲಕ ಪ್ರಕಟಪಡಿಸದಂತೆ ತಡೆಹಿಡಿದಿತ್ತು. ಈ ದತ್ತಾಂಶಗಳ ಪ್ರಕಾರ, 2011–12 ಮತ್ತು 2017–18ರ ನಡುವೆ ಗ್ರಾಮೀಣ ಭಾರತದಲ್ಲಿ ಬಳಕೆದಾರರ ತಲಾವಾರು ವೆಚ್ಚವು ಶೇ.9ರಷ್ಟು ಕುಸಿತವಾಗಿತ್ತು! ದೇಶದ ಜನರನ್ನು ಆರ್ಥಿಕವಾಗಿ ಇತ್ತೀಚೆಗೆ ಹಿಂಡಿದಷ್ಟು ತೀಕ್ಷ್ಣ ಪ್ರಮಾಣದಲ್ಲಿ, ಕೊರೊನಾ ಉಂಟುಮಾಡಿದ ಆರ್ಥಿಕ ಹಾವಳಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿದ್ದರೂ ಸಹ, ಯಾವತ್ತೂ ಹಿಂಡಿರಲಿಲ್ಲ. ಕೊರೊನಾ ಹಾವಳಿ ಆರಂಭವಾದ ನಂತರವಂತೂ ಸಂಕಷ್ಟಗಳು ದಿನೇ ದಿನೇ ಹೆಚ್ಚುತ್ತಿರುವುದನ್ನು ಹೇಳತೀರದು.

ಅಷ್ಟು ಮಾತ್ರವೇ ಅಲ್ಲ. ನವ ಉದಾರ ಅರ್ಥವ್ಯವಸ್ಥೆಯನ್ನು ಆವರಿಸಿರುವ ಬಿಕ್ಕಟ್ಟಿಗೆ ಯಾವುದೇ ಪರಿಹಾರವಿಲ್ಲ. ಈ ಸತ್ಯವನ್ನು ಹಣಕಾಸು ಬಂಡವಾಳವು ಒಪ್ಪಿಕೊಳ್ಳುವುದೇ ಇಲ್ಲ ಎಂಬುದು ಬೇರೆ ಮಾತು. ನವ ಉದಾರವಾದ ಆಳ್ವಿಕೆಯು ಸೃಷ್ಟಿಸಿದ ಈ ಬಿಕ್ಕಟ್ಟಿಗೆ ಅದು ಸೂಚಿಸುವ ಪರಿಹಾರವೆಂದರೆ, ನವ ಉದಾರೀಕರಣವನ್ನು ಇನ್ನೂ ಹೆಚ್ಚು ತೀವ್ರಗೊಳಿಸುವುದು. ಈ ಕಾರ್ಯಸಾಧನೆಗಾಗಿ, ಕಾರ್ಮಿಕ ಸಂಘಟನೆಗಳ ಸೊಲ್ಲಡಗಿಸಬೇಕು, ಬುಡಕಟ್ಟು ಜನರ ಭೂಮಿಯನ್ನು ಇನ್ನಷ್ಟು ಸಲೀಸಾಗಿ ಕಸಿದುಕೊಳ್ಳಬೇಕು, ಸಾರ್ವಜನಿಕ ವಲಯದ ಆಸ್ತಿಗಳನ್ನು ಇನ್ನೂ ದೊಡ್ಡ ಮಟ್ಟದಲ್ಲಿ ಖಾಸಗೀಕರಣಗೊಳಿಸಬೇಕು ಮತ್ತು ಸರ್ಕಾರದಿಂದ ಬಂಡವಾಳಶಾಹಿಗಳಿಗೆ ಒದಗಿಸುವ ಹಣಕಾಸಿನ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬೇಕು ಎಂಬುದಾಗಿ ಎಂದು ನವ ಉದಾರವಾದವು ವಕೀಲಿ ಮಾಡುತ್ತದೆ. ಈ ಎಲ್ಲಾ ಕ್ರಮಗಳನ್ನು ನರೇಂದ್ರ ಮೋದಿ ಸರಕಾರವು ಚಾಚೂ ತಪ್ಪದೆ ಮತ್ತು ಶ್ರದ್ಧಾಪೂರ್ವಕವಾಗಿ ಅನುಷ್ಠಾನಗೊಳಿಸುತ್ತಿದೆ.

ನವ ಉದಾರವಾದವು ಆಜ್ಞಾಪಿಸುವ ಇಂತಹ ಕ್ರಮಗಳನ್ನು ಜಾರಿಗೊಳಿಸಲು ಅವಶ್ಯವಾಗಿ ಬೇಕಾಗುವುದು ಏನೆಂದರೆ, ಅರ್ಥಶಾಸ್ತ್ರದ ಬಗ್ಗೆ ಅಜ್ಞಾನ ಮತ್ತು ನವ ಉದಾರವಾದದ ಬಗ್ಗೆ ವಿನೀತ ಭಾವನೆ ಇರುವ ಒಂದು ಸರಕಾರ. ಅಂತಹ ಸರ್ಕಾರವು, ಹಣಕಾಸು ಬಂಡವಾಳವು ಏನೆಲ್ಲವನ್ನು ಬಯಸುತ್ತದೆಯೊ ಅದೆಲ್ಲವನ್ನೂ ಯಾವ ಪ್ರಶ್ನೆಯನ್ನೂ ಎತ್ತದೆ ಪೂರ್ಣ ನಿಷ್ಠೆಯಿಂದ ಜಾರಿಗೊಳಿಸಬೇಕಾಗುತ್ತದೆ. ಅಷ್ಟೇ ಅಲ್ಲ, ನವ ಉದಾರವಾದದ ಆಜ್ಞಾನುವರ್ತಿಯಾಗಿ ಜನ–ವಿರೋಧಿ ಕ್ರಮಗಳನ್ನು ಜಾರಿಗೊಳಿಸಿದ ಕಾರ್ಯವನ್ನು ಸಮರ್ಥಿಸಲು ಬೇಕಾಗುವ ಜನ ಬೆಂಬಲವನ್ನು ಅಣಿನೆರೆಸುವ ಸಾಮರ್ಥ್ಯವನ್ನೂ ಹೊಂದಿರಬೇಕಾಗುತ್ತದೆ. ನವ ಉದಾರವಾದದ ಇಂತಹ ಎಲ್ಲಾ ಬಯಕೆಗಳನ್ನು ಈಡೇರಿಸಲು ಬೇಕಾಗುವ ಎಲ್ಲಾ ಅರ್ಹತೆಗಳೂ ಬಿಜೆಪಿಯಲ್ಲಿವೆ. ಈ ಕೆಲಸಕ್ಕೆ ಅದು ಹೇಳಿ ಮಾಡಿಸಿದಷ್ಟು ಚೆನ್ನಾಗಿ ಹೊಂದಿಕೆಯಾಗುತ್ತದೆ. ಬಿಜೆಪಿಯು ಅರ್ಥಶಾಸ್ತ್ರದ ಬಗ್ಗೆ ಹೊಂದಿರುವ ಜ್ಞಾನವು ಶೂನ್ಯವೇ. ಆದ್ದರಿಂದಲೇ ಅದು, ಯಾವುದಕ್ಕೂ ಹೇಸದವರ ರೀತಿಯಲ್ಲಿ ಹಣಕಾಸು ಬಂಡವಾಳವನ್ನು "ಸಂಪತ್ತಿನ ಸೃಷ್ಟಿಕರ್ತರು" ಎಂದು ಕರೆದು ಅದರ ತಾಳಕ್ಕೆ ತಕ್ಕಂತೆ ಕುಣಿಯುತ್ತದೆ. ಅದೇ ಸಮಯದಲ್ಲಿ, ಅದು ತನ್ನ ಹಿಂದುತ್ವ ಅಜೆಂಡಾದ ಮುಸುಕಿನಲ್ಲಿ (ಅಂದರೆ ಒಂದು ಹೊಗೆ ಪರದೆಯನ್ನು ಎಬ್ಬಿಸುವ ಮೂಲಕ) ಹಣಕಾಸು ಬಂಡವಾಳದ ಆಜ್ಞೆಗಳನ್ನು ಕಾರ್ಯಗತಗೊಳಿಸುತ್ತದೆ. ಹಿಂದುತ್ವವು ಎಂದೂ ಯಾರ ಹೊಟ್ಟೆಯನ್ನೂ ತುಂಬಿಸಿಲ್ಲ. ಇಂದಿನ ಸಂಕಷ್ಟಗಳ ಪರಿಸ್ಥಿತಿಯಲ್ಲಿ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣದ 'ಭೂಮಿ ಪೂಜೆ' ಕೈಗೊಂಡ ಒಂದು ಉದ್ದೇಶವೆಂದರೆ, ಹಣಕಾಸು ಬಂಡವಾಳಕ್ಕೆ ನೀಡಲಾಗಿದ್ದ ಭಾರಿ ರಿಯಾಯ್ತಿಗಳತ್ತ ಜನರು ಗಮನಹರಿಸದಂತೆ ಅದನ್ನು ಬೇರೆಡೆಗೆ ಸೆಳೆಯುವದೇ ಆಗಿತ್ತು.

ಹಿಂದೂ ರಾಷ್ಟ್ರದತ್ತ ವಾಲುವಿಕೆಯು ದುಡಿಯುವ ಮುಸ್ಲಿಮರು ಮತ್ತು ದುಡಿಯುವ ಹಿಂದೂಗಳು ಇಬ್ಬರನ್ನೂ ದಾಳಿಗೆ ಗುರಿಪಡಿಸುತ್ತದೆ. ಕಾರ್ಮಿಕ ಕಾನೂಗಳ ಮೇಲೆ ಹಲ್ಲೆಯಾಗಲೀ, ಭೂಸ್ವಾಧೀನ – ಭೂಸುಧಾರಣಾ ಕಾನೂಗಳ ತಿದ್ದುಪಡಿಗಳಾಗಲೀ. ಪರಿಸರ ರಕ್ಷಣೆ ಕಾಯ್ದೆಯ ವಿರೂಪವಾಗಲೀ, ಒಂದೇ ಮಾತಿನಲ್ಲಿ ಹೇಳುವುದಾದರೆ, ಕಳೆದ ಆರುವರ್ಷಗಳಲ್ಲಿ ಈ ಸರಕಾರ ತಂದಿರುವ ಧರ್ಮಕಕೆ ಸಂಬಂಧಪಡದ ಎಲ್ಲ ಕ್ರಮಗಳೂ ಹಿಂದೂ ದುಡಿಯುವ ಜನಗಳನ್ನೂ, ಮುಸ್ಲಿಂ ದುಡಿಯುವ ಜನಗಳನ್ನೂ ಸಮಾನವಾಗಿ ಕಾಡುತ್ತಿವೆ. ಹಾಗಾಗಿ, ಹಿಂದೂ ರಾಷ್ಟ್ರವು ಹಿಂದೂಗಳ ಹಿತಕ್ಕೆ ಪೂರಕವಾಗುತ್ತದೆ ಎಂಬ ವಿಚಾರವೇ ಒಂದು ತಪ್ಪು ಕಲ್ಪನೆ. ಈ ತಪ್ಪು ಕಲ್ಪನೆಯನ್ನು ಎಷ್ಟು ಬೇಗ ತೊಡೆದು ಹಾಕಿದರೂ ಅಷ್ಟೂ ಉತ್ತಮವೇ.

ಈ ಕೆಲವು ಸಂಗತಿಗಳನ್ನು ಗಮನಿಸಿ: ಈ ಹಿಂದಿನ ಕೆಲವು ವಾರಗಳಲ್ಲಿ, ಬಿಜೆಪಿಯ ಆಡಳಿತವಿರುವ ರಾಜ್ಯಗಳಲ್ಲಿ ಕಾರ್ಮಿಕರ ದಿನದ ಕೆಲಸದ ಅವಧಿಯನ್ನು 8 ರಿಂದ 12 ಗಂಟೆಗಳಿಗೆ ವಿಸ್ತರಿಸಲಾಗಿದೆ. ಈ ಕ್ರಮವು, ಅಂತಾರಾಷ್ಟ್ರೀಯ ಕಾರ್ಮಿಕ ವರ್ಗವು ನೂರಾರು ವರ್ಷಗಳ ಹೋರಾಟಗಳ ಮೂಲಕ ಪಡೆದ 8 ಗಂಟೆಗಳ ಕೆಲಸದ ಹಕ್ಕಿನ ನಿರಾಕರಣೆಯಾಗುತ್ತದೆ. ಹೊಸ ಯೋಜನೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಪರಿಸರದ ಮೇಲೆ ಉಂಟಾಗುವ ಹಾನಿಯ ಮೌಲ್ಯಮಾಪನದ ಬಗ್ಗೆ ಮಹತ್ವಪೂರ್ಣ ಮಾನದಂಡಗಳನ್ನು ಸಡಿಲಗೊಳಿಸಲಾಗಿದೆ. ಉದ್ಯಮಪತಿಗಳಿಗೆ 1.45 ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ಹಣ ವರ್ಗಾವಣೆ ಮಾಡಲಾಗಿದೆ. ಖಾಸಗೀಕರಣವನ್ನು ಕಲ್ಲಿದ್ದಲಿನಂತಹ ನೈಸರ್ಗಿಕ ಸಂಪನ್ಮೂಲಗಳಿಗೂ ವಿಸ್ತರಿಸುವ ಮೂಲಕ ವಸಾಹತು–ವಿರೋಧಿ ಹೋರಾಟದ ಭರವಸೆಯನ್ನು ಉಲ್ಲಂಘಿಸಲಾಗಿದೆ. ಈಗ ರೈಲ್ವೆ ಇಲಾಖೆಗೂ ಸಹ ಖಾಸಗೀಕರಣ ಕಾಲಿಟ್ಟಿದೆ. ಬಂಡವಾಳಶಾಹಿಗಳು ಮತ್ತು ಲೇವಾದೇವಿದಾರರಿಗೆ ಇಂತಹ ಸುಭಿಕ್ಷೆಯ ಕಾಲ ಹಿಂದೆಂದೂ ಇರಲಿಲ್ಲ. ಆದರೆ, ಬುಡಕಟ್ಟು ಜನರೂ ಸೇರಿದಂತೆ ದುಡಿಯುವ ಜನರನ್ನು ಹಿಂದೆಂದೂ ಕಾಣದ ಮಟ್ಟಿನ ನಿರ್ಗತಿಕತನಕ್ಕೆ ತಳ್ಳಲಾಗಿದೆ.

ಮೋದಿ ಸರಕಾರವು ಬಂಡವಾಳಗಾರರ ಪರವಾಗಿ ಕೈಗೊಂಡಿರುವ ಯಾವ ಕ್ರಮವೂ ಈ ಬಿಕ್ಕಟ್ಟನ್ನು ಎಳ್ಳಷ್ಟೂ ಶಮನಗೊಳಿಸುವುದಿಲ್ಲ. ಅದಕ್ಕೆ ಬದಲಾಗಿ, ಇಂತಹ ಕ್ರಮಗಳು ಬಿಕ್ಕಟ್ಟನ್ನು ತೀವ್ರವಾಗಿ ಉಲ್ಬಣಗೊಳಿಸಲಿವೆ. ದೇಶದಲ್ಲಿ ತಯಾರಿಸಿದ ಸರಕು–ಸಾಮಗ್ರಿಗಳಿಗೆ ಬೇಡಿಕೆಯ ಕೊರತೆ ಇರುವು ಕಾರಣಕ್ಕೆ ಈ ಬಿಕ್ಕಟ್ಟು ಸಂಬಂಧಿಸುತ್ತದೆ. ಒಂದು ವಾಸ್ತವಾಂಶವನ್ನು ಹೇಳುವುದಾದರೆ, ಸರ್ಕಾರವು ಈವರೆಗೆ ಕೈಗೊಂಡಿರುವ ನಿವಾರಣಾ ಕ್ರಮಗಳು ಬೇಡಿಕೆಯನ್ನು ಇನ್ನಷ್ಟು ಕುಗ್ಗಿಸುತ್ತವೆ. ಬಂಡವಾಳದಾರರಿಗೆ ಹಣ ವರ್ಗಾಯಿಸಿದ ಸಂದರ್ಭದಲ್ಲಿ ವಿತ್ತೀಯ ಕೊರತೆಯು ಮಿತಿಯೊಳಗೆ ಉಳಿಯಬೇಕು ಎಂದಾದರೆ, ಶ್ರೀಮಂತರ ಮೇಲೆ ವಿಧಿಸುವ ತೆರಿಗೆಯ ದರವನ್ನು ಹೆಚ್ಚಿಸಬೇಕಾಗುತ್ತದೆ. ಇಲ್ಲದೆ ಹೋದಲ್ಲಿ, ಸಾರಭೂತವಾಗಿ, ಈ ಕ್ರಮವು ದುಡಿಯುವ ಜನರಿಗೆ ಸಲ್ಲಬೇಕಾದ ವರಮಾನಗಳ ಪಾಲನ್ನು ಶ್ರೀಮಂತರಿಗೆ ವರ್ಗಾಯಿಸುತ್ತದೆ. ಇದು, ಒಟ್ಟಾರೆ ಬೇಡಿಕೆಯನ್ನು ಇನ್ನಷ್ಟು ಕಡಿಮೆ ಮಾಡುತ್ತದೆ (ಏಕೆಂದರೆ, ವರ್ಗಾವಣೆಯಾದ ಒಂದು ರೂ. ಹಣದಲ್ಲಿ ಕಾರ್ಮಿಕರು ಬಂಡವಾಳಗಾರರಿಗಿಂತ ಹೆಚ್ಚಿನ ಭಾಗವನ್ನು ಬಳಕೆಗಾಗಿ ವಿನಿಯೋಗಿಸುತ್ತಾರೆ). ಹಾಗಾಗಿ, ಸರ್ಕಾರವು ಮಾಡಿರುವ ವರ್ಗಾವಣೆಯು ಖಾಸಗಿ ಹೂಡಿಕೆಯನ್ನು ಹೆಚ್ಚಿಸುವುದಕ್ಕೆ ಬದಲಾಗಿ ತದ್ವಿರುದ್ಧ ಪರಿಣಾಮವನ್ನು ಬೀರುತ್ತದೆ. ಅಂದರೆ ಖಾಸಗಿ ಹೂಡಿಕೆ ತಗ್ಗುತ್ತದೆ. ಬಿಕ್ಕಟ್ಟಿನ ನಿವಾರಣೆಯ ಸಂಬಂಧವಾಗಿ ಸರ್ಕಾರ ಕೈಗೊಂಡಿರುವ ಇನ್ನುಳಿದ ಕ್ರಮಗಳ ಬಗ್ಗೆಯೂ ನಿಖರವಾಗಿ ಇದೇ ಮಾತನ್ನೇ ಹೇಳಬಹುದು. ಸಾರಂಶ ರೂಪದಲ್ಲಿ ಹೇಳುವುದಾದರೆ, ಈ ಕ್ರಮಗಳು ಆದಾಯಗಳ ಹಂಚಿಕೆಯ ನೀತಿ–ವಿಧಾನದಲ್ಲಿ ಆದಾಯಗಳನ್ನು ದುಡಿಯುವ ಜನರಿಂದ ಬಂಡವಾಳಗಾರರಿಗೆ ವರ್ಗಾಯಿಸುವ ಕ್ರಮಗಳೇ. ಆದ್ದರಿಂದ, ಈ ಕ್ರಮಗಳು ಬಿಕ್ಕಟ್ಟನ್ನು ಅನಿವಾರ್ಯವಾಗಿ ಉಲ್ಬಣಗೊಳಿಸಲಿವೆ. ಅಂದರೆ, ಈ ಹಿಂದೆ ಹೇಳಿದ ವಿಷಯಕ್ಕೇ ಬಂದಂತಾಯಿತು.

ಪುಟ 14 ನೋಡಿ

ಹಿಂದೂ ರಾಷ್ಟ್ರವು ಹಿಂದೂಗಳ ಹಿತ ಕಾಯುತ್ತದೆ ಎಂಬುದು ತಪ್ಪು ಕಲ್ಪನೆ

ಪುಟ 13 ರಿಂದ



ಅಂದರೆ, ನವ ಉದಾರವಾದದ ಚೌಕಟ್ಟಿನೊಳಗೆ ಪ್ರಸ್ತುತ ಬಿಕ್ಕಟ್ಟಿಗೆ ಪರಿಹಾರವಿಲ್ಲ.

ಬಿಕ್ಕಟ್ಟು ಉಲ್ಬಣಗೊಳ್ಳುತ್ತಿರುವ ಕಾರಣದಿಂದಾಗಿ ಕ್ರಮೇಣ ಜನರ ನಡುವೆ ಅಸಮಾಧಾನ ಹೆಚ್ಚುತ್ತದೆ. ಇಂತಹ ಅಸಮಾಧಾನವನ್ನು ಹಿಡಿತದಲ್ಲಿಟ್ಟುಕೊಳ್ಳಲು ಹೆಚ್ಚು ಹೆಚ್ಚು ದಬ್ಬಾಳಿಕೆಯ ಕ್ರಮಗಳನ್ನು ಜರುಗಿಸಬೇಕಾಗುತ್ತದೆ. ಜೊತೆಯಲ್ಲಿ, ಜನರ ಗಮನವನ್ನು ಬೇರೆಡೆಗೆ ಸೆಳೆಯುವಂತಹ ರಾಮ ಮಂದಿರ ನಿರ್ಮಾಣ, ರಾಮಮಂದಿರದ ಆರಂಭೋತ್ಸವ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗುತ್ತದೆ. ಹಿಂದುತ್ವದ ಮೇಲೆ ಒತ್ತು ಕೊಡುವ ಉದ್ದೇಶವೇ ಇಂತಹ ಗೊಂದಲಗಳನ್ನು ಸೃಷ್ಟಿಸುವುದಕ್ಕಾಗಿ. ಇಂತಹ ಗೊಂದಲಗಳು ಶೋಷಿತ ದುಡಿಯುವ ಜನರನ್ನು ವಿಭಜಿಸುವುದಷ್ಟೇ ಅಲ್ಲದೆ, ಧಾರ್ಮಿಕ ಬಹುಸಂಖ್ಯಾತ ದುಡಿಮೆಗಾರರ ನಡುವೆಯೂ ಇರುವ ಅಸಮಾಧಾನದ ಹೊರತಾಗಿಯೂ, ಬಿಜೆಪಿ ಅಧಿಕಾರದಲ್ಲಿ ಉಳಿಯಲು ಸಾಕಾಗುವಷ್ಟು ಮತಗಳನ್ನು ಪಡೆಯಲು ಖಾತ್ರಿಪಡಿಸುತ್ತವೆ.

ಹಿಂದೂ ಪಾರಮ್ಯದ ಸಿದ್ಧಾಂತವು ಹಣಕಾಸು ಬಂಡವಾಳದಿಂದ ಪೋಷಣೆ ಪಡೆಯುವ ಮತ್ತು ಪ್ರತಿಯಾಗಿ ಅನುಕೂಲಕರವಾದ ಸೇವೆಸಲ್ಲಿಸುವ ಅರ್ಹತೆ ಹೊಂದಿದೆ. ತನ್ನ ಪ್ರಾಬಲ್ಯ ಮತ್ತು ಅಂತಸ್ತಿಗೆ ಬೆದರಿಕೆ ಒಡ್ಡುವಂತಹ ಒಂದು ಆರ್ಥಿಕ ಬಿಕ್ಕಟ್ಟಿನ ಕಾಲದಲ್ಲಿ, ಹಣಕಾಸು ಬಂಡವಾಳವು ಹಿಂದುತ್ವ ಶಕ್ತಿಗಳೊಂದಿಗೆ ಮೈತ್ರಿ ಮಾಡಿಕೊಂಡಿದೆ. ಹಿಂದೂ ಪಾರಮ್ಯ, ಹಿಂದೂರಾಷ್ಟ್ರ, ಇವುಗಳು ಹಿಂದೂಗಳ ಅನುಕೂಲಕ್ಕಾಗಿ ಅಲ್ಲ. ಅದೇನಿದ್ದರೂ ಹಣಕಾಸು ಬಂಡವಾಳದ ಪ್ರಯೋಜನಕ್ಕಾಗಿಯೇ. ಈ ಕಾರಣದಿಂದಾಗಿಯೇ ಹಣಕಾಸು ಬಂಡವಾಳವು ಸಾಧ್ಯವಿರುವ ಎಲ್ಲ ರೀತಿಯಲ್ಲೂ ಹಿಂದುತ್ವ ಶಕ್ತಿಗಳನ್ನು ಬೆಂಬಲಿಸುತ್ತದೆ.

ಉದ್ಯೋಗಾವಕಾಶಗಳಿಂದ ಮತ್ತು ಇತರೆ ಸೌಕರ್ಯ–ಲಾಭಗಳಿಂದ ಮುಸ್ಲಿಮರನ್ನು ಹೊರಗಿಡುವುದರಿಂದ ಹಿಂದೂಗಳಿಗೆ ಖಂಡಿತವಾಗಿಯೂ ಹೆಚ್ಚಿನ ಲಾಭವಾಗುತ್ತದೆ; ಆದ್ದರಿಂದ, ಹಿಂದೂ ಪಾರಮ್ಯದಿಂದ ಹಿಂದೂಗಳಿಗೆ ಪ್ರಯೋಜನವಿಲ್ಲ ಎಂದು ಹೇಳುವುದು ಸರಿಯೇ? ಎಂದು ಕೇಳಬಹುದು. ಉತ್ತರವಾಗಿ ಹೀಗೆ ಹೇಳಬಹುದು: ಒಟ್ಟು ಜನಸಂಖ್ಯೆಯಲ್ಲಿ ಅಲ್ಪಸಂಖ್ಯಾತರು, ಹೋಲಿಕೆಯ ದೃಷ್ಟಿಯಲ್ಲಿ, ತಮ್ಮ ಪಾಲಿಗಿಂತ ಹೆಚ್ಚಿನ ಪ್ರಮಾಣದ ಉದ್ಯೋಗಗಳನ್ನು ಪಡೆದಿದ್ದ ಸಂದರ್ಭದಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಹೊಂದಿದ್ದಂತಹ ಸನ್ನಿವೇಶಗಳಲ್ಲಿ ಈ ಪ್ರಶ್ನೆಯು ಸುಸಂಬದ್ಧವಾಗುತ್ತಿತ್ತು ಮತ್ತು ನಮ್ಮ ವಾದಕ್ಕೆ ಎದುರುತ್ತರವೂ ಆಗುತ್ತಿತ್ತು. ಉದಾಹರಣೆಗೆ, ಅನೇಕ ಪೂರ್ವ ಆಫ್ರಿಕಾದ ದೇಶಗಳಲ್ಲಿ, ಒಂದು ಕಾಲದಲ್ಲಿ, ಭಾರತೀಯ ಮೂಲದ ಜನರಿಗೆ ಸಂಬಂಧಿಸಿ ನೋಡಿದಾಗ ಈ ಪ್ರಶ್ನೆಯಲ್ಲಿ ನಿಜವಿದೆ ಎಂದು ಹೇಳಬಹುದಿತ್ತು. ಆದರೆ, ಭಾರತದಲ್ಲಿ, ಅಲ್ಪಸಂಖ್ಯಾತರ ಮೇಲೆ ಗುರಿ ಇಟ್ಟು ದಾಳಿ ಮಾಡಿ ಅವರನ್ನು ಮೂಲೆ ಗುಂಪು ಮಾಡಿರುವ ಪರಿಸ್ಥಿತಿಯಲ್ಲಿ, ಉದ್ಯೋಗ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ, ಸರಾಸರಿ ಲೆಕ್ಕದಲ್ಲಿ, ಮುಸ್ಲಿಮರು ಹಿಂದೂಗಳಿಗಿಂತಲೂ ನಿಕೃಷ್ಟ ಪರಿಸ್ಥಿತಿಯಲ್ಲಿರುವ ಸನ್ನಿವೇಶದಲ್ಲಿ ಅವರ ಮೇಲೆ (ಮುಸ್ಲಿಮರ ಮೇಲೆ) ಗುರಿ ಇಟ್ಟು ದಾಳಿ ನೆಡೆಸುವುದು ಹಿಂದೂಗಳ ವಿಘ್ನ–ಸಂತೋಷಕ್ಕೂ ಹೊಂದುವುದಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಹಿಂದೂ ರಾಷ್ಟ್ರದತ್ತ ವಾಲುವಿಕೆಯು ದುಡಿಯುವ ಮುಸ್ಲಿಮರು ಮತ್ತು ದುಡಿಯುವ ಹಿಂದೂಗಳು ಇಬ್ಬರನ್ನೂ ದಾಳಿಗೆ ಗುರಿಪಡಿಸುತ್ತದೆ. ಹಾಗಾಗಿ, ಹಿಂದೂ ರಾಷ್ಟ್ರವು ಹಿಂದೂಗಳ ಹಿತಕ್ಕೆ ಪೂರಕವಾಗುತ್ತದೆ ಎಂಬ ವಿಚಾರವೇ ಒಂದು ತಪ್ಪು ಕಲ್ಪನೆ. ಈ ತಪ್ಪು ಕಲ್ಪನೆಯನ್ನು ಎಷ್ಟು ಬೇಗ ತೊಡೆದು ಹಾಕಿದರೂ ಅಷ್ಟೂ ಉತ್ತಮವೇ.

ವಿಶೇಷ ಮಹಾಧಿವೇಶನ 1958

ಪುಟ 11 ರಿಂದ

ಕುರಿತು ಮಹಾಧಿವೇಶನವು ಒತ್ತಿಹೇಳಿತು.

ಆದರೆ, ವಿಧಿಸಿದ ಕಟ್ಟುಪಾಡುಗಳಲ್ಲಿ ಬಹಳಷ್ಟು ಜಾರಿಯಾಗಲಿಲ್ಲ. ಸಾಮೂಹಿಕ ಪಕ್ಷ ಕಟ್ಟುವ ಮತ್ತು ಪಡೆದ ಮತಗಳಿಗೆ ಅನುಸಾರವಾಗಿ ಸದಸ್ಯರನ್ನು ಸೇರಿಸಿಕೊಳ್ಳುವ ಹೆಸರಿನಲ್ಲಿ, ಸದಸ್ಯರನ್ನು ನೋಂದಾಯಿಸಿಕೊಳ್ಳುವ ನಿಯಮಗಳನ್ನು ಸಡಿಲಗೊಳಿಸಲಾಯಿತು. ಇವೆಲ್ಲವೂ ಪಕ್ಷದೊಳಗೆ ಕ್ರಮೇಣವಾಗಿ ಪರಿಷ್ಕರಣವಾದಿ ಪ್ರವೃತ್ತಿಗಳನ್ನು ಬಲಪಡಿಸಿತು.

ಈ ಅವಧಿಯಲ್ಲಿ ಬೆಳೆಯುತ್ತಿದ್ದ ಕಾರ್ಮಿಕ ವರ್ಗದ ಹೋರಾಟಗಳನ್ನು, ಬಹು ಮುಖ್ಯವಾಗಿ ಎರಡನೇ ವೇತನ ಆಯೋಗದ ಬೇಡಿಕೆಯನ್ನು ಗೆದ್ದ ಅಂಚೆ ಮತ್ತು ತಂತಿ ನೌಕರರ ಹೋರಾಟಗಳನ್ನು ಗುರುತಿಸಿತು. ಎಐಟಿಯುಸಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಕ್ಷದ ಸದಸ್ಯರು ಕಾರ್ಮಿಕ ಸಂಘಗಳ ಐಕ್ಯ ಹೋರಾಟವನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಪಕ್ಷವು ಪ್ರಮುಖ ಪಾತ್ರ ವಹಿಸಿದ್ದ ಅಸ್ಸಾಮಿನ ತೈಲ ಸಂಸ್ಕರಣಾಗಾರಕ್ಕಾಗಿ ನಡೆದ ಹೋರಾಟವನ್ನು ಅದು ಗುರುತಿಸಿತು.

ಭಾರತ ಸರ್ಕಾರವು ಅನುಸರಿಸುತ್ತಿದ್ದ ವಿದೇಶಾಂಗ ನೀತಿಯಲ್ಲಿನ ಪಲ್ಲಟವನ್ನು ಮತ್ತು ದೇಶದ ತ್ವರಿತ ಕೈಗಾರಿಕೀಕರಣದ ಬಗ್ಗೆ ಮಾತನಾಡಿದ ಎರಡನೇ ಪಂಚ ವಾರ್ಷಿಕ ಯೋಜನೆಯ ಕೆಲವು 'ಪ್ರಗತಿಪರ ವಿಷಯ'ಗಳನ್ನು, ರಾಜಕೀಯ ನಿರ್ಣಯವು ಬೆಂಬಲಿಸಿತು.

ಈ ಅವಧಿಯಲ್ಲಿ, ಮತ್ತೊಂದು ಬಂಡವಾಳಶಾಹಿ–ಭೂಮಾಲಕ ಪಕ್ಷವಾದ ಸ್ವತಂತ ಪಕ್ಷ ರಚನೆಯಾಯಿತು, ಆಗ ಅದು ನಿಕೃಷ್ಟ ಶಕ್ತಿಯಾಗಿತ್ತು. ಈ ಬೆಳವಣಿಗೆಯನ್ನು ಬಳಸಿಕೊಂಡ ಪಕ್ಷದ ಪರಿಷ್ಕರಣವಾದಿ ವಿಭಾಗವು ಸ್ವತಂತ್ರ ಪಕ್ಷದ ಉದಯವು ದೊಡ್ಡ ಅಪಾಯವೆಂದು ಬಗೆದು ಕಾಂಗ್ರೆಸ್ ಜತೆ ನಿಲ್ಲುವ ಧೋರಣೆ ತಳೆಯಿತು. ಅಮೃತಸರ ಮಹಾಧಿವೇಶನವು, ಈ ನಿಲುವಿನ ಮೇಲೆ ತಣ್ಣೀರೆರಚಿತು; ಕಾಂಗ್ರೆಸ್ ಸರ್ಕಾರದ ಪ್ರತಿಗಾಮಿ ಹಾಗೂ ಜನವಿರೋಧಿ ನೀತಿಯು ಆರ್ಥಿಕ ಹಾಗೂ ರಾಜಕೀಯ ಜೀವನದಲ್ಲಿ ರಾಷ್ಟ್ರ–ವಿರೋಧಿ, ತೀವ್ರ ಬಲಪಂಥೀಯ ಶಕ್ತಿಗಳಿಗೆ ಕಾರಣವಾಯಿತು; ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ದೃಢ ನಿಶ್ಚಯ ಹಾಗೂ ಚೈತನ್ಯದಿಂದ ಏಕಕಾಲದಲ್ಲಿ ಹೋರಾಟ ಮಾಡದೆ ಅವುಗಳನ್ನು ಸೋಲಿಸಲಾಗುವುದಿಲ್ಲ ಎಂದು ಪಕ್ಷವು ವಿವರಣೆ ನೀಡಿತು.

ಅಮೃತಸರ ಮಹಾಧಿವೇಶನದಲ್ಲಿ ರಾಜಕೀಯ ನಿರ್ಣಯವನ್ನು ಅಂಗೀಕರಿಸಿದ ನಂತರವೂ ಭಿನ್ನಾಭಿಪ್ರಾಯಗಳು ಹಾಗೆಯೇ ಉಳಿದವು. ಕಾಂಗ್ರೆಸ್‌ನೊಂದಿಗೆ ಮೃದು ಧೋರಣೆ ಅನುಸರಿಸಿದ ಪಕ್ಷದೊಳಗಿನ ಪರಿಷ್ಕರಣವಾದಿ ವಿಭಾಗವು ಕೇರಳದ ಕಮ್ಯುನಿಸ್ಟ್ ಸರ್ಕಾರ ವಜಾಗೊಂಡಿದ್ದರಿಂದ ಆಘಾತಕ್ಕೊಳಗಾಯಿತು. ಹೀಗಿದ್ದಾಗ್ಯೂ, ಅವರ ಆಘಾತ ಹೆಚ್ಚು ಕಾಲ ಉಳಿಯಲಿಲ್ಲ ಮತ್ತು ಅವರು ತಮ್ಮ ಪರಿಷ್ಕರಣವಾದಿ ಪಥವನ್ನು ಮುಂದುವರಿಸಿದರು.

ಹೊಸ ಶಿಕ್ಷಣ ನೀತಿಯಲ್ಲಿ ಎಲ್ಲವೂ ಇದೆ, ಆದರೆ ಏನೂ ಇಲ್ಲ......

ಪುಟ 9 ರಿಂದ

within one umbrella institution – that is – Higher Education Commission of India. These bodies will function with less human interface and with more technology based. ಶಿಕ್ಷಣದ ಆಡಳಿತ ಹೆಚ್ಚು ಹೆಚ್ಚು ರಾಜಕೀಯಗೊಳ್ಳುವ ಮತ್ತು ಕೇಂದ್ರೀಕರಣಗೊಳ್ಳುವ ಎಲ್ಲ ಸಾಧ್ಯತೆಗಳಿವೆ. ನಮ್ಮಂತಹ ಬಹುಸಂಸ್ಕೃತಿಯುಳ್ಳ ದೇಶದಲ್ಲಿ ಏಕ ಪಠ್ಯಗಳು, ಏಕರೂಪಿ ಪ್ರವೇಶ ಪರೀಕ್ಷೆಗಳು, ಏಕರೂಪಿ ಆಡಳಿತ ಬಹುತೇಕರನ್ನು ಹೊರಗಿಡುವ ಎಲ್ಲ ಸಾಧ್ಯತೆಗಳಿವೆ.

ಮೌಲ್ಯದ ಪ್ರಶ್ನೆ :

ಹೊಸ ಶಿಕ್ಷಣ ನೀತಿ ಶಿಕ್ಷಣ ದಾಟಿಸಬೇಕಾದ ಮೌಲ್ಯಗಳ ಒಂದು ದೊಡ್ಡ ಪಟ್ಟಿಯನ್ನೇ ನೀಡಿದೆ – ethics and human constitutional values such as empathy, respect for others, cleanliness, courtesy, democratic spirit, spirit of service, respect for public property, scientific temper, **liberty, responsibility, pluralism, equality and justice**–ಈ ಪಟ್ಟಿಯನ್ನು ನೋಡಿದರೆ ಸಣ್ಣಪುಟ್ಟ ಊರುಗಳ ಹೊಟೇಲುಗಳಲ್ಲಿ ನೇತಾಡುವ ಬೋರ್ಡ್‌ಗಳಲ್ಲಿರುವ ತಿಂಡಿಗಳ ಪಟ್ಟಿನೆನಪಿಗೆ ಬರುತ್ತದೆ. ಆ ಬೋರ್ಡ್‌ಲ್ಲಿ ಹತ್ತಿಪ್ಪತ್ತು ತಿಂಡಿಗಳ ಹೆಸರಿರುತ್ತದೆ. ಆದರೆ ಹೊಟೇಲ್‌ಲ್ಲಿ ಅವರಿಗೆ ಅನುಕೂಲವಾಗುವ ನಾಲ್ಕೈದೇ ತಿಂಡಿಗಳನ್ನೇ ತಯಾರು ಮಾಡುವುದು. ಅದೇ ರೀತಿಯಲ್ಲಿ ಹೊಸ ಶಿಕ್ಷಣ ನೀತಿ ಮೌಲ್ಯಗಳ ಪಟ್ಟಿಯಲ್ಲಿ ಪ್ರಜೆಗಳ ಜವಾಬ್ದಾರಿಗೆ ಕೊಟ್ಟ ಮಹತ್ವವನ್ನು ಪ್ರಜೆಗಳ ಹಕ್ಕಿಗೆ ನೀಡಿಲ್ಲ. ಸಂವಿಧಾನಿಕ ಮೌಲ್ಯವನ್ನು ದಾಟಿಸುವುದು ಶಿಕ್ಷಣದ ಮಹತ್ವದ ಜವಾಬ್ದಾರಿ ಆಗಬೇಕು. ಸಂವಿಧಾನಿಕ ಮೌಲ್ಯಗಳನ್ನು ದಾಟಿಸುವುದರ ಬಗ್ಗೆ ಸ್ಪಷ್ಟತೆ ಇಲ್ಲ. ಸಂವಿಧಾನಿಕ ಮೌಲ್ಯಗಳಲ್ಲಿ ಸಮಾನತೆಯ ಪ್ರಜ್ಞೆ ರೂಪಿಸುವುದು ಶಿಕ್ಷಣದ ಮಹತ್ವದ ಜವಾಬ್ದಾರಿ. ಇದು ಶಿಕ್ಷಣ ಸಂಸ್ಥೆಯ ಭೌತಿಕ ಸ್ವರೂಪ, ಸಾಂಸ್ಥಿಕ ಸ್ವರೂಪ ಹಾಗು ಪಠ್ಯಗಳ ಮೇಲೆ ಅವಲಂಬಿತವಾಗಿದೆ. ಆದರೆ ಹೊಸ ಶಿಕ್ಷಣ ನೀತಿಯಲ್ಲಿ ಎರಡು ಕಾರಣಗಳಿಗಾಗಿ ಸಂವಿಧಾನಿಕ ಮೌಲ್ಯಗಳನ್ನು ದಾಟಿಸುವುದು ಕಷ್ಟವಾಗಬಹುದು. ಒಂದು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಈಗಾಗಲೇ ಇರುವ ಗ್ರೇಡೆಡ್ ಇನ್ವಿಕ್ವಾಲಿಟಿಗೆ ಸಾಂಸ್ಥಿಕ ಸ್ವರೂಪ ನೀಡಲು ಹೊಸ ಶಿಕ್ಷಣ ನೀತಿ ಬಯಸುತ್ತದೆ. ಅಂದರೆ ಅತ್ಯುತ್ತಮ, ಉತ್ತಮ ಹಾಗು ಸಾಮಾನ್ಯ ಶಿಕ್ಷಣ ಸಂಸ್ಥೆಗಳೆನ್ನುವ ವಿಂಗಡನೆ ಇದೆ. ಇವುಗಳ ಭೌತಿಕ ಹಾಗು ಸಾಂಸ್ಥಿಕ ಸ್ವರೂಪ ಮತ್ತು ಪಠ್ಯಗಳು ಖಂಡಿತವಾಗಿಯೂ ಭಿನ್ನವಾಗಿರುತ್ತದೆ. ಇಂತಹ ಗ್ರೇಡೆಡ್ ಇನ್ವಿಕ್ವಾಲಿಟಿಯನ್ನು ಪ್ರತಿಪಾದಿಸುವ ಸಂಸ್ಥೆಗಳು ಸಮಾನತೆಯ ಪ್ರಜ್ಞೆಗಿಂತ ಹೆಚ್ಚು ಅಸಮಾನತೆ ಪ್ರಜ್ಞೆಯನ್ನು ಖಾಯಂಗೊಳಿಸಬಹುದು. ಎರಡು, ಹೊಸ ಶಿಕ್ಷಣ ನೀತಿಯಲ್ಲಿ ಔಪಚಾರಿಕ ಶಿಕ್ಷಣಕ್ಕಿಂತ ಅನೌಪಚಾರಿಕ ಶಿಕ್ಷಣಕ್ಕೆ ಮಹತ್ವ ಇದೆ. ಇದರಿಂದ ಶಿಕ್ಷಿತರು ತಮ್ಮ ಕುಟುಂಬ ಹಾಗು ಸಮುದಾಯಗಳ ಮೌಲ್ಯಗಳಿಂದ ಮುಕ್ತರಾಗಿ ಸಂವಿಧಾನಿಕ ಮೌಲ್ಯಗಳನ್ನು ರೂಪಿಸಿಕೊಳ್ಳುವುದು ಕಷ್ಟ.

ಏಕೆ ಪರಿಹರಿಸುವ ಸಾಧ್ಯತೆ ಇಲ್ಲ?

ವರ್ತಮಾನದಲ್ಲಿ ಶಿಕ್ಷಣ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳನ್ನು ಹೊಸ ಶಿಕ್ಷಣ ನೀತಿ ಪರಿಹರಿಸಲು ಸಾಧ್ಯವಿಲ್ಲವೆಂದು ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ಏಕೆ ಪರಿಹರಿಸಲು ಸಾಧ್ಯವಿಲ್ಲ ಎನ್ನುವುದಕ್ಕೆ ಕೆಲವು ಕಾರಣಗಳನ್ನು ನೀಡಿದ್ದೇನೆ.

1. ಆರ್ಥಿಕ ಅಸಾಮರ್ಥ್ಯ:

ಹೊಸ ಶಿಕ್ಷಣ ನೀತಿ ಹೇಳಿರುವ ಹಲವು ಸುಧಾರಣೆಗಳನ್ನು ಅನುಷ್ಠಾನಕ್ಕೆ ತರಬೇಕಾದರೆ ದೊಡ್ಡ ಮೊತ್ತದ ಹಣ ವಿನಿಯೋಜಿಸಬೇಕು. ಇಷ್ಟೊಂದು ಮೊತ್ತವನ್ನು ಎಲ್ಲಿಂದ ತರುವುದು. ಡಿಮೊನಿಟೈಸೆಶನ್, ಜಿಎಸ್‌ಟಿಗಳು ಅರ್ಥಿಕ ಪ್ರಗತಿಯನ್ನು ಪಾತಾಳಕ್ಕೆ ತಳ್ಳಿವೆ. ಆರ್ಥಿಕ ಪ್ರಗತಿ ಇಳಿಮುಖವಾಗುತ್ತಿರುವ ಸಂದರ್ಭದಲ್ಲಿ ಕೊರೋನ ಆರಂಭವಾಗಿದೆ. ಕೊರೋನ ಹತೋಟಿಗೆ ಹಮ್ಮಿಕೊಂಡ ಲಾಕ್‌ಡೌನ್ ಅರ್ಥ ವ್ಯವಸ್ಥೆಯನ್ನು ಮೈನಸ್ ಗ್ರೋಥ್ ಕಡೆಗೆ ಒಯ್ದಿದೆ. ಇನ್ನು 3–4 ವರ್ಷ ಅರ್ಥ ವ್ಯವಸ್ಥೆ ಸಾಮಾನ್ಯ ಸ್ಥಿತಿಗೆ ಬರುವುದು ಕಷ್ಟ. ಇಂತಹ ಸಂದರ್ಭದಲ್ಲಿ ಶಿಕ್ಷಣದ ಮೇಲೆ ಜಿಡಿಪಿಯ ಶೇ.6 ಬಿಡಿ, ಈಗ ಮಾಡುತ್ತಿರುವ ಶೇ.3.5ನ್ನು ಮಾಡಿದರೂ ದೊಡ್ಡ ಸಾಧನೆಯೇ ಆಗುತ್ತದೆ.

2. ಅರ್ಬನ್ ಬಯಾಸ್:

(ನಗರಗಳತ್ತ ಪಕ್ಷಪಾತ) ಇದನ್ನು ಮಧ್ಯಮ ವರ್ಗ ಬಯಾಸ್ (ಪಕ್ಷಪಾತ) ಎಂದು ಕೂಡ ಹೇಳಬಹುದು. ನಮ್ಮಲ್ಲೊಂದು ಸಣ್ಣ ಮಧ್ಯಮ ವರ್ಗ ಇದೆ. ಇವರು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಅಭಿಪ್ರಾಯ ರೂಪಿಸುವುರಲ್ಲಿ ಮುಖ್ಯ ಭೂಮಿಕೆ ನಿಭಾಯಿಸುತ್ತಾರೆ. ಈ ವರ್ಗದಿಂದಲೇ ಬಂದವರು ಟಿವಿಗಳಲ್ಲಿ ಚರ್ಚಿಸುತ್ತಾರೆ, ಪತ್ರಿಕೆಗಳಲ್ಲಿ ಬರೆಯುತ್ತಾರೆ ಮತ್ತು ಸಿನೀಮಾ, ಟಿವಿ ಸೀರಿಯಲ್‌ಗಳನ್ನು ಉತ್ಪಾದಿಸುತ್ತಾರೆ. ದೇಶದ ಎಲ್ಲ ಸಮಸ್ಯೆಗಳನ್ನು ಇವರೇ ಪ್ರತಿನಿಧಿಸುತ್ತಾರೆ. ಇವರ ಸಮಸ್ಯೆಯನ್ನೇ ದೇಶದ ಸಮಸ್ಯೆ ಎಂದು ಮಂಡಿಸುತ್ತಾರೆ. ಇವರಿಗೂ ಅವರ ಮಕ್ಕಳು ಮತ್ತು ಸ್ಲಂಗಳಿಂದ ಅಥವಾ ಬಡ ಹಿನ್ನೆಲೆಯಿಂದ ಬರುವ ಮಕ್ಕಳು ಒಂದೇ ಶಾಲೆಯಲ್ಲಿ ಓದುವುದನ್ನು ಊಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಶ್ರೀಮಂತ ಮತ್ತು ಬಡ ಮಕ್ಕಳು ಒಂದೇ ಶಾಲೆಯಲ್ಲಿ ಓದದಿದ್ದರೆ ಶಿಕ್ಷಣದ ಗುಣಮಟ್ಟ ಸುಧಾರಿಸುವುದಿಲ್ಲ ಮತ್ತು ಸಮಾನತೆಯ ಪ್ರಜ್ಞೆ ಮೂಡುವುದಿಲ್ಲ. ಇದು ಸಾಧ್ಯವಾಗಬೇಕಾದರೆ ಸಮಾನ ಶಿಕ್ಷಣವನ್ನು ಸರಕಾರವೇ ಕೊಡಬೇಕು. ಆದರೆ ಸಮಾನ ಶಿಕ್ಷಣವನ್ನು ಸರಕಾರವೇ ಕೊಡಬೇಕೆನ್ನುವ ಸಾರ್ವಜನಿಕ ಅಭಿಪ್ರಾಯವನ್ನು ಈ ಮಧ್ಯಮ ವರ್ಗ ರೂಪಿಸುವುದೇ ಇಲ್ಲ. ಅದರ ಬದಲು ಅನುಕೂಲಸ್ಥರಿಗೆ ಖಾಸಗಿ ಶಾಲೆ ಬಡವರಿಗೆ ಸರಕಾರಿ ಶಾಲೆ ಎನ್ನುವ ವರ್ತಮಾನದ ಸಮಸ್ಯೆಯನ್ನು ಮುಂದುವರಿಸುವ ಹೊಸ ಶಿಕ್ಷಣ ನೀತಿಯನ್ನು ಇವರು ಹಾಡಿ ಹೊಗಳುತ್ತಾರೆ. ಇದರಿಂದ ವರ್ತಮಾನದ ಸಮಸ್ಯೆ ಪರಿಹಾರ ಆಗಲು ಸಾಧ್ಯವಿಲ್ಲ.

3. ಆಳುವ ವರ್ಗ:

ನಮ್ಮಲ್ಲಿ ಚುನಾಯಿತರಾಗುವ ಪ್ರತಿನಿಧಿಗಳ ಆರ್ಥಿಕ ಹಿನ್ನೆಲೆಯನ್ನು ನೋಡಿದರೆ ನಮ್ಮಲ್ಲೊಂದು ಆಳುವ ವರ್ಗರೂಪಿತವಾಗಿರುವುದು ಸ್ಪಷ್ಟವಾಗಿದೆ. 2014ರಲ್ಲಿ ಆಯ್ಕೆಯಾದ ಎಂಪಿಗಳ ಸರಾಸರಿ ಆಸ್ತಿಪಾಸ್ತಿ ರೂ. 14.7 ಕೋಟಿ. 2013ರ ಎನ್‌ಎಸ್‌ಎಸ್‌ಓ ವರದಿ ಪ್ರಕಾರ ಗ್ರಾಮೀಣ ಪ್ರದೇಶ ಕುಟುಂಬದ ಸರಾಸರಿ ಆಸ್ತಿಪಾಸ್ತಿ ರೂ.10 ಲಕ್ಷ, ನಗರ ಪ್ರದೇಶ ಕುಟುಂಬವೊಂದರ ಸರಾಸರಿ ಆಸ್ತಿಪಾಸ್ತಿ ರೂ.23 ಲಕ್ಷ, ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಶೇ.10ರಷ್ಟು ಕುಟುಂಬಗಳ ಸರಾಸರಿ ಆಸ್ತಿ ರೂ.25 ಸಾವಿರದ ಆಸುಪಾಸಿನಲ್ಲಿದೆ. ಮೇಲಿನ ಅಂಕಿಅಂಶಗಳನ್ನು ನೋಡಿದರೆ ಅತ್ಯಂತ ಶ್ರೀಮಂತ ವರ್ಗ ನಮ್ಮಲ್ಲಿ ಜನಪ್ರತಿನಿಧಿಗಳಾಗಿ ಚುನಾಯಿಸಲ್ಪಡುತ್ತಾರೆ ಎನ್ನುವುದು ಸ್ಪಷ್ಟವಾಗುತ್ತಿದೆ. ಇವರ ಆಸಕ್ತಿಗೂ ಇವರನ್ನು ಚುನಾಯಿಸಿದ ಜನರ ಆಸಕ್ತಿಗೂ ಆಕಾಶ ಭೂಮಿ ಅಂತರವಿದೆ. ಈ ಅಂತರ ಇವರು ಈಗಾಗಲೇ ಜಾರಿಗೆ ತಂದ ಪಾಲಿಸಿಗಳಲ್ಲಿ ಪ್ರಕಟವಾಗಿದೆ.ಇವರು ಜಾರಿಗೆ ತರುವ ಬಹುತೇಕ ಪಾಲಿಸಿಗಳು ಅನುಕೂಲಸ್ಥರ ಪರ ಇದೆ; ಬಡವರ ಪರ ಇಲ್ಲ. ತೆರಿಗೆ ನೀತಿ, ಹಣಕಾಸು ನೀತಿ, ಕಾರ್ಮಿಕ ನೀತಿ, ಭೂನೀತಿ, ಆರೋಗ್ಯ ನೀತಿ ಇವೆಲ್ಲವೂ

ಬಂಡವಾಳವಾದದ ಅಸ್ವಸ್ಥ ಸ್ಥಿತಿ ಮತ್ತು ಸಮಾಜವಾದದ ಅಧಿಕಾರ ಸ್ಥಾಪನೆಯ ಜರೂರು............

ಪುಟ 6 ರಿಂದ

ಬಂದಿತು.ಈ ಕ್ಷಣದಲ್ಲೂ ಬಂಡವಾಶಾಹಿಯ ರಾಜಕೀಯ ನಿಲುವು ಇದೇ ಆಗಿದೆ. ಈ ಪ್ರತಿಗಾಮೀ ಹೋರಾಟದ ಫಲವಾಗಿ ಆಧುನಿಕ ಬಂಡಾಳವು ದಿನ ದಿನವೂ ಹೊಸ ಹೊಸ ರೂಪಗಳನ್ನು ತಾಳುತ್ತಾ, ಅತ್ಯಂತ ಸಂಕೀರ್ಣವೂ, ಮಹಾ ವಿಕೃತವೂ, ತೀವ್ರ ರೋಗಗ್ರಸ್ತವೂ ಆಗುತ್ತಾ ತನ್ನ ವೈರುಧ್ಯಗಳನ್ನು ವಿಶ್ವವ್ಯಾಪಿಯಾಗಿಸಿದೆ. ದೇಹದ ಯಾವುದೋ ಒಂದು ಭಾಗಕ್ಕೆ ತಗುಲಿದ ಕ್ಯಾನ್ಸರ್ ಕಾಯಿಲೆಯನ್ನು ಅದುಮಿಡುತ್ತಾ ಹೋದಂತೆ ಅದು ದೇಹವಿಡೀ ವ್ಯಾಪಿಸಿ ವ್ಯಕ್ತಿಯ ಅವಸಾನವನ್ನು ತರುವಂತೆ, ಬಂಡವಾಳಶಾಹಿಯ ಅದುಮಿಟ್ಟ ವೈರುಧ್ಯಗಳು ವಿಶ್ವಮಟ್ಟದಲ್ಲಿ ಜೀವಸಂಕುಲದ ಅಸ್ತಿತ್ವನ್ನೇ ಅಪಾಯಕ್ಕೆ ಒಡ್ಡಿದೆ. ಇದನ್ನೇ ಬಿಡಿ ಬಿಡಿಯಾಗಿ, ಆರ್ಥಿಕ ಕುಸಿತ ಮತ್ತು ಬಿಕ್ಕಟ್ಟುಗಳು, ಹಣದುಬ್ಬರ, ನಿರುದ್ಯೋಗ ಹಾಗೂ ಶ್ರಮಿಕ ಸಂಬಂಧಿ ಕಷ್ಟ–ನಷ್ಟಗಳು, ಕಾರ್ಮಿಕರ ವಲಸೆ, ರಾಜಕೀಯ ಕ್ಷೋಭೆಗಳು ಪರಿಸರ ನಾಶ, ಭೂಮಿಯ ತಾಪಮಾನದ ಹೆಚ್ಚಳ, ಅತಿವೃಷ್ಟಿ ಮತ್ತು ಅನಾವೃವೃಷ್ಟಿಗಳು, ಸಾಂಕ್ರಾಮಿಕ ರೋಗಗಳ ಹಾವಳಿ ಮುಂತಾಗಿ ಹೆಸರಿಸಲಾಗುತ್ತಿದೆ. ವಾಸ್ತವವಾಗಿ ರೋಗಗ್ರಸ್ತವಾಗಿರುವ ಬಂಡವಾಳವಾದವೇ ಒಂದು ಮನುಕುಲಕ್ಕೆ ತಗುಲಿರುವ ಒಂದು ಮಹಾರೋಗವಾಗಿ ಪರಿಣಮಿಸಿದೆ.

ಸೂಕ್ಷ್ಮಾಣು ಜೀವಿಗಳಿಂದ ಹಿಡಿದು, ಬಹುಕೋಶ ಜೀವಿಗಳು ಮತ್ತು ಸಸ್ಯಗಳೂ ಸೇರಿದಂತೆ ಪ್ರತಿಯೊಂದು ಜೀವಿಯ ಅಸ್ತಿತ್ವಕ್ಕೂ ಆಹಾರ ಮತ್ತಿತರ ಸ್ವಾಭಾವಿಕ ಅಂಶಗಳ ಲಭ್ಯತೆಯೇ ಆಧಾರ. ಅವಿಲ್ಲದೆ ಜೀವ ಜಗತ್ತಿನ ಅಸ್ತಿತ್ವವಿಲ್ಲ. ಮನುಷ್ಯರಲ್ಲಿ ಇವುಗಳ ಜೊತೆಗೆ ನೈಸರ್ಗಿಕ ವಸ್ತುಗಳನ್ನು ಬಳಸಿ, ಪರಿವರ್ತಿಸಿ, ತನ್ನ ಮೆದುಳು–ಮೈಬಲಗಳ, ಅಂದರೆ ಶ್ರಮದ ಸಹಾಯದಿಂದ ಆವಿಷ್ಕರಿಸಿ ಸೃಷ್ಟಿಸಿದ ಜೀವನಾಧಾರಗಳು ಅವರ ಅಸ್ತಿತ್ವದ ಆಧಾರ. ಪ್ರತಿಯೊಬ್ಬ ಮನುಷ್ಯನೂ, ಇತರ ಜೀವಿಗಳಂತೆ, ತನ್ನ ಅಸ್ತಿತ್ವಕ್ಕೆ ತನ್ನ ಶ್ರಮವನ್ನು ಹಾಕಬೇಕಾದ್ದು ಅನಿವಾರ್ಯ. ಮನುಷ್ಯರು ಮೊದಲಿನಿಂದಲೂ ಸಾಮುದಾಯಿಕ ವಿಧಾನದಲ್ಲಿ ಬದುಕುತ್ತಾ, ಸ್ವಾಭಾವಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಹೊಸ ಹೊಸ ಸಾಧನಗಳನ್ನು ಸೃಷ್ಟಿಸಿಕೊಳ್ಳುತ್ತಾ ಬಂದಿದ್ದಾರೆ.ಈ ಹೊಸ ಸಾಧನಗಳ ಸೃಷ್ಟಿಯಿಂದಾಗಿ ಹೊಸ ಹೊಸ ಅಗತ್ಯಗಳನ್ನು ಪೂರೈಸಿಕೊಳ್ಳಲು ಹೊಸ ಸಂಬಂಧಗಳನ್ನು ಸೃಷ್ಟಿಸಿಕೊಳ್ಳುತ್ತಾ ಸಾಮಾಜಿಕ ವ್ಯಕ್ತಿಗಳಾಗಿದ್ದಾರೆ.

ಆದರೆ ತಾನು ಶ್ರಮ ಹಾಕದೆ ದುರ್ಬಲರ ಶ್ರಮದಿಂದ ಬದುಕಬಹುದೆಂಬ ಶೋಷಣೆಯ ಸಂಬಂಧವು ಗುಲಾಮೀ ಸಮಾಜದಿಂದಲೂ ಉಳಿದುಕೊಂಡು ಬಂದಿದೆ. ಇದು ಮೂಲಭೂತವಾಗಿ ಅನೈಸರ್ಗಿಕವೂ, ಅತಾರ್ಕಿಕವೂ, ಆದ ಸಂಬಂಧ. ಮನುಷ್ಯರಲ್ಲಿ ಅತ್ಯುನ್ನತ ಮಟ್ಟಕ್ಕೆ ವಿಕಾಸಗೊಂಡಿರುವ ವೈಚಾರಿಕತೆಗೆ ನಿಲುಕದ ಸಂಬಂಧ. ಒಂದು ಜೀವಿಯು ಮತ್ತೊಂದು ಜೀವಿಯನ್ನು ಕೊಂದು ಬದುಕುವುದು ನಿಸರ್ಗದಲ್ಲಿ ಸಹಜವಾದದ್ದು. ಮನುಷ್ಯರಲ್ಲಿ, ಕ್ರಿಮಿ, ಕೀಟ, ಸಸ್ಯ ಮತ್ತು ಪ್ರಾಣಿಗಳನ್ನು ತಿಂದು ಬದುಕುವುದು ಸಹಜ, ಸ್ವಾಭಾವಿಕ ಮತ್ತು ಅಸ್ತಿತ್ವದ ದೃಷ್ಟಿಯಿಂದ ತಾರ್ಕಿಕವಾದದ್ದು ಮತ್ತು ನಾಗರಿಕವಾದದ್ದು. ಮತ್ತು ಮೈ–ಮೆದುಳಿನ ಸ್ವಾಸ್ಥ್ಯದ ನಿರ್ವಚನೆಯ ಪ್ರಕಾರ ಆರೋಗ್ಯಕರವಾದದ್ದು. ಈ ನಿರ್ವಚನೆಯ ಆಧಾರದಿಂದಲೇ ಹೇಳುವುದಾದರೆ ಇದರ ತಲೆಕೆಳಗಾದ ಸ್ಥಿತಿ ಮೃಗೀಯವಾದದ್ದು ಮತ್ತು ಅನಾರೋಗ್ಯದ್ದು. ಹುಲಿಗಳು ಮನುಷ್ಯರನ್ನು ಕೊಂದು ತಿಂದರೆ ಅವನ್ನು ನರಭಕ್ಷಕಎನ್ನುತ್ತೇವೆ. ನಾವು ತಿಂದ ಹುಲ್ಲು ಬೀಜಗಳು, ಸೊಪ್ಪು ಸದೆಗಳು ಜೀರ್ಣವಾಗುವ ಬದಲು ಪ್ರಾಣಕ್ಕೇ ಅಪಾಯವನ್ನು ಉಂಟುಮಾಡಿದರೆ, ಅವನ್ನು ಜೀವಮಾರಕವಿಷಸಸ್ಯಗಳು ಎನ್ನುತ್ತೇವೆ. ಕೋವಿಡ್‌ನಂಥ ಸೂಕ್ಷ್ಮಾಣುಗಳು ಮೈಯೊಳಗೆ ಸೇರಿಕೊಂಡು ಅಸ್ವಸ್ಥತೆಯನ್ನು ಉಂಟುಮಾಡಿದರೆ ಅವನ್ನು ರೋಗಕಾರಕ ಸೂಕ್ಷ್ಮಾಣುಗಳು ಎಂದು ಅವುಗಳಿಂದ ರಕ್ಷಣೆ ಪಡೆಯಲು ಔಷಧಗಳನ್ನು ಸಂಶೋಧಿಸುತ್ತೇವೆ. ಮನುಷ್ಯರು ಮನುಷ್ಯರ ಅಸ್ತಿತ್ವಕ್ಕೆ ಪೂರಕವಾಗಿ ನಡೆದುಕೊಂಡರೆ ಮಾನವೀಯತೆ ಎಂದೂ ಅದಕ್ಕೆ ವಿರುದ್ಧವಾಗಿ ವರ್ತಿಸಿದರೆ ಅಮಾನವೀಯತೆ ಎಂದೂ ಹೇಳುತ್ತೇವೆ. ಮನುಷ್ಯರು ಮನುಷ್ಯರನ್ನೇ ತಿಂದರೆನರಮಾಂಸಭಕ್ಷಕ ಅನಾಗರಿಕರೆನ್ನುತ್ತೇವೆ.

ಪ್ರಾಚೀನ ಅನಾಗರಿಕ ಸಮಾಜ, ಬರ್ಬರ ಸಮಾಜ, ಬುಡಕಟ್ಟು ಸಮಾಜ ಮತ್ತು ಗುಲಾಮೀ ಸಮಾಜಗಳಲ್ಲಿದ್ದ, ಅನಾಗರಿಕತೆ, ಬರ್ಬರತೆ, ಹಿಂಸೆ, ಕ್ರೌರ್ಯ, ಮತ್ತು ಮೌಢ್ಯಗಳು ಇಂದಿನ ಸಮಾಜದಲ್ಲಿ ಕಾಣಿಸುವುದಿಲ್ಲ. ಏಕೆಂದರೆ ಅವುಗಳ ಮೂಲ ರೂಪಗಳನ್ನು ಬಂಡವಾಳಶಾಹಿ ವ್ಯವಸ್ಥೆಯುಮಾರ್ಪಡಿಸಿದೆ. ಅದು ಈ ವಿಷಯಗಳಲ್ಲಿ ಕಾನೂನು ಚೌಕಟ್ಟಿನೊಳಗಿನ ತಾರ್ಕಿಕತೆ ಮತ್ತು ವೈಚಾರಿಕತೆಗಳ ನಾಗರಿಕ ಸಮಾಜವಾಗಿ ವಿಕಾಸಗೊಂಡಿದೆ. ಆದರೆ ಶ್ರಮಶೋಷಣೆಯ ವಿಷಯದಲ್ಲಿ ಮಾತ್ರ ಹಿಂದಿನ ವ್ಯವಸ್ಥೆಗಳ ಅನೈಸರ್ಗಿಕ, ಅತಾರ್ಕಿಕ ಮತ್ತು ವೈಚಾರಿಕವಲ್ಲದ ಹಳೆಯ ಸಂಬಂಧಗಳನ್ನೇ ಅದು ಈಗಲೂ ಮುಂದುವರೆಸಿಕೊಂಡು ಬಂದಿದೆ. ಒಂದೇ ವ್ಯತ್ಯಾಸವೆಂದರೆ, ಹಿಂದಿದ್ದ ನೇರ ದೈಹಿಕ ಮತ್ತು ಮಾನಸಿಕ ಕ್ರೌರ್ಯಗಳ ಬಲಾತ್ಕಾರದ ಬದಲು, ಕಾನೂನು ರೂಪದ ಬಲಾತ್ಕಾರ, ನಿರ್ಬಂಧಗಳಿಂದ ಬಲಿಷ್ಠರು ದುರ್ಬಲರ ಅಸ್ತಿತ್ವವನ್ನು ನಿಯಂತ್ರಿಸಬಹುದಾದ ಶ್ರಮಸಂಬಂಧವನ್ನು ಗಟ್ಟಿಗೊಳಿಸಿದೆ. ಶ್ರಮಶೋಷಣೆಯನ್ನು ತಂತ್ರಜ್ಞಾನದ ಸಹಾಯದಿಂದ ಅತ್ಯಂತ ಜಟಿಲವೂ, ಸೂಕ್ಷ್ಮವೂ, ವಿಶ್ವವ್ಯಾಪಿಯೂ ಆಗುವಂತೆ ಮಾಡಿದೆ. ಅದನ್ನು ಬದಲಿಸುವ ಎಲ್ಲ ಯೋಚನೆ, ಯತ್ನಗಳನ್ನೂಅಮಾನುಷವಾಗಿ ಹತ್ತಿಕ್ಕುತ್ತಾ ಬರುತ್ತಿದೆ.

ಬಂಡವಳಿಗನು, ಬಂಡವಾಳದ ವ್ಯಕ್ತಿರೂಪ ಎಂದು ಹೇಳುವಂತೆ ಇನ್ನೊಂದು ಕೊನೆಯಿಂದ ಬಂಡವಾಳಶಾಹಿಯು ಬಂಡವಳಿಗನ ವ್ಯವಸ್ಥೆಯ ರೂಪ ಎಂದು ಹೇಳಬಹುದು. ಹೇಗೇ ಆದರೂ ಇವುಗಳ ಮೂಲ ಸ್ವರೂಪದಲ್ಲೇ ಇರುವಅವೈಚಾರಿಕತೆ, ಅತಾರ್ಕಿಕತೆ, ತಲೆಕೆಳಗು ದೃಷ್ಟಿಕೋನ, ಅಸ್ವಾಭಾವಿಕತೆ ಮತ್ತು ರೋಗಗ್ರಸ್ತಸ್ಥಿತಿಗಳಲ್ಲೇನೂ ವ್ಯತ್ಯಾಸವಾಗುವುದಿಲ್ಲ. ಅಂದರೆ ಬಂಡವಳಿಗನಿಗೆ ಅಂಟಿದ ರೋಗವನ್ನು ಅವನ ವ್ಯಕ್ತಿಮಟ್ಟದ ಕಾಯಿಲೆಯ ಸ್ಥಿತಿ ಎನ್ನುತ್ತೇವೆ. ಬಂಡವಾಳಶಾಹಿ ವ್ಯವಸ್ಥೆಗೆ ಅಂಟಿದ ರೋಗವನ್ನು ವ್ಯವಸ್ಥೆ ಮಟ್ಟದ ಕಾಯಿಲೆಯ ಸ್ಥಿತಿ ಎನ್ನುತ್ತೇವೆ. ಅಷ್ಟೇ ವ್ಯತ್ಯಾಸ

ಉಪಯೋಗ ಮೌಲ್ಯಕ್ಕಾಗಿ ವಸ್ತುಗಳತಯಾರಿಕೆ ಮತ್ತು ಅವುಗಳ ವಿನಿಮಯವು ಸ್ವಾಭಾವಿಕವಾದುದು. ವ್ಯಾಪಾರಕ್ಕಾಗಿ ಅಂದರೆ ಮಾರುವುದಕ್ಕಾಗಿ ಶ್ರಮಿಕರ ಕೈಲಿ ತಯಾರುಮಾಡಿಸುವಮತ್ತು ಹಣದ ಮೂಲಕ ಸರಕುಗಳನ್ನು ವಿನಿಮಯ ಮಾಡಿಕೊಳ್ಳುವ ಕ್ರಮವುಅಸ್ವಾಭಾವಿಕವಾದುದು. ಹಾಗೆಯೇ ತನ್ನ ಸ್ವಂತ ಶ್ರಮದಿಂದ ವಸ್ತುಗಳನ್ನು ತಯಾರಿಸಿಕೊಳ್ಳುವುದು ಸ್ವಾಭಾವಿಕವಾದುದು. ಆದರೆ ತನ್ನ ಸ್ವಂತ ಶ್ರಮಹಾಕದೆ, ಇತರರ ಶ್ರಮವನ್ನು ಶೋಷಿಸಿ ಬದುಕುವುದು ಅಸ್ವಾಭಾವಿಕವಾದುದು. ವಸ್ತುಗಳನ್ನು ಜೀವನಾಧಾರಕ್ಕೆ ಪೂರಕವಾಗಿ ಸಂಗ್ರಹಿಸುವುದು ಸ್ವಾಭಾವಿಕವಾದುದು ಮತ್ತು ಅದಕ್ಕೂ ಸ್ವಾಭಾವಿಕವಾದ ಮಿತಿಯಿದೆ. ಆದರೆ ವಸ್ತುಗಳನ್ನು ತಯಾರಿಸದೆಯೇ, ಅಥವಾ ತಯಾರಿಸುವ ಮೊದಲೇ ಅವುಗಳ ವಿನಿಮಯ ಮೌಲ್ಯವನ್ನು ಹಣದ ರೂಪಕ್ಕಿಳಿಸಿ ಹಣವನ್ನು ಸಂಗ್ರಹಿಸುವುದು ಅಸ್ವಾಭಾವಿಕವಾದುದು. ಹಣದ ಸಂಗ್ರಹಣೆಗೆ ಮಿತಿಯಿಲ್ಲ. ಅದು ಅಸ್ವಾಭಾವಿಕ ಮತ್ತು ಅತಾರ್ಕಿಕ ಮಾತ್ರವಲ್ಲ, ಮಿತಿ ಮೀರಿದ ಸ್ಥಿತಿಯಲ್ಲಿ ಸಮಾಜದ ಅನಾರೋಗ್ಯಕರ ಸ್ಥಿತಿಯೂ ಹೌದು.

ವಸ್ತುಗಳನ್ನು ಬಳಸುವಾಗಅದಕ್ಕೊಂದು ಸ್ವಾಭಾವಿಕ ಮಿತಿಯಿದೆ. ಅದಕ್ಕೂ ಬಂಡವಾಳಶಾಹಿ ವ್ಯವಸ್ಥೆಯು ನಿರ್ವಚಿಸುವ ಮಾನಸಿಕ ಆರೋಗ್ಯ ಎಂಬುದಕ್ಕೂ ಸಂಬಂಧವಿದೆ. ಮನುಷ್ಯರ ಜೀವನಾಧಾರ ಅಗತ್ಯಗಳ ಅಳತೆಗೋಲನ್ನು ಬಳಸಿ ನೋಡಿದರೆ ಇದು ಸ್ಪಷ್ಟವಾಗುತ್ತದೆ. ಎಂಥಾ ಹೊಟ್ಟೆಬಾಕನೂ ಒಂದುಸಲಕ್ಕೆ ತನ್ನ ಹೊಟ್ಟೆತುಂಬುವಷ್ಟು ತಿನ್ನಬಹುದು. ಆದರೆ, ಎಷ್ಟು ತಿಂದರೂ ಹೊಟ್ಟೆ ತುಂಬದಿದ್ದರೆ, ಅದು ಅನಾರೋಗ್ಯ ಸ್ಥಿತಿ. ಮಾನಸಿಕ ಅಸ್ವಸ್ಥತೆ. ತುಂಬಾ ಮೆತ್ತನೆಯ ಹಾಸಿಗೆ ಬೇಕೆಂದು ಎರಡು–ಮೂರು ಅಡಿ ಎತ್ತರದ ಹಾಸಿಗೆಯ ಮೇಲೆ ಮಲಗಿ ನಿದ್ರಿಸಿದರೆ ಅದು ಆರೋಗ್ಯ ಸ್ಥಿತಿ. ವಿಶ್ವದಲ್ಲೇ ಅತ್ಯಂತ ದೊಡ್ಡ ಹಾಸಿಗೆ ಬೇಕೆಂದು ಟನ್‌ಗಟ್ಟಲೆ ಮೆತ್ತೆಯನ್ನು ಬಳಸಿ ಹಾಸಿಗೆಯ ಗುಡ್ಡದಮೇಲೆ ಮಲಗಿದರೆ, ಅಥವಾ ಲಕ್ಷಾಂತರ ರೂ ಬೆಲೆಕೊಟ್ಟು ತಂದ ಹಾಸಿಗೆಯ ಮೇಲೆ ಮಲಗಿದರೆ, ನಿದ್ದೆ ಬರಲಿ, ಬಿಡಲಿ ಅದು ಅಸ್ವಸ್ಥ–ಅನಾರೋಗ್ಯಸ್ಥಿತಿಯೇ. ಹತ್ತಿ ಸಾಗಾಣಿಕೆಯ ಕಾರ್ಮಿಕರು ಸರಕು ವಾಹನಗಳ ಹತ್ತಿ ಮೂಟೆಗಳ ಮೇಲೆಯೇ ಅನಿವಾರ್ಯವಾಗಿ ಮಲಗಿ ನಿದ್ರಿಸಬಹುದು. ಬಡವರು ಗತಿಯಿಲ್ಲದೆ ಚಾಪೆಯಮೇಲೆ ಮಲಗಬಹುದು. ಭಿಕ್ಷುಕರು ಹರಕು ಗೋಣೀಚೀಲದ ಮೇಲೆ, ವೃತ್ತಪತ್ರಿಕೆಗಳ ಮೇಲೆ ಮಲಗಬಹುದು. ಅವರದ್ದು ಅನಿವಾರ್ಯಸ್ಥಿತಿಯೇ ಹೊರತು, ಮಾನಸಿಕ ಅನಾರೋಗ್ಯದ ಸ್ಥಿತಿಯಲ್ಲ. ಹಾಗೆಯೇ ಒಂದು ಕುಟುಂಬದಲ್ಲಿ ಅನೇಕ ಮಂದಿ ಸದಸ್ಯರಿರುವ ಭವನದಲ್ಲಿ ಅವರಿಗೆ ಅನುಗುಣವಾದ ಸೌಲಭ್ಯಗಳೂ, ಅಂತಸ್ತುಗಳೂ, ಕೊಠಡಿಗಳೂ ಇದ್ದರೆ ಅದೇನೂ ಮನೆಯೊಡೆಯನ ಅಸ್ವಸ್ಥತೆಯ ಲಕ್ಷಣವಲ್ಲ. ಆದರೆ ಸಾವಿರಾರು ಜೋಪಡಿಗಳ ಮಧ್ಯೆ ನೂರಾರು ಅಂತಸ್ತಿನ ಭವನದಲ್ಲಿ ನೂರಾರು ಸೇವಕರೊಂದಿಗೆ ವಾಸಿಸುವ ಬಂಡವಳಿಗರ ಮನಸ್ಸಿನ ಸ್ವಾಸ್ಥ್ಯ ಎಂಥದ್ದು? ಬಂಡವಾಳ ವ್ಯವಸ್ಥೆಯಲ್ಲಿ ಮಾತ್ರ ಇಂಥ ಅಸ್ವಸ್ಥತೆ ಸಾಧ್ಯ.

ಸಾಮಾನ್ಯ ಮನುಷ್ಯನೊಬ್ಬನ ಆದಾಯವು ಅವನ ಅಗತ್ಯಗಳನ್ನು ಪೂರೈಸಲು ಸಾಕಾಗುವಷ್ಟು ಇರಬೇಕಾದ್ದು ಒಂದು ಅಪೇಕ್ಷಿತವಾದ ಸಾಮಾನ್ಯ ವಸ್ತುಸ್ಥಿತಿ. ಕೆಳಮಧ್ಯಮವರ್ಗ ಮತ್ತು ಮಧ್ಯಮವರ್ಗದ ಕುಟುಂಬದ ಆದಾಯವು ಅವರ ಕುಟುಂಬಗಳ ಅವಶ್ಯಕತೆಗಳಿಗಿಂತ ಎಷ್ಟೋಪಟ್ಟು ಹೆಚ್ಚಿಗೆ ಇದ್ದರೂ ಯಾರೂ ಅವರನ್ನು ಅಸ್ವಸ್ಥ ಮನಸ್ಸಿನವರು ಎನ್ನುವುದಿಲ್ಲ. ವಸ್ತುಗಳ ತಯಾರಿಕೆಯಲ್ಲಿ ಒಂದು ಸರಾಸರಿ ಸಾಮಾಜಿಕ ಶ್ರಮಕಾಲವಿರುವಂತೆ, ಅದನ್ನಾಧರಿಸಿದ ಮೌಲ್ಯಕ್ಕೂ, ಮಾರುಕಟ್ಟೆಯ ಬೆಲೆಯಲ್ಲಿಯೂ ಒಂದು ಸರಾಸರಿ ಸಾಮಾಜಿಕ ಮಿತಿಯ ನಿರ್ಣಯ ಸಾಧ್ಯ. ಅದರಿಂದಾಗಿ ವ್ಯಕ್ತಿಯ ಸ್ವಸ್ಥತೆ ಅಥವಾ ಅಸ್ವಸ್ಥತೆಯನ್ನು ಅಂದಾಜುಮಾಡಬಹುದು. ಅದೇ ರೀತಿ, ಅಗತ್ಯಕ್ಕೆ ಬೇಕಾದಷ್ಟನ್ನು ಖರ್ಚುಮಾಡಿ ಉಳಿದ ಹಣವನ್ನು ಭವಿತವ್ಯದ ನಿಧಿಯನ್ನಾಗಿ ಕೂಡಿಟ್ಟರೆ ಅದನ್ನು ಜಾಣತನ ಎನ್ನುತ್ತಾರೆಯೇ ಹೊರತು ಮಾನಸಿಕ ಅಸ್ವಸ್ಥತೆ ಎನ್ನುವುದಿಲ್ಲ. ಆದರೆ ಒಬ್ಬ ಬಂಡವಳಿಗನ ಆದಾಯ ಮತ್ತು ಖರ್ಚುಗಳು ಇಂಥ ಯಾವ ಮಿತಿಗೂ ಒಳಪಡದೆ, ಕೋಟ್ಯಾಧೀಶನಾಗಿದ್ದರೂ, ಕೋಟಿಗಟ್ಟಲೆ ಹಣವನ್ನು ವಿವಿಧ ರೂಪಗಳಲ್ಲಿ, ವಿವಿಧ ಕಡೆಗಳಲ್ಲಿ, ಕಾನೂನು ಸಮ್ಮತವಾಗಿ ಅಥವಾ ಕಪ್ಪುಹಣವನ್ನಾಗಿ ಕೂಡಿಟ್ಟರೆ ಅದರ ಹಿಂದಿರುವ ಮನಸ್ಥಿತಿಯನ್ನು ಆರೋಗ್ಯಕರ ಮನಸ್ಥಿತಿ ಎನ್ನಬಹುದೆ? ಆಸ್ತಿಯ ವಿಷಯದಲ್ಲಿಯೂ ಇಂಥದೇ ಮನಸ್ಥಿತಿ ಇದ್ದರೆ ಅದು ಸ್ವಸ್ಥ ಮನಸ್ಸಿನ ಲಕ್ಷಣವೆ? ಒಬ್ಬ ಉದ್ಯಮಿಯು ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಹೆಸರು ಪಡೆಯಲು, ಅಥವಾ ಇರುವ ಮಟ್ಟದಿಂದ ಮೇಲಕ್ಕೇರಲು, ಅಥವಾ ನಿರುದ್ದೇಶದಿಂದ ಮತ್ತಷ್ಟು ಕೋಟಿಗಳನ್ನು ಸಂಪಾದಿಸಲು ಯತ್ನಿಸುತ್ತಿದ್ದರೆ ಅಂಥ ಬಂಡವಳಿಗನ, ಅಥವಾ ಬಂಡವಾಳವಾದೀ ವ್ಯವಸ್ಥೆಯು ಅಸ್ವಸ್ಥ–ರೋಗಗ್ರಸ್ತ ಎನ್ನದೆ ಇರಲಾಗುತ್ತದೆಯೇ?

ಬಂಡವಾಳ ಮತ್ತು ಬಂಡವಳಿಗರ ಅಸ್ವಸ್ಥ, ರೋಗಗ್ರಸ್ತ ಸ್ಥಿತಿಯನ್ನು ವಿವರಿಸಲು ಇಂಥ ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ.

ಒಟ್ಟಿನಲ್ಲಿ ಅಸ್ವಸ್ಥ ವ್ಯವಸ್ಥೆಯಾದ ಬಂಡವಾಳಶಾಹಿಯ ವ್ಯಕ್ತಿರೂಪಗಳಾದ ಅಸ್ವಸ್ಥ ಮನಸ್ಸಿನ ಬಂಡವಳಿಗರ ಜೀವನದೃಷ್ಟಿಯನ್ನು ಸ್ವಸ್ಥ, ವೈಚಾರಿಕ, ತಾರ್ಕಿಕ ಮತ್ತು ಆರೋಗ್ಯಕರ ಮನಸ್ಸಿನ ಸಮಾಜವಾದೀ ಜೀವನದೃಷ್ಟಿಗೆ ಉಪದೇಶಗಳಿಂದ, ಹೃದಯ ಪರಿವರ್ತನೆಯಿಂದ, ಬದಲಿಸುವುದು ಸಾಧ್ಯವೆ? ಸಾಧ್ಯ ಎಂದಾದರೆ ಹಾಗೆ ಮಾಡುವುದು ಎಲ್ಲ ದೃಷ್ಟಿಯಿಂದಲೂ ಒಳ್ಳೆಯದೆ. ಹಾಗಿಲ್ಲದಿದ್ದರೆ ಮಾರ್ಕ್ಸ್ 170 ವರ್ಷಗಳ ಹಿಂದೆಯೇ ಹೇಳಿದಂತೆ ಬಂಡವಾಳಶಾಹಿಯನ್ನು ಕೆಳಗಿಳಿಸಿ ಅಧಿಕಾರ ಪಡೆಯುವುದೊಂದೇ ಸಮಾಜವಾದದಲ್ಲಿ ನಂಬಿಕೆ ಇರುವ ಎಲ್ಲರಿಗೂ ಈಗ ಉಳಿದಿರುವ ದಾರಿ.

ಬಂಡವಾಳಶಾಹಿ ವ್ಯವಸ್ಥೆಯು, ಈ ಡಿಜಿಟಲ್ ಯುಗದಲ್ಲಿ ಅಧಿಕಾರದ ಕೇಂದ್ರೀಕರಣ ಮಾತ್ರವಲ್ಲ, ಬದುಕಿಗೆ ಸಂಬಂಧಿಸಿದ ಎಲ್ಲವನ್ನೂ ಕೇಂದ್ರೀಕರಿಸುತ್ತಾ ತನ್ನ ಬಿಗಿಮುಷ್ಟಿಯಲ್ಲಿ ಇರಿಸಿಕೊಳ್ಳಲು ಹವಣಿಸುತ್ತಿದೆ. 'ಈ ವಿಶ್ವವು ಪರಿಸರನಾಶ, ಭೂತಾಪದ ಹೆಚ್ಚಳ ಮುಂತಾದ ಕಾರಣಗಳಿಂದಾಗಿ ಮೊದಲು ನಾಶವಾಗುತ್ತದೆಯೋ ಅಥವಾ ಬಂಡವಾಳಶಾಹಿ ವ್ಯವಸ್ಥೆಯಿಂದಾಗಿ ಮೊದಲು ನಾಶವಾಗುತ್ತದೆಯೋ ಹೇಳಲಾಗದು' ಎಂಬ ಸ್ಟೀಫನ್ ಹಾಕಿನ್ಸ್ ಮಾತು ಬಂಡವಾಳಶಾಹಿ ವ್ಯವಸ್ಥೆಯು ತಲುಪಿರುವ ಗಂಭೀರ ರೋಗ ಸ್ಥಿತಿಯನ್ನು ಬಿಂಬಿಸುತ್ತದೆ.

ಇದನ್ನು ನಮ್ಮ ಸಹಜೀವಿಗಳಿಗೆ ಜರೂರಾಗಿ ಅರ್ಥಮಾಡಿಸುವ ಹೊಣೆ ನಮ್ಮೆಲ್ಲರ ಮೇಲೆ ಇದೆ. ●

ಬಲಾಢ್ಯ ಪರ ಇವೆ. ಇವೆಲ್ಲವೂ ಅನುಕೂಲಸ್ಥರ ಪರ ಇರುವಾಗ ಶಿಕ್ಷಣ ನೀತಿ ಬಡವರ ಪರ ಇರುತ್ತದೆಯೆಂದು ನಂಬುವುದು ಮೂರ್ಖತನ. ಇವರಿಗೆ ಅಧಿಕಾರಸ್ಥ ಪ್ರತಿನಿಧಿಗಳ ಹಿನ್ನೆಲೆಯನ್ನು ಪ್ರಶ್ನಿಸದೆ ಅವರು ಹೇಳಿದನ್ನು ಚಾಚೂ ತಪ್ಪದೆ ವಿನಯದಿಂದ ತಲೆಬಾಗಿ ಮೂರು ಕಾಸಿಗೆ ದುಡಿಯುವ ಒಂದು ವರ್ಗ ಬೇಕಾಗಿದೆ. ಇಂಥಹ ವರ್ಗವನ್ನು ಸೃಷ್ಟಿಸುವ ಶಿಕ್ಷಣ ನೀತಿಯನ್ನು ಇವರು ಜಾರಿಗೆ ತರುತ್ತಾರೆ ಹೊರತು ಇವರ ಅಧಿಕಾರ ಮೂಲವನ್ನೇ ಪ್ರಶ್ನಿಸುವ ವಿದ್ಯಾರ್ಥಿಗಳನ್ನು ಸೃಷ್ಟಿಸುವ ಶಿಕ್ಷಣ ನೀತಿಯನ್ನು ಜಾರಿಗೆ ತರುವುದಿಲ್ಲ.

ಸಮರೋಪ

ಈ ಪಾಲಿಸಿ ಕಾನೂನು ರೂಪದಲ್ಲಿ ಬಂದಾಗ ಹೊಸ ಶಿಕ್ಷಣ ನೀತಿ ಯಾವ ದಿಶೆಯಲ್ಲಿ ಸಾಗಬಹುದೆನ್ನುವ ಖಚಿತ ಚಿತ್ರಣ ಸಿಗಬಹುದು. ಈಗಂತೂ ಈ ಪಾಲಿಸಿ ಬಗ್ಗೆ ಒಟ್ಟಾರೆಯಾಗಿ ಹೇಳುವುದಾದರೆ ಹೊಸ ಶಿಕ್ಷಣ ನೀತಿಯಲ್ಲಿ ಎಲ್ಲವೂ ಇದೆ ಮತ್ತು ಏನೂ ಇಲ್ಲ ಎನ್ನುವ ಸ್ಥಿತಿ ಇದೆ. ವರ್ತಮಾನದ ಶಿಕ್ಷಣ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಹೊಸ ಶಿಕ್ಷಣ ನೀಡುವ ಪರಿಹಾರಗಳು ಸಮಸ್ಯೆಯನ್ನು ಪರಿಹರಿಸುವ ಬದಲು ಇನ್ನೂ ಸಂಕೀರ್ಣಗೊಳಿಸಬಹುದು. ನಮ್ಮ ಅಭಿವೃದ್ಧಿ ರಾಜಕಾರಣ ಸಂಪೂರ್ಣ ಬಲಾಢ್ಯರ ಸ್ವಾಧೀನ ಇದೆ. ಇವರು ಜಾರಿಗ ತರುವ ಬಹುತೇಕ ಪಾಲಿಸಿಗಳು ಬಡತನವನ್ನು ಮತ್ತು ತಳಸ್ತರವನ್ನು ಸೃಷ್ಟಿಸುತ್ತಿವೆ. ಹೀಗಿರುವಾಗ ಶಿಕ್ಷಣ ನೀತಿ ಬಲಾಢ್ಯಪರ ಅಭಿವೃದ್ಧಿ ರಾಜಕಾರಣಕ್ಕೆ ವಿರುದ್ಧವಾಗಿರುತ್ತದೆ ಎಂದು ಗ್ರಹಿಸುವುದು ಅತಾರ್ಕಿಕವಾಗುತ್ತದೆ. ●

JANASHAKTHI KANNADA VARA PATRIKE August 31-September 6, 2020 Price: Rs. 10/- Date of Publication: 28 August 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಆಗಸ್ಟ್ ಪ್ರತಿಭಟನಾ ವಾರಾಚರಣೆ ಜನವಿರೋಧಿ ನಡೆಗಳ ವಿರುದ್ಧ ದೇಶವ್ಯಾಪಿ ಪ್ರತಿಭಟನೆಗಳ ಮಹಾಪೂರ...

ಪುಟ 8 ರಿಂದ



ವರ್ಗಾಯಿಸಿ ಕೈತೊಳೆದುಕೊಂಡಿದೆ ಎಂದು ಕೇಂದ್ರ ಸರ್ಕಾರದದ ವಿರುದ್ಧ ಆರೋಪಿಸಿದರು.

ಕೊರೊನಾ ಸಂಕಷ್ಟ ಆರಂಭವಾಗುವುದಕ್ಕಿತಲೂ ಮೊದಲೇ ಕೇಂದ್ರದ ಆರ್ಥಿಕ ನೀತಿಗಳಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿ ಅಧೋಗತಿಗೆ ಜಾರತೊಡಗಿತ್ತು. ಕೊರೊನಾ ಸಂಕಷ್ಟ ಗಾಯದ ಮೇಲೆ ಬರೆ ಎಳೆದಂತೆ ಇನ್ನಷ್ಟು ಭೀಕರಗೊಳಿಸಿದೆ ಇಂತಹ ಸನ್ನಿವೇಶದಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಿ ಸಾರ್ವಜನಿಕ ರಂಗವನ್ನು ಬಲಪಡಿಸಿ ಹೊಸ ಉದ್ಯೋಗಗಳನ್ನು ಸೃಷ್ಟಿಸಿ ಅವರ ಆದಾಯವನ್ನು ಹೆಚ್ಚಿಸಿ ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸಬಹುದಾಗಿತ್ತು ಆದರೆ ಮೋದಿ ಸರ್ಕಾರ ರೈಲ್ವೆ ವಿದ್ಯುತ್, ಬಿಎಸ್‌ಎನ್‌ಎಲ್, ಕಲ್ಲಿದ್ದಲು, ಪೆಟ್ರೋಲಿಯಂ, ಬ್ಯಾಂಕಿಗ್ ವಿಮೆ ಮೊದಲಾದ ಹಣಕಾಸು ವಲಯವನ್ನು ಖಾಸಗೀಕರಣ ಮಾಡಿ ದೇಶದ ಆಸ್ತಿಯನ್ನು ಲೂಟಿ ಮಾಡಲು ಲಾಭಕೋರ ಕಾರ್ಪೋರೆಟ್ ಕಂಪನಿಗಳಿಗೆ ಮಾರಾಟ ಮಾಡುತ್ತಿದೆ.

ಕೋವಿಡ್ 19ರ ಹಾವಳಿ ಮತ್ತು ಅದು ಸೃಷ್ಟಿಸಿರುವ ಆತಂಕಕ್ಕೆ ಒಳಗಾಗಿ ಕಂಗೆಟ್ಟು ದೇಶದ ಜನಸಾಮಾನ್ಯರಿಗೆ ಅಗತ್ಯ ಆರ್ಥಿಕ ನೆರವು ಮಾನವೀಯ ನೆರವನ್ನು ಒದಗಿಸಬೇಕಾದ ಸರ್ಕಾರ ಗಾಯದ ಮೇಲೆ ಬರೆ ಎಳೆದಂತೆ ಜನರ ಮೇಲೆ ಹೊರಲಾಗದ ಹೊರೆಗಳನ್ನು ಹೇರುತ್ತಿದೆ ಇದನ್ನು ಖಂಡಿಸಿ ಸಿಪಿಐಎಂ ವತಿಯಿಂದ ದೇಶಾದ್ಯಂತ ಪ್ರತಿಭಟನಾ ಸಪ್ತಾಹ ಆಚರಿಸಲಾಗುತ್ತಿದೆ ಎಂದು ಸಿಪಿಐ(ಎಂ) ನ ಮುಖಂಡರಾದ ಹೆಚ್.ಕೆ.ತಿಮ್ಮೇಗೌಡ ತಿಳಿಸಿದರು.

ಕೋವಿಡ್ ಸಂಕಷ್ಟದಲ್ಲಿರುವವರಿಗೆ ನಗದು ಪರಿಹಾರ, ಆಹಾರ ಸಾಮಗ್ರಿ ,ನಿವೇಶನ ರಹಿತರಿಗೆ ನಿವೇಶನ, ಬಿದಿಬದಿ ವ್ಯಾಪಾರಸ್ಥರಿಗೆ ಸಾಲ ಸೌಲಭ್ಯಗಳನ್ನು ಒದಗಿಸಲು ಕಿರುಕುಳ ತಪ್ಪಿಸಿ ಸೂಕ್ತ ರಕ್ಷಣೆಗಾಗಿ ಸ್ತ್ರೀ ಶಕ್ತಿ ಸ್ವ ಸಹಾಯ ಸಂಘಗಳ ಬಡ್ಡಿ ಸಮೇತ ಸಾಲವನ್ನು ಒಳಗೊಂಡಂತೆ 17 ಬೇಡಿಕೆಗಳನ್ನು ಹೀಡೆರಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಈ ಪ್ರತಿಭಟನೆಯಲ್ಲಿ ಗೌರಮ್ಮ, ನಂಜಮಣಿ, ಕೃಷ್ಣ, ಹರೀಶ್, ಶಂಕರ್, ಖಾಲಿಕ್ ಮುಂತಾದವರು ಭಾಗವಹಿಸಿದರು.

ಯಾದಗಿರಿ:

ಬಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವಾರಚರಣೆ ಪ್ರಚಾರಾಂದೋಲನ 2ನೇ ದಿನ ಗುಂಡಳ್ಳಿ ಗ್ರಾಮ ಕೂಲಿಕಾರರು 5 ಗಂಟೆಗೆ ಕೆಲಸದ ಮೇಲೆ ಸಭೆಯು ನಡೆದಿತ್ತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ನಿತ್ಯಾನಂದಸ್ವಾಮಿ ಮಾತನಾಡುತ್ತಾ ಕೇಂದ್ರ ಸರ್ಕಾರ ಸಾರ್ವಜನಿಕ ಉದ್ದಿಮೆಗಳು ಖಾಸಗೀಕರಣ ಮಾಡುತ್ತಿದ್ದು ರಾಜ್ಯ ಬಿಜೆಪಿ ಸರ್ಕಾರ, ಭೂಸುಧಾರಣೆ ಕಾನೂನು ತಿದ್ದುಪಡಿ, ವಿದ್ಯುತ್, ಎಪಿಎಂಸಿ ಕಾಯ್ದೆ ತಂದು ರೈತರನ್ನು ದಿವಾಳಿ ಮಾಡಲು ಹೊರಟಿದ್ದು ಎಂದು ಆರೋಪಿಸಿದ್ದು (ಆಕ್ರೋಶ ವ್ಯಕ್ತ) ವ್ಯಕ್ತ ಪಡಿಸಿದರು.

ಜಿಲ್ಲಾ ಕಾರ್ಯದರ್ಶಿ ದಾವಲಸಾಬ್ ನದಾಫ್ ಗುಂಡಳ್ಳಿ ಗ್ರಾಮದ ಬಾಬು, ಮೈಬುಸಾಬ, ಸಾಲರಸಾಬ ಭಾಗವಹಿಸಿದ್ದರು. ರಾಜ್ಯದ ಎಲ್ಲಾ ಕಡೆಗಳಲ್ಲೂ ವಾರಾಚರಣೆಯನ್ನು ಮಾಡಲಾಗಿದೆ.























JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**